ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿ

# ವನವಾಣಿ

KCO Brindavana is certified 501(3) (c) charity organization and promotes Kannada & Karnataka culture in New Jersey, USA www.brindavana.org

## ೧೪ನೇ ವಾರ್ಷಿಕೋತ್ಸವ



# BEEKAY FINANCIAL SERVICES

## BEST WISHES FROM
## BEN KANTHARAJU



*Our goal is to provide quality service*

Beekay Financial Services is a full service firm providing Insurance and Financial Services.

**Areas of Financial Services**
- Lifestyle Protection – Term life, Whole life, Universal & Variable life insurance
- Retirement Planning – IRA,Roth IRA, SEP IRA, 401(k)
- Education Planning.- College 529 Plans

**Area of Insurance Services**
- Personal Insurance – Auto, Home, Rental& Umbrella
- Individual Insurance –Health, Dental & Vision plans
- Group Insurance – Health, Dental & Vision plans
- International Travel Medical Insurance
- Medicare Supplement & Advantage plans
- Disability and  Long Term Care Insurance

50 Cragwood Road,
#321
South Plainfield, NJ, 07080
Phone: 908-315-3956
Fax: 908-315-3954
Mobile: 732-672-9844
www.beekayonline.com
Email: info@beekayonline.com

ನೋವಿದೆ ಜೀವನದಲ್ಲಿ ಆದರೆ ಅದನ್ನು ನಾನು ಸಮಸ್ಯೆ ಎಂದು ಭಾವಿಸಿಲ್ಲ
• ಮಾಸ್ತಿ

# ನಾವು ನಡೆದು ಬಂದ ದಾರಿ... ಕನ್ನಡದ ಕರ್ಮಯೋಗಿಯ ನಾಡಿನಿಂದ ಮನುಕುಲದ ಸಂಶೋಧಕನ ಅಂಗಳಕ್ಕೆ...


ಕರ್ನಾಟಕದ ಮುದ್ದೇನ ಹಳ್ಳಿಯೆಂಬ ಸಣ್ಣ ಹಳ್ಳಿಯಲ್ಲಿ ಜನಿಸಿ, ರಸ್ತೆ ದೀಪದ ಬೆಳಕಿನಲ್ಲಿ ಓದಿ, ರಾಜ್ಯದ ಮುಖ್ಯ ಇಂಜಿನಿಯರಾಗಿ, ದಿವಾನರಾಗಿ, ಸತತ, ರಾಷ್ಟ್ರದ, ರಾಜ್ಯದ ಏಳಿಗೆಗಾಗಿ ದುಡಿದು, ತನ್ನ ಹಲವು ಹತ್ತು ಯೋಜನೆಗಳಿಂದ ಜನರ ಜೀವನವನ್ನು ಸುಂದರ ಗೊಳಿಸಿದವರು ಕನ್ನಡದ ಕರ್ಮಯೋಗಿ, ಭಾರತ ರತ್ನ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು. ತನ್ನ ಜೀವಿತವಿಡೀ ಹೊಸತನ್ನು ಆವಿಷ್ಕರಿಸುವ, ವಿಜ್ಞಾನದ ಸಂಶೋಧನೆಗಳನ್ನು ಮನುಕುಲದ ಒಳಿತಿಗೆ ಮುಡಿಪಾಗಿಡಲು ಪಣತೊಟ್ಟು, ಛಲಬಿಡದ ತ್ರಿವಿಕ್ರಮನಂತೆ ನೂರಾರು ಸಂಶೋಧನೆಗಳನ್ನು ತನ್ನ ನ್ಯೂ ಜೆರ್ಸಿ ಸಂಶೋಧನಾಲಯದ ಮೂಲೆಯಲ್ಲಿ ಆವಿಷ್ಕರಿಸಿದ, ಸಂಶೋಧಕ, ವಿಜ್ಞಾನಿ, ಥಾಮಸ್ ಆಲ್ವ ಎಡಿಸನ್. ಎಂತಹ ಸಾಮ್ಯ !!.....ನೆನೆಸಿಕೊಂಡರೆ ನಮ್ರತೆಯಿಂದ, ಅಭಿಮಾನದಿಂದ ಮನಸ್ಸು ತುಂಬಿ ಬರದಿರದು. ಇಂತಹ ಅಪ್ರತಿಮ ಸಾಧಕರ ಜೀವನದಲ್ಲಿ ಅದೆಂತಹ ಹೋಲಿಕೆ....ಅವರು ಮನುಕುಲಕ್ಕೆ ನೀಡಿದ ಕೊಡುಗೆ ಒಂದಾದರೆ, ಅವರನ್ನು ಕೂಡಿಸುತ್ತಿರುವ, ನಮ್ಮನ್ನು ಅವರೊಂದಿಗೆ ಒಂದಾಗಿಸುತ್ತಿರುವ ಕೊಂಡಿಯೊಂದು ಯಾವುದು ಗೊತ್ತೇ?... "ನಾವು ನಡೆದು ಬಂದ ದಾರಿ" .. ಈ ದಾರಿಗೊಂದು ನಮ್ಮ ಭಕ್ತಿ ಪೂರ್ವಕ ನಮನ..

ನಮ್ಮ ಜನ್ಮ ಭೂಮಿ ಕರ್ನಾಟಕ. ಅಲ್ಲಿ ನಮ್ಮ ವಿದ್ಯಾಭ್ಯಾಸ. ಕನ್ನಡ ನಮ್ಮ ಮಾತೃ ಭಾಷೆ. ಅಮೇರಿಕಾದ ನ್ಯೂ ಜೆರ್ಸಿ ನಮ್ಮ ಕರ್ಮ ಭೂಮಿ. ಈ ಇಬ್ಬರು ಜೀನಿಯಸ್ ಗಳು ನಡೆದಾಡಿದ ನಾಡಿನಲ್ಲಿ ನಮ್ಮ ನಡೆದಾಟ. ಅವರು ಕುಡಿದ ನೀರು ನಮ್ಮ ಜೀವನಾಡಿ. ಅಂದು ಅವರು ಉಸಿರಾಡಿದ ಗಾಳಿ ಇಂದು ನಮ್ಮದಾಗಿದೆ. ಎಂತಹ ಹೆಮ್ಮೆಯ ವಿಷಯ!! ಈ ಇಬ್ಬರು ಸಾಧಕರ ಜೀವನ ನಮಗೊಂದು ಸ್ಪೂರ್ತಿಯಲ್ಲವೇ?...ಅವರ ಜೀವನ ನಮಗೆ ಮಾರ್ಗದರ್ಶನವಾದರೆ, ನಮ್ಮ ಮಕ್ಕಳಿಗೆ ಸ್ಪೂರ್ತಿದಾಯಕವಾದರೆ ಅದಕ್ಕಿಂತ ಇನ್ನೇನು ಬೇಕು?



" The way to build a nation is to build a good citizen. The majority of the citizens should be efficient, of good character and possess a reasonable high sense of duty.

**Sir. M. Vishveshvaraya**



" I have not failed. I've just found 10,000 ways that won't work. Genius is one percent inspiration and ninety-nine percent perspiration.

**Thomas Alva Edison**

ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಹುಟ್ಟಿದ್ದು ಸೆಪ್ಟೆಂಬರ್ 15, 1860. ರಂದು. ತಮ್ಮ 102 ವರ್ಷಗಳ ಜೀವಿತದಲ್ಲಿ ವಿಶ್ವೇಶ್ವರಯ್ಯನವರ ಸಾಧನೆ ಅಪಾರ. ಹಲವಾರು ಜವಾಬ್ದಾರಿಯುತ ಹುದ್ದೆಗಳ ಜೊತೆಗೆ, ಅಂದಿನ ಮೈಸೂರು ಸರಕಾರದ ಇಂಜಿನಿಯರಾಗಿ, ದಿವಾನರಾಗಿ ಸೇವೆ ಸಲ್ಲಿಸಿದ ಅವರ ಹಲವು ಹತ್ತು ಯೋಜನೆಗಳಲ್ಲಿ, ಕೃಷ್ಣರಾಜ ಸಾಗರ ಆಣೆಕಟ್ಟು, ಭದ್ರಾವತಿ ಉಕ್ಕಿನ ಕಾರ್ಖಾನೆ, ಮೈಸೂರಿನ ಗಂಧದೆಣ್ಣೆಯ ಕಾರ್ಖಾನೆ, ಮೈಸೂರು ಬ್ಯಾಂಕ್, ಮೈಸೂರು ವಿಶ್ವವಿದ್ಯಾಲಯ, ಶರಾವತಿ ವಿದ್ಯುತ್ ಕೇಂದ್ರ ಮುಂತಾದವು. ನಮ್ಮಲ್ಲಿ ಸಾಕಷ್ಟು ಜನ ಬೆಂಗಳೂರಿನ ಜಯನಗರದಲ್ಲಿ ವಾಸಿಸುತ್ತಿದ್ದೇವೆ. ಬೆಂಗಳೂರಿನ ಯುವಿಸಿಇ ಕಾಲೇಜ್‌ನಲ್ಲಿ ಓದಿದ್ದೇವೆ. ಇವು ವಿಶ್ವೇಶ್ವರಯ್ಯನವರ ಕೊಡುಗೆ ಮತ್ತು ಅವರ ದೂರ ದೃಷ್ಟಿಗೆ ಸಾಕ್ಷಿ. ತಮ್ಮ 102ನೆ ವಯಸ್ಸಿನವರೆಗೂ ದುಡಿದ ವಿಶ್ವೇಶ್ವರಯ್ಯನವರು ಶಿಸ್ತಿನ ಸರದಾರ. ಅವರ ಸಮಯ ಪ್ರಜ್ಞೆ, ಕಾರ್ಯ ಕ್ಷಮತೆ, ಎಲ್ಲರ ಮೆಚ್ಚುಗೆ ಗಳಿಸಿತ್ತು. ಭಾರತ, ತಾನು ಕಂಡ ಈ ಅಸಾಮಾನ್ಯ ಇಂಜಿನೀಯರನ ನೆನಪಿಗಾಗಿ, ಸೆಪ್ಟೆಂಬರ್ 15 ನೇ ದಿನವನ್ನ " ಇಂಜಿನೀಯರ್ಸ್ ಡೇ "ಎಂದು ಆಚರಿಸುತ್ತ ತನ್ನ ಕೃತಜ್ಞತೆ ಸಲ್ಲಿಸಿದೆ.

ಥಾಮಸ್ ಅಲ್ವ ಎಡಿಸನ್ ಎಂದರೆ ಎಲ್ಲರ ಕಣ್ಣ ಮುಂದೆ ನಿಲ್ಲುವುದು ವಿದ್ಯುತ್ ಬಲ್ಬ್ ಗಳು. ಒಂದು ಕ್ಷಣ ಜಗತ್ತಿನಲ್ಲಿ ವಿದ್ಯುತ್ ಬಲ್ಬ್ ಗಳಿಲ್ಲದ ರಾತ್ರಿಗಳನ್ನ ಹೇಗೆ ಕಳೆದೇವು .. ಯೋಚಿಸಿ...ಊಹಿಸಿಲೂ ಅಸಾಧ್ಯ. ಥಾಮಸ್ ಆಲ್ವ ಎಡಿಸನ್ ಹುಟ್ಟಿದ್ದು ಫೆಬ್ರವರಿ 11, 1846 ರಂದು. ಎಡಿಸನ್ ಹುಟ್ಟಿನಿಂದಲೂ ಒಬ್ಬ ವಿಜ್ಞಾನಿ, ಅನ್ವೇಷಕ. ಆತನ ಸಂಶೋಧನೆಗಳ ಪಟ್ಟಿಯಲ್ಲಿ ಎಲೆಕ್ಟ್ರಿಕ್ ಪವರ್ ಜನರೇಶನ್, ಫೋನೋಗ್ರಾಫಿ, ಮೋಶನ್ ಪಿಕ್ಚರ್ಸ್, ಮೆಟ್ರೋ ರೈಲ್ ಪ್ರಮುಖವಾದವು. ವಿದ್ಯುತ್ ಬಲ್ಬ್‌ಗೆ ಬೇಕಾದ ಸೂಕ್ತ ಫಿಲಮೆಂಟ್‌ಗಳನ್ನ ಕಂಡು ಹಿಡಿಯಲು ಎಡಿಸನ್ , ಸಾವಿರಾರು ವಿವಿಧ ತರಹದ ತಂತಿಗಳನ್ನು ತನ್ನ ಸಂಶೋಧನಾಲಯದಲ್ಲಿ ಸಿದ್ಧಪಡಿಸಿ ಪರೀಕ್ಷಿಸಿದ್ದ. ತನ್ನ ಜೀವಿತದ ಅವಧಿಯಲ್ಲಿ ಎಡಿಸನ್ ಗಳಿಸಿದ್ದ ಒಟ್ಟು ಪೇಟೆಂಟ ಗಳು 2332 .. ಅಬ್ಬಾ !! ಸಾಧನೆ ಎಂದರೆ ಹೀಗಿರಬೇಕು.

ಇಂತಹ ಸಾಧಕರಿಬ್ಬರುತಮ್ಮ ಜೀವನ ಕಳೆದ ಸ್ಥಳಗಳ ಜೊತೆ ಬೆರೆತಿರುವ ನಾವೇ ಅದೃಷ್ಟಶಾಲಿ ಗಳಲ್ಲವೇ? ಇವರ ಹಲವಾರು ಉತ್ತಮ ಗುಣಗಳು ನಮ್ಮವಾಗಲಿ. ನಮ್ಮ ಮಕ್ಕಳಿಗೆ ಎಡಿಸನ್ ಮತ್ತು ವಿಶ್ವೇಶ್ವರಯ್ಯನವರು ಮಾದರಿಯಾಗಲಿ. ಖಂಡಿತವಾಗಿ ನಮ್ಮ ಕನ್ನಡದ ಕಂದಮ್ಮಗಳು ಅವರಂತೆ ಸಾಧಿಸಿಯಾರು ಎನ್ನುವ ಗಾಢ ನಂಬಿಕೆ ನಮ್ಮದು.

ಬೃಂದಾವನ ಅಭಿಮಾನಿ ತಂಡದ ಪರವಾಗಿ, ಇಂದು ಈ ಸಾಧಕರಿಗೆ ನಮಿಸುತ್ತ, ನಾವು ನಡೆದು ಬಂದ ದಾರಿಯನ್ನು ನೆನೆಸುತ್ತ, ನಮ್ಮೆಲ್ಲರಿಗೂ ಇವರು ಸ್ಪೂರ್ತಿ ನೀಡಲಿ ಎಂದು ಕೇಳೋಣವಲ್ಲವೇ?

ಪರಿಕಲ್ಪನೆ: **ಡಾ ಅಶೋಕ್ ಕಟ್ಟಿಮನಿ, ಸತ್ಯ ಪ್ರಸಾದ್**
ಮುಖಪುಟ ವಿನ್ಯಾಸ: **ಸುರೇಶ್ ಎನ್.**

ಶಿವ ನಿನ್ನ ಪಾದವ ನಂಬಿದೆ, ಎನ್ನ ಕಾಯುವ ಭಾರ ನಿನ್ನದೆಂದೆ
• **ಜೋಳದ ರಾಶಿ ದೊಡ್ಡನಗೌಡ**







# ಬೃಂದಾವನ ಸಂಕೇತ ಗೀತೆ

ಕನ್ನಡದ ಕುಲದೇವಿ ಕಾಪಾಡು ಬಾ ತಾಯೇ
ಮುನ್ನಡೆಯ ಕನ್ನಡದ ದಾರಿ ದೀವಿಗೆ ನೀನೆ

ಪ್ರೇಮ ಕರುಣೆಯ ಕಲಿಸಿ ಶಾಂತಿ ಸಹನೆಯ ಬೆಳೆಸಿ
ಕಾಮಕ್ರೋಧವನಳಿಸಿ ಕಾಪಾಡು ತಾಯೇ
ಒಂದಾದ ದೇಶದಲಿ ಹೊಂದಿ ಬಾಳದ ಸುತರ
ಹೊಸಬೆಸುಗೆಯಲಿ ಬಿಗಿದು ಒಂದು ಗೂಡಿಸೆ ತಾಯೇ

ಯಾವೆಣ್ಣೆಯಾದರೂ ಬೆಳಗುವುದೇ ಗುರಿಯೆಂಬ
ತತ್ತ್ವವನು ನೀನೆತ್ತಿ ತೋರುಬಾ ತಾಯೇ
ಎದೆಯಾಂತರಾಳದಲಿ ಪುಟಿವ ಕಾರಂಜಿಯಲಿ
ಒಂದಾಗಿ ಕೂಗಲಿ ಕನ್ನಡಾ ಕನ್ನಡಾ...

• **ಜಿ.ವಿ.ಅಯ್ಯರ್**







# ಪರಿವಿಡಿ

ಸಂಪಾದಕೀಯ 4

ಸಂದೇಶ 6

ಅಭಿಮಾನಿ ತಂಡದ ಕಾರ್ಯ ಚಟುವಟಿಕೆಗಳು 9

ಲೇಖನಗಳು 25

ಯುವ ಬೃಂದಾವನ 51

ಚಿತ್ರ ಬೃಂದಾವನ 59

ಚಿತ್ರ ಸಂಪುಟ 67

ಪ್ರಾಯೋಜಕರು 71

# ಸಂಪಾದಕೀಯ

ವನವಾಣಿಯ ಈ ಆವೃತ್ತಿಯ ಓದುಗರೊಂದಿಗೆ ಎರಡು ಮಾತುಗಳು.

ನಿಮ್ಮೆಲ್ಲರಿಗೂ ಬೃಂದಾವನ ಕನ್ನಡ ಕೂಟದ "ಅಭಿಮಾನಿ" ತಂಡದ ಪ್ರೀತಿ ಪೂರ್ವಕ ಪ್ರಣಾಮಗಳು.

ತುಂಬು ಅಭಿಮಾನದಿಂದ ನ್ಯೂ ಜೆರ್ಸಿ ಬೃಂದಾವನ ಕನ್ನಡ ಕೂಟದ 14 ನೆಯ ವಾರ್ಷಿಕೋತ್ಸವದ ಈ ಸಂಚಿಕೆಯನ್ನು ನಿಮ್ಮ ಮುಂದಿಡುತ್ತಿದ್ದೇವೆ. ನಿಮಗೆಲ್ಲಾ ಇದು ಇಷ್ಟವಾಗಬಹುದೆಂಬ ನಂಬಿಕೆ ನಮ್ಮದು.

"ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ" ಎನ್ನುತ್ತಾನೆ ಆದಿ ಕವಿ ಪಂಪ. ಹತ್ತು ಹಲವು ಕಾರಣಗಳಿಂದ ಹುಟ್ಟು ದೇಶ ಬಿಟ್ಟು ಹತ್ತು ಸಾವಿರ ಮೈಲಿ ದೂರದಲ್ಲಿದ್ದು ಅಮೆರಿಕನ್ನಡಿಗರು ಎಂದೆನಿಸಿಕೊಂಡಿರುವ ನಮಗೆಲ್ಲ ಹುಟ್ಟಿ ಬೆಳೆದು ಬಂದ ಪರಿಸರದ ನೆನಪು ಸದಾ ಕಾಡುತ್ತಲೇ ಇರುತ್ತದೆ. "ಹತ್ತಾರು ಸಾವಿರ ಮೈಲು ದೂರದಲ್ಲಿರ್ಪರೂ ನೆನೆವುದೆನ್ನ ಮನಂ ಕರ್ನಾಟಕವಂ" ಎಂದರೆ ಅತಿಶಯೋಕ್ತಿಯಾಗಲಾರದು. ಕರ್ನಾಟಕ ಮತ್ತು ನ್ಯೂ ಜೆರ್ಸಿ ನಡುವಿನ ಕೊಂಡಿಯಾಗಿ ನಮ್ಮ ಬೃಂದಾವನ ಕನ್ನಡ ಕೂಟ ಕೆಲಸ ಮಾಡುತ್ತಿದೆ. ಈ ಎರಡು ರಾಜ್ಯಗಳ ಬೆಸುಗೆಯನ್ನು ಇಬ್ಬರು ಮಹಾನ್ ವ್ಯಕ್ತಿಗಳ ಚಿತ್ರದ ಮೂಲಕ ಸೂಚಿಸುವ ಮುಖಪುಟವನ್ನು ಈ ಸಂಚಿಕೆ ಹೊತ್ತು ತಂದಿದೆ. ಖ್ಯಾತ ತಂತ್ರಜ್ಞಾನಿ, ಮಹಾನ್ ಚಿಂತಕ ಸರ್. ಎಂ. ವಿಶ್ವೇಶ್ವರಯ್ಯ ಕರ್ನಾಟಕಕ್ಕೆ ಮಾತ್ರವಲ್ಲ, ಸಮಸ್ತ ಭಾರತಕ್ಕೆ "ರತ್ನ" ಎನಿಸಿಕೊಂಡವರು. ವಿದ್ಯುತ್ ಬಲ್ಬ್, ಚಲನಚಿತ್ರ ಹೀಗೆ ಹತ್ತಾರು ಆವಿಷ್ಕಾರಗಳನ್ನು ವಿಶ್ವಕ್ಕೆ ಕೊಟ್ಟ ಥಾಮಸ್ ಆಲ್ವ ಎಡಿಸನ್ ನ್ಯೂ ಜೆರ್ಸಿ ಹಾಗೂ ಅಮೆರಿಕೆಯ ಹೆಮ್ಮೆ.

ಹಲವು ನುರಿತ ಅನಿವಾಸಿ ಕನ್ನಡ ಬರಹಗಾರರ ಲೇಖನಗಳ ಜೊತೆಗೆ, ಇತರ ಹವ್ಯಾಸಿ ಬರಹಗಾರರು ಈ ಸಂಚಿಕೆಯನ್ನು ಶ್ರೀಮಂತಗೊಳಿಸಿದ್ದಾರೆ. ಈ ಎಲ್ಲಾ ಬರಹಗಾರರಿಗೆ ಸಂಪಾದಕ ಸಮಿತಿಯ ಕೃತಜ್ಞತಾ ಪೂರ್ವಕ ನಮನಗಳು.

ಬೃಂದಾವನ ಕೂಟದ 'ಕನ್ನಡ ಸಾಹಿತ್ಯ' ಸೇವೆ ಅಪಾರ. ಒಂದು ಕನ್ನಡ ಸಂಚಿಕೆಯನ್ನು ಹೊರ ತರುವುದು ಸುಲಭದ ಮಾತಲ್ಲ ಹೀಗಿರುವಾಗ ಸತತವಾಗಿ ನಾಲ್ಕು ವರುಷಗಳಿಂದ ನ್ಯೂ ಜೆರ್ಸಿಯ ಮನೆ ಮಾತಾಗಿರುವ ಕನ್ನಡ ದ್ವೈಮಾಸಿಕ ಪತ್ರಿಕೆ 'ಬೃಂದಾವನ ವಾಣಿ' ಯನ್ನು ಪ್ರಕಟಿಸುತ್ತಿದ್ದು, ಅದು ಕನ್ನಡ ಮನಸ್ಸುಗಳ ಸೇತುವೆಯಾಗಿರುವುದು ಅತ್ಯಂತ ಹೆಮ್ಮೆಯ ವಿಷಯ. ಕಳೆದ ಎರಡು ವರುಷಗಳಲ್ಲಿ ಬೃಂದಾವನದ ವತಿಯಿಂದ ನಡೆದ ಕಾರ್ಯಕ್ರಮಗಳ ವಿವರಗಳನ್ನು 'ಬೃಂದಾವನ ವಾಣಿ' ಯಿಂದ ಪಡೆದು ಇಲ್ಲಿ ದಾಖಲಿಸಲಾಗಿದೆ, ವರದಿ ರೂಪಿಸಿದ ಎಲ್ಲಾ ಲೇಖಕರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು.

ಕನ್ನಡದ ಮಣ್ಣಿನ ಸೊಗಡನ್ನು ನಮ್ಮ ಮುಂದಿನ ಪೀಳಿಗೆಗೆ ಬಿತ್ತರಿಸುವ ಪ್ರಯತ್ನದ ಫಲ "ಬೃಂದಾವನ ಕನ್ನಡ ಶಾಲೆ". ಸುಮಾರು ಮೂರು ವರ್ಷಗಳ ಹಿಂದೆ ನ್ಯೂ ಜೆರ್ಸಿಯ ಮೂರು ಸ್ಥಳಗಳಲ್ಲಿ ಕನ್ನಡ ಶಾಲೆಗಳು ಆರಂಭಗೊಂಡವು. ಒಂದು ನೂರಕ್ಕೂ ಹೆಚ್ಚಿನ ಮಕ್ಕಳು ಈ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ಈ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳ ಚಿತ್ರ, ಲೇಖನಗಳು ಸಂಚಿಕೆಯಲ್ಲಿವೆ.

ಸಂಚಿಕೆ ಹೊರತರಲು ಬೆನ್ನು ತಟ್ಟಿ ಪ್ರೋತ್ಸಾಹಿಸಿದ ಬೃಂದಾವನ ಅಭಿಮಾನಿ ತಂಡದ ಎಲ್ಲಾ ಸದಸ್ಯರಿಗೆ ನಮ್ಮ ಹೃತ್ಪೂರ್ವಕ ನಮನಗಳು.

ಪ್ರಾಯೋಜಕತ್ವದ ಹೊರತಾಗಿ ಈ ಸಂಚಿಕೆ ನಿಮ್ಮ ಮುಂದಿಡಲು ಸಾಧ್ಯವಾಗುತ್ತಿರಲಿಲ್ಲ. ನಮ್ಮ ಎಲ್ಲಾ ಪ್ರಾಯೋಜಕರಿಗೆ ತುಂಬು ಹೃದಯದ ವಂದನೆಗಳು.

ಸಂಚಿಕೆಯನ್ನು ಅಂದವಾಗಿ ರಚಿಸಿಕೊಟ್ಟ ಶ್ರೀ ಸುರೇಶ ರವರಿಗೂ ಹಾಗೂ ಮುದ್ರಣದ ಜವಾಬ್ದಾರಿ ಹೊತ್ತ ಶ್ರೀ ಲಕ್ಷ್ಮಿಕಾಂತ್ ರವರಿಗೂ ನಾವು ಕೃತಜ್ಞರಾಗಿದ್ದೇವೆ.

ಸಂಚಿಕೆಯನ್ನು, ಓದಿ, ಆನಂದಿಸಿ.

ಇನ್ನಷ್ಟು ಕನ್ನಡ ಕೈಂಕರ್ಯ ಮಾಡಲು ನಿಮ್ಮ ಪ್ರೋತ್ಸಾಹ ತುಂಬಾ ಅಗತ್ಯ ಎನ್ನುತ್ತಾ ....

**ವಂದನೆಗಳೊಂದಿಗೆ,**

**ಸಂಪಾದಕ ವರ್ಗ**



> ನಿಂತ ನೆಲವು ನಮ್ಮನ್ನು ರೂಪಿಸುತ್ತದೆ. ಅದನ್ನು ಅಲ್ಲಗಳೆಯುವುದು ಎಂದರೆ ನಮ್ಮನ್ನು ನಾವು ಕಳೆದುಕೊಂಡಂತೆ
> • ರಾಮಜಾಧವ

## ಸಂಪಾದಕ ವರ್ಗ


ನರಸಿಂಹ ಮೂರ್ತಿ


ಭಾಸ್ಕರ್ ತೈಲಗೇರಿ


ಡಾ. ಅಶೋಕ್ ಕಟ್ಟಿಮನಿ


ವಿನುತಾ ಶ್ರೀಧರ್


ಉಷಾ ಬಸ್ರೂರ್


ಸತ್ಯ ಪ್ರಸಾದ್

# ಅಧ್ಯಕ್ಷರ ನುಡಿ

## ಅಭಿಮಾನಿ ತಂಡದ ಯಶಸ್ಸಿನ ಹಿಂದಿರುವ ಅಭಿಮಾನಿ ದೇವರುಗಳಿಗೆಲ್ಲ ಪ್ರೀತಿ ಪೂರ್ವಕ ನಮನ....

ಎರಡು ವರ್ಷಗಳ ಬೃಂದಾವನ ಕನ್ನಡ ಕೂಟದ ಪದಾಧಿಕಾರಿಗಳ ಅವಧಿ ಎಷ್ಟು ಬೇಗ ಮುಗಿದಂತೆ ಅನ್ನಿಸುತ್ತಿದೆ. ಈ ಅವಧಿಯಲ್ಲಿ ನನ್ನ ಮತ್ತು ಅಭಿಮಾನಿ ತಂಡದ ಹಿಂದೆ ನಿಂತು ಹರಿಸಿ, ಉತ್ತೇಜಿಸಿ, ಎಲ್ಲ ಯಶಸ್ಸಿಗೆ ಕಾರಣರಾದ ನ್ಯೂ ಜೆರ್ಸಿಯ ಕನ್ನಡಿಗರಿಗೆಲ್ಲ ನಮ್ಮ ಮನಃ ಪೂರ್ವಕ ವಂದನೆಗಳು.



ಅಭಿಮಾನಿ ತಂಡದೊಂದಿಗೆ ಬೃಂದಾವನದ ಜವಾಬ್ದಾರಿ ವಹಿಸಿ ಕೊಂಡಾಗ ನಾವು ಹಲವಾರು ಕನಸುಗಳನ್ನು ಕಂಡೆವು, ಗುರಿಗಳನ್ನು ಗುರುತಿಸಿ ಕೊಂಡೆವು. ಈ ಎರಡು ವರ್ಷದ ಅವಧಿಯಲ್ಲಿ ಆ ಎಲ್ಲ ನಿಗದಿತ ಗುರಿಗಳನ್ನು ತಲುಪಿದೆವು ಎಂದು ಹೇಳಲು ಹೆಮ್ಮೆ ಮತ್ತು ಸಂತೋಷವೆನಿಸುತ್ತಿದೆ. ಈ ಸಾಧನೆಗಳ ಹಿಂದೆ, ಅಭಿಮಾನಿ ತಂಡದ ಸ್ನೇಹಿತರಿದ್ದಾರೆ, ಬೃಂದಾವನ ವಿಶ್ವಸ್ಥ ಮಂಡಳಿಯ ಸದಸ್ಯರಿದ್ದಾರೆ, ಹಿಂದಿನ ಅವಧಿಯ ನಿರ್ದೇಶಕರು, ಅಧ್ಯಕ್ಷರಿದ್ದಾರೆ, ಯುವ ಬೃಂದಾವನದ ಸದಸ್ಯರಿದ್ದಾರೆ, ಸ್ವಯಂ ಸೇವಕ ತಂಡದವರಿದ್ದಾರೆ, ನ್ಯೂ ಜೆರ್ಸಿ ಸಂಗೀತ ನೃತ್ಯ ಕಲಾವಿದರಿದ್ದಾರೆ, ವಿವಿಧ ಕೂಟಗಳಾದ ನಾಸಾ, ವಿಎಸ ಎನ್‌ಎ, ವಿಪಿಎ, ಮಂಗಳೂರು ಕ್ರಿಶ್ಚಿಯನ್ ಅಸೋಸಿಯೇಷನ್, ಕಟ್ಟೇ ಬಾಯ್ಸ್, ತ್ರಿವೇಣಿ, ಪ್ರಸ್ತಾಪ, ಕನ್ನಡ ಸಾಹಿತ್ಯ ರಂಗ ಇದ್ದಾರೆ. ಇವರೊಂದಿಗೆ ಅಭಿಮಾನಿಗಳಾದ ನಿಮ್ಮ ಉತ್ತೇಜನ, ಒಂದೆರಡು ಒಳ್ಳೆಯ ಮಾತುಗಳು, ನಮಗೆಲ್ಲ ಸಿಂಹ ಬಲ ನೀಡಿ ಉತ್ತಮ ಕೆಲಸ ಮಾಡಿಸಿದ್ದು ಅಚ್ಚರಿ ಏನಲ್ಲ.

ನಮ್ಮ ಅವಧಿಯಲ್ಲಿ, ನಾವು ಒತ್ತು ಕೊಟ್ಟಿದ್ದು .. ಬೃಂದಾವನದ ಕಾರ್ಯಕ್ರಮಗಳು ಬಹುಕಾಲ ನೆನಪಿನಲ್ಲಿ ಉಳಿಯುವ ಒಂದು ಸುಂದರ ಅನುಭವವಾಗಬೇಕೆಂದು. ಅತ್ಯುತ್ತಮ ಸಾಂಸ್ಕೃತಿಕ ಕಾರ್ಯಕ್ರಮಗಳು, ರುಚಿಕಟ್ಟಾದ ಊಟ, ಆಸಕ್ತರಿಗೆಲ್ಲ ಭಾಗವ ಹಿಸಲು ಅವಕಾಶ...ಇಷ್ಟಾದರೆ ಇನ್ನೇನು ಬೇಕು. ಆಹ್ವಾನಿತ ಕಲಾವಿದರೊಂದಿಗೆ ಸ್ಥಳೀಯ ಕಲಾವಿದರೆಲ್ಲ ಸೇರಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸುವ "ಸಮ್ಮಿಲನ" ಪ್ರಯತ್ನ ನಿಮ್ಮೆಲ್ಲರ ಮನ ಗೆದ್ದಿತು.

ನಮ್ಮ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಸ್ಥಳೀಯ ಕಲಾವಿದರ ಸಂಖ್ಯೆ 180 ಕ್ಕೂ ಹೆಚ್ಚು !! ನಾಟಕಗಳ ಸಂಕಲನ "ಆಟ ರಂಗಾಟ", ಸಂಗೀತ ಬೃಂದಾವನ, ನಾಟ್ಯ ಬೃಂದಾವನ, ಮಕ್ಕಳಿಂದ ಗಣೇಶ ರಚನೆ.. ನ್ಯೂ ಜೆರ್ಸಿ ಕನ್ನಡಿಗರಲ್ಲಿ ಪ್ರತಿಭೆಗಳ ಮಹಾಪೂರವೇ ಹರಿಯುತ್ತಿದೆ. ..

ಯುವ ಬೃಂದಾವನದ ಹಲವಾರು ಕಾರ್ಯಕ್ರಮಗಳ ಜೊತೆ, ನಾವು ಡಾ ಎಂ ಜಿ ಪ್ರಸಾದ್ ರವರ ಮಾರ್ಗದರ್ಶನದಲ್ಲಿ ಪ್ರಾರಂಭಿಸಿದ "ಡಿಸ್ಕವರ್" "ಜಗತ್ತಿಗೆ ಪ್ರಾಚೀನ ಭಾರತೀಯ ಜ್ಞಾನದ ಕೊಡುಗೆ" (Contribution of Ancient India to World Knowledge) ಕಾರ್ಯಕ್ರಮ ಮುಂದೊಂದು ದಿನ ಬೃಹದಾಕಾರವಾಗಿ ಬೆಳೆದರೆ, ಅದಕ್ಕಿಂತ ಹೆಮ್ಮೆಯ ವಿಷಯ ಇನ್ನೇನಿದೆ. ಸನಾತನ ಭಾರತದ ಜ್ಞಾನ, ಹಿರಿಮೆ, ಜಗತ್ತಿಗೆ ನೀಡಿದ ಕೊಡುಗೆ, ನಮ್ಮ ಮುಂದಿನ ಜನಾಂಗಕ್ಕೆ ತಿಳಿಯುವಂತಾದರೆ ಅದಕ್ಕಿಂತ ದೊಡ್ಡ ಸಾಧನೆ ಬೇಕೇ?

ಬೃಂದಾವನ ಕನ್ನಡ ಶಾಲೆಗಳ ಬಗ್ಗೆ ಒಂದೆರಡು ಮಾತು ಹೇಳಲೇ ಬೇಕು. ನಮ್ಮ ಮೂರು ಶಾಲೆಗಳಿಂದ 100 ಕ್ಕೂ ಹೆಚ್ಚು ಮಕ್ಕಳು ಅಕ್ಕರೆಯಿಂದ ಕನ್ನಡ ಕಲಿಯುತ್ತಿದ್ದಾರೆ. ಕ್ಯಾಲಿಫೋರ್ನಿಯಾದ ಶ್ರೀ ಶಿವ ಮತ್ತು ತಂಡದವರೊಂದಿಗೆ ಕೈ ಜೋಡಿಸಿ, ಕರ್ನಾಟಕ ಸರಕಾರದ ಸಹಯೋಗದಿಂದ ಎಂಟು ಹಂತಗಳ ಪುಸ್ತಕಗಳನ್ನು ಮುದ್ರಿಸಿದ್ದರಿಂದ ಅತ್ಯಂತ ಕಡಿಮೆ ದರದಲ್ಲಿ ನಮ್ಮ ಮಕ್ಕಳಿಗೆಲ್ಲ ಕನ್ನಡ ಶಾಲೆಯ ಪುಸ್ತಕಗಳು ದೊರೆಯುತ್ತಿವೆ. ವರ್ಷ ಪೂರ್ತಿ ನಮ್ಮ ಎಲ್ಲ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮಕ್ಕಳ ಕಾರ್ಯಕ್ರಮಗಳನ್ನು ಕೂಡ ಜೊತೆ ಗೂಡಿಸಿ ಅತ್ಯಂತ ಹೆಚ್ಚಿನ ಗುಣಮಟ್ಟದ ಕಾರ್ಯಕ್ರಮಗಳನ್ನು ನಡೆಸಿ ಕೊಟ್ಟಿದ್ದೇವೆ. ಅದರ ಯಶಸ್ಸಿನ ಹಿಂದಿರುವ ಪೋಷಕರು, ಶಿಕ್ಷಕರು ಮತ್ತು ಕಾರ್ಯಕರ್ತರಿಗೆಲ್ಲ ತುಂಬು ಹೃದಯದ ಕೃತಜ್ಞತೆಗಳು.

ಈ ದಿಸೆಯಲ್ಲಿ ಮತ್ತೊಂದು ಪ್ರಮುಖ ಸಾಧನೆಯೆಂದರೆ ಕಾರ್ಯಕ್ರಮಗಳಿಗೆ ಬರುತ್ತಿರುವ ಕನ್ನಡಿಗರ ಸಂಖ್ಯೆ 600 ಕ್ಕೂ ಹೆಚ್ಚಾಗಿ 800 ಕೂಡ ತಲುಪಿರುವುದು. ಕಳೆದ ಎರಡು ವರ್ಷಗಲ್ಲಿ ನಮ್ಮ ಸದಸ್ಯರ ಸಂಖ್ಯೆ ಎರಡು ಪಟ್ಟು ಹೆಚ್ಚಾಗಿದೆ. ಫೇಸ್ ಬುಕ್ ನಲ್ಲಿರುವ ಸ್ನೇಹಿತರ ಸಂಖ್ಯೆ ಎರಡು ಸಾವಿರಕ್ಕೂ ದಾಟಿದೆ. ಇದಕ್ಕಿಂತ ದೊಡ್ಡ ಪ್ರಶಸ್ತಿ ಇನ್ನೇನಿದೆ.

ಎಂದಿನಂತೆ ಸೇವಾ ಬೃಂದಾವನ, ತನ್ನ ಹೊಸ ಕಾರ್ಯಕ್ರಮಗಳಿಂದ ಹೆಚ್ಚು ಹೆಚ್ಚು ಫಲಾನುಭವಿಗಳನ್ನು

ತಲುಪಿದೆ. ನಾವು ಅಕ್ಕ ದೊಂದಿಗೆ ನೆಡೆಸಿದ 5 ಕೆ ಓಟ ಬಹುಕಾಲ ನೆನೆಪಿನಲ್ಲಿ ಉಳಿಯುವಂತಹದ್ದು. ನಮ್ಮ ಎಲ್ಲ ಕಾರ್ಯಕ್ರಮಗಳಿಂದ ಉಳಿತಾಯವಾದ ಹಣ ಕಳೆದ ಹದಿನಾಲ್ಕು ವರ್ಷಗಳಲ್ಲಿ ಬೃಂದಾವನದಲ್ಲಿ ಸೇರಿಸಿದ ಮೊತ್ತಕ್ಕೆ ಸಮನಾಗಿರುವುದು ದೊಡ್ಡ ಸಾಧನೆ. ನಮ್ಮ ಈ ಸಾಧನೆಗೆ ಪ್ರೋತ್ಸಾಹಿಸಿ ದೇಣಿಗೆ ನೀಡಿದ ಪ್ರಾಯೋಜಕರಿಗೆ ಬೃಂದಾವನ ಅತ್ಯಂತ ಅಭಾರಿ.

ರುಚಿಯಾದ ಊಟ ಎಲ್ಲ ಕಾರ್ಯಕ್ರಮಗಳ ಜೀವನಾಡಿ. ನಮ್ಮ ಎಲ್ಲ ಕಾರ್ಯಕ್ರಮಗಳಲ್ಲಿ ಅತ್ಯುತ್ತಮ ಊಟ ನೀಡಬೇಕೆಂಬ ನಮ್ಮ ಮೊದಲ ಗುರಿಯನ್ನು ಯಶಸ್ವಿಯಾಗಿ ಪೂರೈಸಿದ್ದೇವೆ. ನೀವೆಲ್ಲ ರುಚಿಯಾದ ಊಟಕ್ಕಾಗಿ ಬೆನ್ನು ತಟ್ಟಿದ್ದೀರಿ.. ಭೋಜನದಲ್ಲಿ ಸಹಕರಿಸಿದ ಎಲ್ಲ ಕಾರ್ಯಕರ್ತರಿಗೊಂದು ದೊಡ್ಡ ನಮನ.

ಸಾಹಿತ್ಯ ಬೃಂದಾವನದ ಈ ಎರಡು ವರ್ಷಗಳ ಕೊಡುಗೆ ಅತ್ಯಂತ ಗಮನಾರ್ಹ. ಸಾಹಿತ್ಯ ಬೃಂದಾವನದ ಎರಡು ಕಾರ್ಯಕ್ರಮಗಳು, "ಹಾಸ್ಯ ಸಾಹಿತ್ಯ" ಮತ್ತು"ಕನ್ನಡ ಸಾಹಿತ್ಯದಲ್ಲಿ ನಾಟಕಗಳ ಪಾತ್ರ" ಅತ್ಯಂತ ಯಶಸ್ವಿಯಾಗಿ ನೆರವೇರಿದವು. ನಮ್ಮ ದ್ವಿ ಮಾಸಿಕ ಪತ್ರಿಕೆ "ಬೃಂದಾವನ ವಾಣಿ" ಮನೆ ಮಾತಾಗಿದೆ. ಈ ಕಾರ್ಯಕ್ರಮಗಳ ಯಶಸ್ಸಿಗೆ ಸಹಕರಿಸಿದ ಸ್ನೇಹಿತರಿಗೆ ಮತ್ತು ಬೃಂದಾವನ ವಾಣಿಯ ಸಂಪಾದಕ ಮಂಡಳಿಗೆ ನಮ್ಮೆಲ್ಲರ ಕೃತಜ್ಞತೆಗಳು. ಇದರೊಂದಿಗೆ ಪ್ರಪ್ರಥಮವಾಗಿ ಸಾಹಿತ್ಯ ಬೃಂದಾವನದಿಂದ ಹಿರಿಯ ಕನ್ನಡ ಕವಿ ಶ್ರೀ ನಿಸ್ಸಾರ್ ಅಹ್ಮದ್ ರವರ ಮುನ್ನುಡಿಯೊಂದಿಗೆ "ಬದುಕು ಜಟಕಾ ಬಂಡಿ" ಎಂಬ ಬದುಕಿನ ಅನುಭವಗಳ ಸಂಕಲನವನ್ನು ಪುಸ್ತಕ ರೂಪವಾಗಿ ಪ್ರಕಟಿಸಿದೆವು. ಇದು ಕನ್ನಡ ಸಂಘಕ್ಕೊಂದು ವಿಶೇಷ ಸಾಧನೆಯೇ ಸರಿ. ನ್ಯೂ ಜೆರ್ಸಿಯಲ್ಲಿ ಅನೇಕ ಕನ್ನಡ ಲೇಖಕರು ಬೆಳೆದು ಬರುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆ.

ನಮ್ಮ ಮತ್ತೊಂದು ದೊಡ್ಡ ಸಾಧನೆಯೆಂದರೆ ಆನ್ ಲೈನ್ ರಿಜಿಸ್ಟ್ರೇಷನ್. ಸದಸ್ಯರೆಲ್ಲ ಕಾರ್ಯಕ್ರಮಗಳಿಗೆ ಕೆಲವೇ ಕ್ಷಣಗಳಲ್ಲಿ ನೋಂದಾಯಿಸಿ ಕೊಳ್ಳಬಹುದು. ಸುಂದರ ವೆಬ್ ಸೈಟ್ ಮತ್ತು ಸುಂದರ ಫ್ಲೈಯರ್ ಗಳನ್ನು ನೀವು ಸಾಕಷ್ಟು ಪ್ರಶಂಸಿಸಿದ್ದೀರಿ. ನಮ್ಮ ಜೊತೆ ಕೈ ಜೋಡಿಸಿದ ಇಕ್ಯುಡ್ ಸೊಲ್ಯೂಷನ್ಸ್ ರವರಿಗೆ ನಾವು ಅಭಾರಿ.

ಇನ್ನು ನಮ್ಮ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಹೆಸರಾಂತ ಕಲಾವಿದರು, ಸಾಹಿತಿಗಳು, ಸಾಕಷ್ಟು ಸಾಧನೆ ಮಾಡಿದವರು.. ಕನ್ನಡ ಚಲನ ಚಿತ್ರ ನಟ ಶ್ರೀ ಜಗ್ಗೇಶ್, ಗಾಯಕಿ ಶ್ರೀಮತಿ ಬಿ ಆರ್ ಛಾಯಾ, ಶ್ರೀ ಪದ್ಮಪಾಣಿ, ಹಾಸ್ಯಗಾರ್ತಿ ಶ್ರೀಮತಿ ಸುಧಾ ಬರಗೂರ್, ಭರತನಾಟ್ಯ ಕಲಾವಿದರಾದ ಡಾ ಸಂಜಯ್ ಶಾಂತಾರಾಮ್, ಸ್ನೇಹ ಭಾಗವತ್, ಶೇಖರ್, ತರಂಗ ತಂಡದ ಕಲಾವಿದರು, ಚಿತ್ರ ನಟಿ ಶ್ರೀಮತಿ ಹರಿಣಿ, ಹಾಸ್ಯಗಾರ ತಬಲಾ ನಾಣಿ, ನಾಟಕಕಾರ ಮಲ್ಲಿ ಸಣ್ಣಪ್ಪನವರ್, ನಾಟಕಕಾರ ನಿತೀಶ್ ಶ್ರೀಧರ್, ಸಾಹಿತಿ ಡಾ ಕಣ್ಣನ್, ನಾಟಕಕಾರ ಶ್ರೀ ಗೋವಿಂದನ್, ವಾದ್ಯಗೋಷ್ಠಿ ಕಲಾವಿದರಾದ ಡಾ. ಸುಚೇತನ್, ಐಶ್ವರ್ಯ, ವೆಂಕಿ, ರಾಜೀವ್,ಭರತ್, ಧನುಷ್ , ದೀಕ್ಷಾ, ಪೃಥ್ವಿ, ತಮ್ಮ ಪ್ರತಿಭೆಯಿಂದ ನಮ್ಮ ಮನ ಸೂರೆಗೊಂಡರು.. ಈ ಎಲ್ಲ ಸಾಧಕರು ನಮ್ಮ ಜೊತೆಯಿದ್ದಿದ್ದಕಿಂತ ಹೆಚ್ಚಿನ ಸಂತೋಷ ಇನ್ನೇನಿದೆ.

ಡಿಸೆಂಬರ್ 1 ರ ಮಕ್ಕಳೋತ್ಸವ ಅಭಿಮಾನಿ ತಂಡದ ಕೊನೆಯ ಕಾರ್ಯಕ್ರಮ. ಪ್ರತಿ ವರ್ಷದಂತೆ ಮಕ್ಕಳಿಗಾಗಿ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳೊಂದಿಗೆ ನಮ್ಮ ಕನ್ನಡ ಶಾಲೆಯ ಮಕ್ಕಳು ವಿಶೇಷ ಹಾಡು, ನೃತ್ಯ ನಾಟಕಗಳಿಂದ ನಿಮ್ಮನ್ನು ರಂಜಿಸಲಿದ್ದಾರೆ. ನ್ಯೂ ಜೆರ್ಸಿ ಕನ್ನಡ ಮಕ್ಕಳ ವಾದ್ಯಗೋಷ್ಠಿ ಮತ್ತು ಇತರ ಮನೋರಂಜನಾ ಕಾರ್ಯಕ್ರಮಗಳನ್ನು ನೀವು ಖಂಡಿತ ನೋಡಲೇ ಬೇಕು.

ಇದರೊಂದಿಗೆ ಇನ್ನೆರಡು ವಿಶೇಷ ನಾಟಕಗಳನ್ನು ನಿಮಗಾಗಿ ರೂಪಿಸಿದ್ದೇವೆ. ಡಾ. ಸಂಜಯ್ ಶಾಂತಾರಾಮ್ ಮತ್ತು ನ್ಯೂ ಜೆರ್ಸಿ ಕಲಾವಿದರೆಲ್ಲ ಸೇರಿ "ಕರ್ನಾಟಕ ವೈಭವ" ನೃತ್ಯ ರೂಪಕವನ್ನು ಪ್ರದರ್ಶಿಸುತ್ತಿದ್ದಾರೆ. ಈ ನೃತ್ಯ ರೂಪಕ ನಿಮಗೆ ಬ್ರಾಡ್ ವೇ ಶೋ ನೆನಪಿಗೆ ತಂದರೆ ಅಚ್ಚರಿಯಿಲ್ಲ. ಇದರೊಂದಿಗೆ ಖ್ಯಾತ ನಾಟಕಕಾರ ಶ್ರೀ ರಾಜೇಂದ್ರ ಕಾರಂತ್ ರವರ "ಮೈಸೂರು ಮಲ್ಲಿಗೆ" ಸಂಗೀತ ನಾಟಕವನ್ನ ನ್ಯೂ ಜೆರ್ಸಿ ಕಲಾವಿದರು, ಸ್ನೇಹಿತರೆಲ್ಲ ಸೇರಿ ಪ್ರದರ್ಶಿಸುತ್ತಿದ್ದೇವೆ. ಕನ್ನಡದ ಹೆಸರಾಂತ ಪ್ರೇಮ ಕವಿ ಶ್ರೀ ನರಸಿಂಹ ಸ್ವಾಮಿಯವರ ಹಾಡುಗಳ ಹಬ್ಬ ನಮಗಾಗಿ ಕಾದಿದೆ. ಈ ಸಂಗೀತ ನಾಟಕ, ಎಲ್ಲರನ್ನು ಸುಂದರ ಪ್ರೇಮದ ಕಡಲಲ್ಲಿ ಮೀಯಿಸಲಿದೆ.

ಇದೇ ಸಂದರ್ಭದಲ್ಲಿ ಬೃಂದಾವನದ ಹೊಸ ಕಾರ್ಯಕಾರಿ ಸಮಿತಿಯ ಸ್ಥಾನಗಳಿಗಾಗಿ ಚುನಾವಣೆಗಳು ನಡೆಯುತ್ತಿವೆ. ಬರುವ ಹೊಸ ಕಾರ್ಯಕಾರಿ ಸಮಿತಿ ಬೃಂದಾವನದ ಸಾಧನೆಗಳನ್ನು ಮತ್ತಷ್ಟು ಎತ್ತರಕ್ಕೆ ಒಯ್ಯುವುದರಲ್ಲಿ ಸಂದೇಹವಿಲ್ಲ. ಹೊಸ ಕಾರ್ಯಕಾರಿ ಸಮಿತಿಗೆ ಅಭಿಮಾನಿ ತಂಡದ ಶುಭಾಶಯಗಳು .. ನಿಮ್ಮ ಹಿಂದೆ ನಾವಿದ್ದೇವೆ.

ಮತ್ತೊಮ್ಮೆ ಎರಡು ವರ್ಷ ಬೃಂದಾವನ ಕಾರ್ಯಕಾರಿ ಸಮಿತಿಯ ಜವಾಬ್ದಾರಿ ಒಪ್ಪಿಸಿದ ನಿಮಗೆಲ್ಲ ಅಭಿಮಾನಿ ತಂಡದ ತುಂಬು ಹೃದಯದ ಧನ್ಯವಾದಗಳು. ಮುಂದೆ ಮತ್ತಷ್ಟು ಕನ್ನಡದ ಕೆಲಸ ಜೊತೆಯಾಗಿ ಮಾಡೋಣ.


ಎಲ್ಲಾದರೂ ಇರು, ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು ಎಂದ ರಾಷ್ಟ್ರಕವಿ ಕುವೆಂಪುರವರಿಗೆ, ನ್ಯೂ ಜೆರ್ಸಿ ಕನ್ನಡಿಗರಿಗೆ ನಮಿಸುತ್ತ..

ನಿಮ್ಮೆಲ್ಲರ ಅಭಿಮಾನಿ,

**ಡಾ. ಅಶೋಕ್ ಕಟ್ಟೀಮನಿ**

ಅಭಿಮಾನಿ ತಂಡದ ಪರವಾಗಿ

# ಕರ್ನಾಟಕದ ಹೆಮ್ಮೆ





# ಅಭಿಮಾನಿ ತಂಡದ
# ಕಾರ್ಯ ಚಟುವಟಿಕೆಗಳು

ಅನಕ್ಷರತೆಯು ಅಜ್ಞಾನಕ್ಕೆ ಮೂಲ, ಅಜ್ಞಾನವು ಮೌಢ್ಯಕ್ಕೆ ಮೂಲ

• ಪೂಜ್ಯ ದೊಡ್ಡಪ್ಪ ಅಪ್ಪ

# ಬೃಂದಾವನ ಅಭಿಮಾನಿ ತಂಡ

# EXECUTIVE COMMITTEE - 2017-18

## BOARD OF TRUSTEES



Dr. Ram Bangalore



Shri. Ben Kantharaju



Shri. Santhosh Kumar



Shri.  Mallik Prasad



DrAshok Kattimani

## EXECUTIVE COMMITTEE



Dr. Ashok Kattimani
President



Shri. Basavaraju Shivanna
Vice President



Shri. Sridhara Suryanarayana
Secretary



Shri. Kiran Agrahara
Treasurer

ಪರಿಸ್ಥಿತಿ ಹೇಗೇ ಇದ್ದರೂ ಅದನ್ನು ಕುರಿತ ನಮ್ಮ ಪ್ರತಿಕ್ರಿಯೆ ನಮಗೆ ಸುಖ ಇಲ್ಲವೇ ದುಃಖದ ಪರಿಕಲ್ಪನೆ ನೀಡುತ್ತದೆ.
• ಎಂ. ಬಿ. ನೇಗಿಹಾಳ

# ಬೃಂದಾವನ ಅಭಿಮಾನಿ ತಂಡ
# EXECUTIVE COMMITTEE - 2017-18

## DIRECTORS & HONORARY DIRECTORS


Smt. Sujaya Rao


Dr. Srisai Gowda


Smt. Roopa Bhatt


Shri. Suresh Gadigi


Shri. Sathya Prasad


Shri. Tirumalesh Kowdley


Shri. Mahesh Rangaswamy


Mrs. Anuradha Begeri

## TEAM LEADS


Dr. M.G. Prasad


Shri. Dasharathi Gattu
Brindavana Akshara Bhandara


Shri. Suhas Kumar
Yuva Brindavana


Mr. Raghavendra Kundalagarki

ಬಂದವರಿಗೆ ಬಾ ಅನ್ನು, ಮನದುಂಬಿ ಮಾತಾಡು
• **ಜಯದೇವಿತಾಯಿ ಲಿಗಾಡೆ**

# ಬೃಂದಾವನ ಅಭಿಮಾನಿ ತಂಡದ ಕಾರ್ಯ ಚಟುವಟಿಕೆಗಳ ಹಿನ್ನೋಟ


















ಪ್ರತಿಯೊಂದು ಮಗುವೂ ಹುಟ್ಟುತ್ತಲೇ ವಿಶ್ವಮಾನವ. ಬೆಳೆಯುತ್ತಾ ನಾವು ಅದನ್ನು ಅಲ್ಪ ಮಾನವನನ್ನಾಗಿ ಮಾಡುತ್ತೇವೆ

• **ಕುವೆಂಪು**












ಬದುಕು ಬಲು ವಿಸ್ತಾರ, ಬಾಳು ಅಪರಂಪಾರ

• ಸಿದ್ದಯ್ಯ ಪುರಾಣಿಕ

# ಬೃಂದಾವನ ಅಭಿಮಾನಿ ತಂಡದ ಎರಡು ವರ್ಷಗಳ ಪಕ್ಷಿನೋಟ


ಅಶೋಕ್


ಸತ್ಯ


ಸುಜಯ

ಅನುರಾಧ ದೀಪಕ್



## ೨೦೧೭ ರ ವಸಂತೋತ್ಸವ

ಕನ್ನಡ ಕಲಾಭಿಮಾನಿಗಳಿಗೆ ನಮಸ್ಕಾರ,

ಏಪ್ರಿಲ್ 8 2017 ರಂದು ಬೃಂದಾವನ ಕನ್ನಡ ಕೂಟದ ಅಭಿಮಾನಿ ತಂಡ ಏರ್ಪಡಿಸಿದ್ದ ವಸಂತೋತ್ಸವ ಕಾರ್ಯಕ್ರಮ ಹೊಸದೊಂದು ದಾಖಲೆಯನ್ನೇ ಸಾಧಿಸಿದೆ. ಹೈಸ್ಕೌನ್ ಶಾಲಾ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಪ್ರಥಮ ಬಾರಿಗೆ, 800ಕ್ಕೂ ಹೆಚ್ಚು ನ್ಯೂಜೆರ್ಸಿ ಕನ್ನಡಿಗರು ಒಂದೆಡೆ ಸೇರಿ ಯುಗಾದಿ ಹಬ್ಬವನ್ನು ಆಚರಿಸಿದ್ದು. ಒಂದು ಸಾಧನೆಯೇ ಸರಿ!

ಮಧ್ಯಾಹ್ನ 1ಗಂಟೆಯಿಂದ ರಾತ್ರಿ 8 ಗಂಟೆಯವರಗೆ ಸತತವಾಗಿ 175ಕ್ಕೂ ಹೆಚ್ಚು ಸ್ಥಳೀಯ ಕನ್ನಡಾಭಿಮಾನಿ ಕಲಾವಿದರ ಸಂಗೀತ, ನೃತ್ಯ, ನಾಟಕಗಳು ಪ್ರದರ್ಶನಗೊಂಡವು. ಬಹಳಷ್ಟು ಶ್ರಮಪಟ್ಟು, ತಮ್ಮ ನಿರತ ಕೆಲಸಗಳ ಮಧ್ಯೆ ಸಮಯವನ್ನು ಮಾಡಿಕೊಂಡು ಅಭ್ಯಾಸ ಮಾಡಿ, ನಿಗದಿತ ಸಮಯದಲ್ಲಿ ಸಜ್ಜಾದ ರಂಗಮಂಚದ ಮೇಲೆ ಮಾಡಿದ ಪ್ರದರ್ಶನಗಳು ಶ್ಲಾಘನೀಯ.

ಶ್ರೀ ಯೋಗೇಂದ್ರ ಭಟ್ ಅವರು ಗಣಪತಿ ಪೂಜೆ ಮತ್ತು ಹೊಸ ವರುಷ ಹೇವಿಳಂಬಿ ಸಂವತ್ಸರ ಪಂಚಾಂಗ ಶ್ರಾವಣ ಮಾಡಿ ಕಾರ್ಯಕ್ರಮ ಸುಸೂತ್ರವಾಗಿ ನೆಡೆಯಲಿ ಎಂದು ಶುಭ ಹಾರೈಸಿದರು. ಡಾ.ಎಂ. ಜಿ. ಪ್ರಸಾದ್ ಅವರು ಯುಗಾದಿ ಹಬ್ಬದ ವಿಶೇಷತೆಯ ಬಗ್ಗೆ ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಟ್ಟಿದ್ದು ವಸಂತೋತ್ಸವ ಕಾರ್ಯಕ್ರಮವನ್ನು ಮುಂದುವರಿಸಲು ನಾಂದಿಯಾಯಿತು.

ಬೃಂದಾವನ ಕನ್ನಡ ಶಾಲೆಯ ಮಕ್ಕಳ – ಕಿತ್ತೂರು ಚೆನ್ನಮ್ಮ, ವಚನ ಸಾಹಿತ್ಯ, ದಾಸ ಸಾಹಿತ್ಯ, ನಗುವುದೋ ಅಳುವುದೋ.. ಮತ್ತು ಇತರ ಸಂಸ್ಥೆಗಳ ನೂರಕ್ಕೂ ಹೆಚ್ಚು ಕನ್ನಡ ಮಕ್ಕಳ, ನೃತ್ಯ, ಮಾತು, ಅಭಿನಯ, ಹಾಡುಗಳು ಕಣ್ಣ ಮುಂದೆ ಕಟ್ಟಿದಂತಿವೆ. ಇವುಗಳೊಂದಿಗೆ ನಮ್ಮ ಸ್ಥಳೀಯ ಕನ್ನಡ ಕಲಾವಿದರ ಹಲವಾರು ಕಾರ್ಯಕ್ರಮಗಳು ಮನಸೂರೆಗೊಂಡವು.

ಈ ಬಾರಿಯ ವಸಂತೋತ್ಸವ ಕಾರ್ಯಕ್ರಮದ ಮುಖ್ಯ ಆಕರ್ಷಣೆ ಮತ್ತು ವಿಶೇಷ ಮೆರಗನ್ನು ನೀಡಿದ್ದು ನಮಗಾಗಿ ಬೆಂಗಳೂರಿನಿಂದ ಅಮೇರಿಕದವರೆಗೆ ಬಂದು, ನಮ್ಮೊಂದಿಗೆ ಒಬ್ಬರಾಗಿ, ಬಹಳ ಸಂತೋಷದಿಂದ ಪಾಲ್ಗೊಂಡಂತಹ ಕಲಾವಿದರು.

ಕನ್ನಡ ಚಿತ್ರರಂಗದಲ್ಲಿ ನವರಸನಾಯಕ ನಟ ಎಂದು



ಇಂದು ಹುಟ್ಟಿ ನಾಳೆ ಸಾಯುವ ಸಮಾಜ ವಿಘಾತಕಾರಿ ಕೃತಿ ರಚನೆ ನಿಲ್ಲಬೇಕು
• **ಬಸವರಾಜ ಕಟ್ಟೀಮನಿ**






ಹೆಸರು ಮಾಡಿರುವ ನಮ್ಮೆಲ್ಲರ ನೆಚ್ಚಿನ ನಟ ಶ್ರೀ ಜಗ್ಗೇಶ್ ರವರ ಮನರಂಜನೆ, ಅನುಭವದ ಮಾತು, ಮಿಮಿಕ್ರಿ, ಭಾಗ್ಯದ ಲಕ್ಷ್ಮಿ ಬಾರಮ್ಮ ಹಾಡಿಗೆ ಪ್ರೇಕ್ಷಕರಿಂದ ಚಪ್ಪಾಳೆಗಳ ಸುರಿಮಳೆಯಾಯಿತು.

ಕರ್ನಾಟಕದ ಹೆಸರಾಂತ ಹಿನ್ನೆಲೆ ಗಾಯಕರಲ್ಲಿ ಒಬ್ಬರಾದ, ಗಾನ ಕೋಗಿಲೆ ಎಂದೇ ಪ್ರಖ್ಯಾತರಾಗಿರುವ ಶ್ರೀಮತಿ ಬಿ.ಆರ್. ಛಾಯಾರವರು, ಶ್ರೀಪದ್ಮಪಾಣಿಯವರೊಂದಿಗೆ ನೆಡೆಸಿಕೊಟ್ಟ ಸಂಗೀತ ಕಾರ್ಯಕ್ರಮ, ಅವರ "ಹಿಂದುಸ್ಥಾನವು ಎಂದೂ ಮರೆಯದ .." ಎಂಬ ಹಾಡಿನಂತೆ ಎಂದಿಗೂ ಅಚ್ಚಳಿಯದೆ ನೆನಪಿನಲ್ಲಿ ಉಳಿಯಿತು. ಅವರು ಹಾಡಿದ ನಿನ್ನಂತ ಅಪ್ಪ ಇಲ್ಲಾ ಹಾಡಿಗೆ ಶ್ರೀ ಸಿಂಹಾದ್ರಿ ಸಂತೇಬೆನ್ನೂರು ಅವರು ಧ್ವನಿಗೂಡಿಸಿದರು ಮತ್ತು ಸುಮಾರು 30 ಕ್ಕೂ ಹೆಚ್ಚು ಅಪ್ಪ ಮಗಳ ಜೋಡಿ ಹೆಜ್ಜೆಹಾಕಿದ್ದು ಬಹಳ ವಿಶೇಷವಾಗಿತ್ತು. ಇಷ್ಟೇ ಅಲ್ಲದೆ ಮೂಡಲ್ ಕುಣಿಗಲ್ ಕೆರೆ ಮತ್ತು ಭಾಗ್ಯದ ಬಳೆಗಾರ ಜಾನಪದ ಹಾಡುಗಳಿಗೆ ಬೃಂದಾವನ ಬೆಡಗಿಯರು ಸುಂದರವಾಗಿ ಅಲಂಕಾರ ಮಾಡಿಕೊಂಡು ನೃತ್ಯ ಮಾಡಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಸ್ಥಳೀಯ ಗಾಯಕ ಗಾಯಕಿಯರು ಹಾಡಿದ ಹಾಡುಗಳು ಕೇಳುಗರಿಗೆ ಇಂಪನ್ನು ನೀಡಿತು. ಈ ಕಾರ್ಯಕ್ರಮದ ತಯಾರಿಗಾಗಿ ಸಹಾಯ ಮಾಡಿದ ಪ್ರಸನ್ನ ಕುಮಾರ ಮತ್ತು ಉಷಾ ಪ್ರಸನ್ನ ಅವರಿಗೆ ನಮ್ಮ ಹೃದಯಪೂರ್ವಕ ವಂದನೆಗಳು.

ಒಟ್ಟಾರೆ ಬೃಂದಾವನ ಅಭಿಮಾನಿ ತಂಡದ ಈ ವಸಂತೋತ್ಸವ ಕಾರ್ಯಕ್ರಮ – ಯುಗಾದಿ ಹಬ್ಬ, ಎಂದೂ ಮರೆಯಲಾರದ ಅನುಭವ. 800ಕ್ಕೂ ಹೆಚ್ಚು ನ್ಯೂಜೆರ್ಸಿ ಕನ್ನಡಿಗರೆಲ್ಲ ಒಂದೆಡೆ ಸೇರಿ ಯುಗಾದಿ ಹಬ್ಬ ಆಚರಿಸಿದ್ದು ಒಂದು ಸಾಧನೆ. ಈ ಕಾರ್ಯಕ್ರಮದ ಯಶಸ್ಸಿಗೆ ಕಾರಣವಾದದ್ದು ನೂರಾರು ಸ್ವಯಂ ಕಾರ್ಯಕರ್ತರ ನಿಸ್ವಾರ್ಥ ದುಡಿಮೆ, ನಮ್ಮೆಲ್ಲಾ ಕಾರ್ಯಕ್ರಮದಲ್ಲೂ ಸಹಾಯ ನೀಡುವ ಪ್ರಾಯೋಜಕತ್ವ.

ವಸಂತೋತ್ಸವ ಕಾರ್ಯಕ್ರಮಕ್ಕೆ ಬಂದು, ವಿನಯದಿಂದ ಕೂತು ಕಾರ್ಯಕ್ರಮಗಳನ್ನು ವೀಕ್ಷಿಸಿದ ಎಲ್ಲಾ ಕನ್ನಡ ಅಭಿಮಾನಿಗಳಿಗೆ, ಬೃಂದಾವನ ಕನ್ನಡ ಕೂಟದ ಪರವಾಗಿ ಅಭಿಮಾನಿ ತಂಡದ ತುಂಬು ಹೃದಯದ ಕೃತಜ್ಞತೆಗಳು.

ಇನ್ನೂ ಉತ್ತಮ ಕನ್ನಡ ಕಾರ್ಯಕ್ರಮಗಳನ್ನು ಸತತವಾಗಿ ನಡೆಸಿಕೊಂಡು ಹೋಗಲು ನಿಮ್ಮೆಲ್ಲರ ಸಹಾಯ, ಸಹಕಾರ ಬಹಳ ಮುಖ್ಯ. ದಯವಿಟ್ಟು ಹೆಚ್ಚು ಸಂಖ್ಯೆಯಲ್ಲಿ ನಿಮ್ಮ ಕುಟುಂಬ ಮತ್ತು ಸ್ನೇಹಿತರೊಂದಿಗೆ ಬಂದು ಪಾಲ್ಗೊಳ್ಳಿ.

ಎಲ್ಲಿದ್ದರೇನು ಹೇಗಿದ್ದರೇನು ಆಡೋಕೆ ಒಂದೇ ಭಾಷೆ ಕನ್ನಡ. ಕನ್ನಡಿಗರೆಲ್ಲ ಯಾವುದೇ ಜಾತಿ, ಮತ ಭೇದಗಳಿಲ್ಲದೆ ಒಂದಾಗಬೇಕು, ನಮ್ಮ ಆಚಾರ ವಿಚಾರ ಸಂಸ್ಕೃತಿ ಮೆರೆಸಿ ಮುಂದಿನ ಪೀಳಿಗೆಗೆ ಕೊಡುಗೆಯಾಗಿ ಕೊಡಬೇಕು ಎನ್ನುವ ಸದುದ್ದೇಶದಿಂದ ಕೆಲವೇ ಸದಸ್ಯರುಗಳು ಪ್ರಾರಂಭ ಮಾಡಿದ ಈ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಈ ಮರವನ್ನು ಕಾಪಾಡುವ ಜವಾಬ್ದಾರಿ ಇಲ್ಲಿ ನೆಲೆಸಿರುವ ಎಲ್ಲಾ ಕನ್ನಡಿಗರದ್ದು.

ಮುಖತಃ ಮತ್ತೆ ಭೇಟಿಯಾಗೋಣ.

**– ಸಿರಿಗನ್ನಡಂಗಲ್ಗೆ–**

ಕಷ್ಟಮತವಾದದ್ದನ್ನು ಸಾಧಿಸುವುದು ನಮ್ಮ ಮನುಷ್ಯತ್ವಕ್ಕೆ ಒರೆಗಲ್ಲು
• ಜಿ. ಪಿ. ರಾಜರತ್ನಂ

# ನವರಸ ನಾಯಕನೊಡನೆ ಯುಗಾದಿ ಸಂಭ್ರಮ

ರಾಘವೇಂದ್ರ ಕುಂದಲಗುರ್ಕಿ



ನವರಸ ನಾಯಕ, ಕಾಮಿಡಿ ಕಿಂಗ್  ಮುಂತಾದ ಬಿರುದುಗಳನ್ನು ಹೊತ್ತ ನಮ್ಮೆಲ್ಲರ ಪ್ರೀತಿಯ ಜಗ್ಗೇಶ್ ನ್ಯೂಜೆರ್ಸಿಯ ಬೃಂದಾವನದ ಯುಗಾದಿಯ ವಸಂತೋತ್ಸವಕ್ಕೆ ಆಗಮಿಸುವರೆಂದು ತಿಳಿದು ಬಹಳ ಸಂತೋಷದಿಂದ ಜನ ಸಂಭ್ರಮ ನೆರೆದಿತ್ತು. ಜಗ್ಗೇಶ್ ಕನ್ನಡ ಚಿತ್ರರಂಗ ಕಂಡ ವಿಶೇಷ ನಟ. ಅವರ ಹಾವಭಾವ, ಡೈಲಾಗ್ ಹೇಳುವ ರೀತಿಯಿಂದ, ಅವರು ಕನ್ನಡದ ಮನೆ ಮಾತಾಗಿದ್ದಾರೆ. ತರ್ಲೆನನ್ಮಗ , ಸರ್ವರ್ ಸೋಮಣ್ಣ , ಮಠ, ಎದ್ದೇಳು ಮಂಜುನಾಥ ಇನ್ನು ಹಲವಾರು ಚಿತ್ರಗಳಲ್ಲಿ ಅವರದೇ ಆದ ಒಂದು ವಿಶೇಷ ಛಾಪು ಮೂಡಿಸಿದ್ದಾರೆ. ಒಬ್ಬ ಹಾಸ್ಯನಟ, ನಾಯಕನಟ, ನಿರ್ದೇಶಕ ಹಾಗು ನಿರ್ಮಾಪಕನಾಗಿ ಹಲವಾರು ಚಲನಚಿತ್ರ ವಿಭಾಗಗಳಲ್ಲಿ ತಮ್ಮ ಕೌಶಲ್ಯ ಮೆರೆದಿದ್ದಾರೆ. ಕಲಾಕಾರನ ಬಣ್ಣದು ಬದುಕು, ತೆರೆಯ ಮೇಲೆಯೆ ಚಿತ್ರಣ ನಿಜಜೀವನದಲ್ಲಿ ಮುಖಾಮುಖಿಯಾದಾಗ ಕೆಲವೊಮ್ಮೆ ಸಂಪೂರ್ಣ ಭಿನ್ನವಾಗಿ ಕಾಣಿಸುವುದು ಸಹಜ. ವಿಶೇಷ ಮಾನ್ಯರಿಸಂ ನಟನೆಯ ಜಗ್ಗೇಶ್ ಅವರೊಡನೆ ಒಡನಾಟ, ಅವರ ಭಕ್ತಿ ಸಾರ ವಿಷಯಗಳು, ಹಿಂದೂ ಸಂಸ್ಕೃತಿ ವಿಷಯಗಳು, ತತ್ವದಿಂದ – ಹಾಸ್ಯಕ್ಕೆ ಸರಾಗವಾಗಿ ಬರುವ ರೀತಿ, ಕನ್ನಡ ಭಾಷಾ ಪ್ರಯೋಗ ಹಲವಾರು ಜನರನ್ನು ವಿಸ್ಮಯಗೊಳಿಸಿತು.  ಒಬ್ಬ ರಾಜಕೀಯ ಧುರೀಣನಾದ ನವರಸ ನಾಯಕನೊಡನೆ ಕಳೆದ ಯುಗಾದಿ ಮರೆಯಲಾರದ ನೆನಪನ್ನು ಉಳಿಸಿತು. ಮಾಜಿ ಶಾಸಕನಾಗಿ, ರಾಜಕೀಯದ ಅಖಾಡದಲ್ಲಿರುವ ಜಗ್ಗೇಶ್ ತಮ್ಮ ಭಕ್ತಿಯ ಚಿಂತನೆ, ಗುರುಗಳ ಅನುಗ್ರಹ, ಬೆಂಗಳೂರಿನ ಬಗ್ಗೆ ಹಲವಾರು ವಿಷಯಗಳನ್ನು ಹಂಚಿಕೊಂಡರು, ಅವರ ಮಾತುಗಳಲ್ಲೆ ಕೇಳೋಣ ಬನ್ನಿ.







**1. ನಿಮ್ಮ ಅನುಭವದಲ್ಲಿ ಭಕ್ತಿಯ ಚಿಂತನೆ ಎಂದರೇನು?**

ಜಗ್ಗೇಶ್: ನಾನೊಬ್ಬ ಸಾಮಾನ್ಯರಲ್ಲಿ ಸಾಮಾನ್ಯ ಭಕ್ತ. ನಮ್ಮ ತಾಯಿಯವರು ನನಗೆ ಹೇಳಿಕೊಟ್ಟ ಪಾಠ "ಅರ್ಪಣಾ ಮನೋಭಾವದಿಂದ ಆತ್ಮವನ್ನು ಶುದ್ದಿಯಾಗಿ ಇಟ್ಟುಕೊಂಡು ದೇವರು ಎಂಬ, ನಮ್ಮ ಹಿರಿಯರು ಹೇಳಿಕೊಟ್ಟ ಭಯವನ್ನು ನಂಬಿ ಮುಂದೆ ಹೋಗು, ನೀನು ಎಲ್ಲದರಲ್ಲೂ ಗೆಲ್ಲುತ್ತೀಯ". ಭಕ್ತಿ ಎಂದರೇನು? ಭಕ್ತಿ ಎಲ್ಲಿರುತ್ತದೆಯೋ ಅಲ್ಲಿ ಒಂದು ರೀತಿಯ ಭಯ ಹುಟ್ಟಿಕೊಳ್ಳುತ್ತೆ ಮತ್ತು ಆ ಭಯ ಬಂದರೆ ಮನುಷ್ಯ ತಂತಾನೇ ಪರಿಶುದ್ಧನಾಗಿ ಜೀವನದಲ್ಲಿ ಮುಂದಿನ ಹೆಜ್ಜೆ ಇಡುತ್ತಾನೆ.

**2. ನಿತ್ಯಜೀವನದಲ್ಲಿ ರಾಮಾಯಣದ ಜೀವನದ ತತ್ವ ?**

ಜಗ್ಗೇಶ್: ಮನುಷ್ಯನ ದೇಹವೇ ರಾಮಾಯಣ, ಹೃದಯವನ್ನು ರಾಮನಿಗೆ ಕೊಡಬಹುದು, ಚಿಂತನೆಯನ್ನು ರಾವಣನಿಗೆ ಕೊಡಬಹುದು. ಇವರ ಮಧ್ಯೆ ನಿರಂತರ ಯುದ್ಧ ನಡೆಯುತ್ತಿರುತ್ತದೆ,ಇದರಲ್ಲಿ ಮನಸ್ಸು ಗೆದ್ದಾಗ ಅಂದರೆ ಕೆಟ್ಟ ಆಲೋಚನೆಗಳು ಗೆದ್ದಾಗ ಅದು ರಾವಣನ ಗೆಲವು, ಹೃದಯ ಗೆದ್ದಾಗ ಅಂದರೆ ಒಳ್ಳೆಯ ಚಿಂತನೆ ಗೆದ್ದಾಗ, ಅದು ರಾಮನ ಗೆಲವು.

**3.ನೀವು ಮಂತ್ರಾಲಯ ಪ್ರಭುಗಳಾದ ಶ್ರೀ ರಾಘವೇಂದ್ರ ಸ್ವಾಮಿಯ ಭಕ್ತರು. ಅವರು ನಿಮ್ಮ ಜೀವನದ ಮೇಲೆ ಬೀರಿದ ಪ್ರಭಾವ ಏನು?**

ಜಗ್ಗೇಶ್: ನನ್ನ ಹೆಂಡತಿ ಪರಿಮಳ, ರಾಯರ ಗ್ರಂಥ ಪರಿಮಳ (ಪರಿಮಳಾ ಚಾರ್ಯರು ಬರೆದಿದ್ದು), ಮಕ್ಕಳು ಗುರುರಾಜ, ಯತಿರಾಜ. ಮೊಮ್ಮಗ ಅರ್ಜುನ. ಎಲ್ಲವೂ ಕಾಕತಾಳೀಯ. ಇಂದಿನ ನನ್ನ ಉನ್ನತಮಟ್ಟಕ್ಕೆ ರಾಯರ ಅನುಗ್ರಹವೆ ಕಾರಣ.

**4. ಕನ್ನಡದ ಇತಿಹಾಸ, ಕನ್ನಡತನ ,ಅನಿವಾಸಿ ಕನ್ನಡಿಗರೊಡನೆ ಕಳೆದ ಕ್ಷಣ... ನಿಮ್ಮ ಅನುಭವ ?**

ಜಗ್ಗೇಶ್: ಕನ್ನಡ ಇತಿಹಾಸದ ಎಲ್ಲಾ ದ್ರಾವಿಡ ಭಾಷೆಗಳಲ್ಲಿ ಅತ್ಯಂತ ಪ್ರಾಚೀನವಾದ ಭಾಷೆ, ಹಳಗನ್ನಡ, ನಡುಗನ್ನಡ ಹಾಗು ನವ್ಯಗನ್ನಡ. ಅಮೇರಿಕಾದಲ್ಲಿ ಜೀವನ ಸಂಸ್ಕೃತಿ ಬೇರೆಯಾದರೂ, ಮದುವೆ ಮುಂಚೆ ಮಕ್ಕಳು, ಲಿವ್ ಇನ್ ರಿಲೇಷನ್ ಷಿಪ್ ಇಲ್ಲಿ ಕಾಮನ್ ಆದರೂ, ಜನರೆಲ್ಲಾ ಸೇರಿ ಮಾಡುವ ಈ ಯುಗಾದಿ ಹಬ್ಬ, ಇಲ್ಲಿ ಜಾತಿ, ಮತ ಭೇದ ಭಾವ ಇಲ್ಲ ಅನ್ನುವುದನ್ನು ತೋರಿಸುತ್ತದೆ. ಎಲ್ಲಾ ಅನಿವಾಸಿ ಕನ್ನಡಿಗರಿಗೂ ಒಂದೇ ಜಾತಿ, ಅದೇ ಕನ್ನಡ ಜಾತಿ.

**5. ನೀವು ಬಿಜೆಪಿಯಲ್ಲಿ ಶಾಸಕರಾಗಿದ್ದವರು ,ಈಗ ಪ್ರಧಾನ ಮಂತ್ರಿ ಶ್ರೀ ಮೋದಿ ಅವರ ಬಗ್ಗೆ ಕೆಲವು ಮಾತುಗಳು.**

ಜಗ್ಗೇಶ್: ರಾಷ್ಟಕ್ಕೆ ಹೊಸ ಯಜಮಾನ ಬಂದ ಮೇಲೆ ದೇಶದಲ್ಲೆಡೆ ಬದಲಾವಣೆಯ ಗಾಳಿ ಬೀಸತೊಡಗಿದೆ. ನಮ್ಮ ಹಳೆಯ ಗಾದೆ "ಯಜಮಾನ ಇಲ್ಲದ ಮನೆ, ಮನೆ ಅಲ್ಲ, ಮಜ್ಜಿಗೆ ಇಲ್ಲದ ಊಟವಲ್ಲ" ಈಗ ಸಂಪೂರ್ಣ ಅನ್ವಯವಾಗಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಈ ಯಜಮಾನ ತಂದ ವರ್ಚಸ್ಸು, ರಾಷ್ಟಕ್ಕೆ ಹೆಚ್ಚಿದ ಗೌರವ ಅದ್ಬುತ. ಅವರ ಡಿಜಿಟಲ್ ಕ್ರಾಂತಿಯಲ್ಲಿ ಇಂದು ತರಕಾರಿ ಮಾರುವವರು, ಆಟೋದವರು ಎಲ್ಲರೂ ಭಾಗಿಗಳು. ಇನ್ನು ಹಲವಾರು ವರ್ಷ ಆದ ಮೇಲೆ, ಅಮೆರಿಕದಲ್ಲಿರುವ ಎಲ್ಲಾ ಸೌಲಭ್ಯ ಭಾರತದಲ್ಲಿ ಸಿಗಲಿದೆ, ಜನರಲ್ಲಿ ಇನ್ನು ಹೆಚ್ಚಿನ ಶಿಸ್ತು ಮೂಡಿ ಜನಜೀವನ ಸುಧಾರಿಸುವುದರಲ್ಲಿ ಎರಡು ಮಾತಿಲ್ಲ.

ಜಗ್ಗೇಶ್ ಅವರೊಂದಿಗೆ ಸಮಯ ಕಳೆಯುವುದು ಗೊತ್ತಾಗುವುದೇ ಇಲ್ಲಾ, ಬಂದಿದ್ದ ಎಲ್ಲರೊಡನೆ ಸೆಲ್ಫಿ, ಫೋಟೋಗಳಿಗೆ ಮುಖಮಾಡಿ, ವಿವಿಧ ನಟರ । ಮಿಮಿಕ್ರಿ ಮಾಡಿ, ಅಭಿಮಾನಿಗಳ ಡೈಲಾಗ್ ಗಳಿಗೆ ಚಪ್ಪಾಳೆ ತಟ್ಟಿ ಎಲ್ಲರಿಗೂ ಯುಗಾದಿಯ ಮರೆಯದ ಅನುಭವ ಕೊಟ್ಟರು.

# ಕರ್ನಾಟಕ ಕೋಗಿಲೆ ಬಿ.ಆರ್. ಛಾಯಾ

ಶ್ರೀಪರ್ಣಿಕಾ ಕಂಚಿ



**ಪರಿಚಯ:** **"**ಕರ್ನಾಟಕದ ಕೋಗಿಲೆ**"** ಎಂದೇ ಪ್ರಸಿದ್ಧಿಯಾಗಿರುವ ಬಿ.ಆರ್. ಛಾಯಾ, ಕನ್ನಡದ ಜನತೆಗೆ ಮನೆ ಮಾತಾಗಿರುವ ಗಾಯಕಿ. 30 ವರ್ಷಗಳಿಗೂ ಹೆಚ್ಚು ಕನ್ನಡದ ಸುಗಮ ಸಂಗೀತ , ಭಾವಗೀತೆ, ಜಾನಪದ ಗೀತೆ ಹಾಗು ಚಿತ್ರಗೀತೆಗಳನ್ನು ಸುಮಧುರವಾಗಿ ಹಾಡಿ ಕನ್ನಡಿಗರ ಮನ ಗೆದ್ದಿರುವ ಸುಪ್ರಸಿದ್ಧ ಗಾಯಕಿ. "ಹಿಂದೂಸ್ಥಾನವು ಎಂದೂ ಮರೆಯದ ಭಾರತ ರತ್ನವು ನೀನಾಗು " ಎಂಬ ಹಾಡಿನಿಂದ, ಕಣಗಾಲ್ ಪುಟ್ಟಣ್ಣ ಅವರ " ಅಮೃತ ಘಳಿಗೆ" ಚಿತ್ರದಿಂದ, ಚಿತ್ರರಂಗಕ್ಕೆ ಪ್ರವೇಶ ಮಾಡಿದ ಕಲಾವಿದೆ. ಈ ವರ್ಷದ ಬೃಂದಾವನ ವಸಂತೋತ್ಸವದಲ್ಲಿ ಕರ್ನಾಟಕದ ಗಾನ ಕೋಗಿಲೆ ಬಿ.ಆರ್ ಛಾಯಾ ಅವರ ಮಧುರ ಧ್ವನಿಯನ್ನು ಕೇಳಿ ಆನಂದಿಸುವ ಸದವಕಾಶ ದೊರಕಿದ್ದು, ನ್ಯೂಜೆರ್ಸಿ ಜನರ ಸೌಭಾಗ್ಯ ಅನ್ನಬಹುದು. ಅವರು ತಮ್ಮ ಸುಪ್ರಸಿದ್ಧ ಹಾಡುಗಳನ್ನು ಹಾಡಿ ಎಲ್ಲರ ಮನವನ್ನು ರಂಜಿಸಿದರು. ಹಾಡು ಹಳೆಯದಾಗಿದ್ದರೂ, ಅದೇ ಭಾವ ಇತ್ತು. ಬೃಂದಾವನ ವಸಂತೋತ್ಸವದಲ್ಲಿ ನನಗೆ ಅವರ ಜೊತೆ ಹಾಡುವ ಅವಕಾಶದೊಂದಿಗೆ, ಸಂದರ್ಶಿಸುವ ಅವಕಾಶವು ದೊರಕಿದ್ದು ಬಹಳ ಸಂತೋಷ ತಂದಿದೆ ಮತ್ತು ಆ ಸಂದರ್ಶನದ ಸಂಕ್ಷಿಪ್ತ ವರದಿ ಇಲ್ಲಿದೆ.

**1. ನಿಮ್ಮ ಬಾಲ್ಯದ ಯುಗಾದಿ ಅನುಭವ ಎಲ್ಲಿ? ಹೇಗಿತ್ತು ? ಹಾಗೂ ನಿಮಗೆ ಬಾಲ್ಯದಲ್ಲಿ ಸಂಗೀತ ಆಸಕ್ತಿಗೆ ಪ್ರೇರಣೆ ಯಾರು ?**

ಛಾಯಾ: ನನ್ನ ಬಾಲ್ಯ ಬೆಂಗಳೂರಿನ ಐ ಟಿ ಐ ಬಡಾವಣೆಯಲ್ಲಿ ಕಳೆದಿದ್ದು , ಬಾಲ್ಯದ ಯುಗಾದಿಯ ನೆನಪುಗಳು ಹಲವು, ಎಸ್. ಜಾನಕೀ ಅವರ ಮಧುರವಾದ "ಕುಲವಧು" ಚಿತ್ರದ ಹಾಡು "ಯುಗ ಯುಗಾದಿ ಕಳೆದರೂ" ಇದರಿಂದ ಪ್ರಾರಂಭವಾಗುತ್ತಿತ್ತು, ಮನೆಯಲ್ಲಿ ಹಬ್ಬದ ವಾತಾವರಣ. ಹಬ್ಬದ ವಿಶೇಷ ಅಡುಗೆ ಹೋಳಿಗೆ ಊಟ ಮನೆಯವರೊಡನೆ ಮಾಡಿದ ನೆನಪುಗಳು.

ನನ್ನದು ಸಂಗೀತದ ಕುಟುಂಬ, ನನ್ನ ತಾತ, ಅಜ್ಜಿ, ತಂದೆ ಹಾಗು ತಾಯಿ ಎಲ್ಲರೂ ಹಾಡುತ್ತಿದ್ದರು. ನನ್ನ ಅಜ್ಜಿ ತುಂಬಾ ಚೆನ್ನಾಗಿ ಹಾಡುತ್ತಿದ್ದರು, ನನಗೆ ಅವರಿಂದ ಸಂಗೀತದಲ್ಲಿ ಹೆಚ್ಚು ಆಸಕ್ತಿ ಬೆಳೆಯಿತು. ನನ್ನ ತಾತನವರು ಗುಬ್ಬಿ ವೀರಣ್ಣ ಕಂಪನಿಯಲ್ಲಿ ಹಾರ್ಮೋನಿಯಂ ನುಡಿಸುತ್ತಿದ್ದರು. ಚಿಕ್ಕ ವಯಸ್ಸಿನಲ್ಲಿ ಶಾಸ್ತ್ರೀಯ ಸಂಗೀತವನ್ನು ಕಲಿಯುತಿದ್ದ ನನಗೆ ಸುಗಮ ಸಂಗೀತ, ಚಲನ ಚಿತ್ರಗಳಲ್ಲಿ ಬಹಳ ಆಸಕ್ತಿ ಹುಟ್ಟಿತು.

**2. ನೀವು ಸುಗಮ ಸಂಗೀತ ಕ್ಷೇತ್ರದಲ್ಲಿ ಹಾಗು ಚಲನಚಿತ್ರ ರಂಗದಲ್ಲಿ ಹೆಸರು ಮಾಡಿರುವವರು, ನಿಮಗೆ ಇವೆರಡರಲ್ಲಿ ಇಷ್ಟವಾದ ಕ್ಷೇತ್ರ ಯಾವುದು ? ಏತಕ್ಕೆ ?**

ಛಾಯಾ: ನನಗೆ ಸಂಗೀತ ಅಂದರೇನೇ ತುಂಬ ಇಷ್ಟ. ಸುಗಮ ಸಂಗೀತವಿರಬಹುದು, ಚಲನಚಿತ್ರ ಗೀತೆಗಳಿರಬಹುದು ಎಲ್ಲವೂ ನನಗೆ ಇಷ್ಟ. ಸಂಗೀತದ ಏಳು ಸ್ವರ ಎಲ್ಲಿರುತ್ತದೆಯೋ ಅದೆಲ್ಲವೂ ನನಗೆ ಬಹಳ ಇಷ್ಟ.

**3. ಕನ್ನಡಿಗರಿಗೆ ಸುಗಮ ಸಂಗೀತದಲ್ಲಿ ಮುಂದೆ ಬರಲು ಯಾವ ಮಾರ್ಗಗಳಿವೆ ? ಅವರಿಗೆ ಕಿವಿ ಮಾತು ಏನು ?**



ಛಾಯಾ: ಹಾಡುಗಾರರಿಗೆ ನನ್ನ ಕಿವಿ ಮಾತು ಇದು:– "ಅವಕಾಶಗಳು ಎಲ್ಲೇ ಬಂದರೂ ಹಾಡಿ, ಸಂಗೀತದೊಂದಿಗೆ ಸದಾಕಾಲ ಇರಿ" . ಹಾಡನ್ನು ಯಾವಾಗಲೂ ಕೇಳಿ, ಹೊಸ

ಹಾಡುಗಳನ್ನು ಕಲಿಯಿರಿ. ಅವಕಾಶ ಬಂದಾಗ ಮಾತ್ರ ಅಭ್ಯಾಸ ಮಾಡದೆ ಪರಿಶ್ರಮ ನಿರಂತರವಾಗಿರಲಿ. ತುಂಬಾ ನಿರೀಕ್ಷೆ ಬೇಡ, ಪ್ರಯತ್ನ ನಿಮ್ಮದಾಗಲಿ , ಇಚ್ಛೆ ದೇವರದು.

**4. ಪ್ರತಿಭಾ ಪುರಸ್ಕಾರಗಳು ನಿಮಗೆ ಹಲವಾರು ಬಂದಿದೆ , ಅದರಲ್ಲಿ ನಿಮಗೆ ಅತ್ಯಂತ ಸಂತೋಷ ತಂದ ಕ್ಷಣ ಯಾವುದು?**

ಛಾಯಾ: ನನಗೆ ಅತ್ಯಂತ ಹೆಚ್ಚು ಸಂತೋಷ ತರುವ ಪ್ರಶಸ್ತಿ ಅಂದರೆ ನಾನು ಹೇಳಿದ ಹಾಡನ್ನು ಕೇಳಿ "ನಿಮ್ಮ ಹಾಡು ತುಂಬಾ ಚೆನ್ನಾಗಿತ್ತು" ಎಂದು ಜನರು ಹೇಳಿದಾಗ ಸಿಗುವ ಸಂತೋಷ ಬೇರೆ ಯಾವುದೇ ಪ್ರಶಸ್ತಿ, ಪುರಸ್ಕಾರದಿಂದ ಸಿಗುವುದಿಲ್ಲ. ಜನ ಪ್ರೀತಿಯಿಂದ ಪ್ರಶಸ್ತಿ ಕೊಡುತ್ತಾರೆ ಅದನ್ನು ಗೌರವದಿಂದ ತೆಗೆದುಕೊಳ್ಳುತ್ತೇನೆ. ಪ್ರಶಸ್ತಿಗಳು ಬರೀ ನಮಗೆ ಸಂತೋಷ ಕೊಡುವಂಥದ್ದು. ಬೇರೆಯವರಿಗೆ ಏನು ಖುಷಿ ಕೊಡುತ್ತದೆ ? ಆದ್ದರಿಂದ ನನಗೆ ಜನರು ಕೊಡುವ ಮೆಚ್ಚುಗೆಯ ಮಾತುಗಳೇ ನನಗೆ ನಿಜವಾದ ಪ್ರಶಸ್ತಿ.

**5. ನಿಮಗೆ ಸಂಗೀತ ಕ್ಷೇತ್ರದಲ್ಲಿ ಹೆಸರು ಮಾಡಬೇಕು, ಇದನ್ನೇ ನನ್ನ ವೃತ್ತಿಯಾಗಿ ತೆಗೆದುಕೊಳ್ಳಬೇಕು ಅಂತ ಅನ್ನಿಸಿದ್ದು ಯಾವಾಗ ?**

ಛಾಯಾ: ನನ್ನ ಅಜ್ಜಿ ಸದಾಕಾಲ ಹಾಡಲು ಪ್ರೋತ್ಸಾಹಿಸುತ್ತಿದ್ದರು ಹಾಗು ನನಗೂ ಚಿಕ್ಕಂದಿನಿಂದ ಬಹಳ ಆಸಕ್ತಿ ಇತ್ತು, ಹಾಗಾಗಿ ಹಾಡುವುದನ್ನೇ ವೃತ್ತಿಯನ್ನಾಗಿ ತೆಗೆದುಕೊಂಡೆ.

**6. ನೀವು ಹಲವಾರು ಸಂಗೀತ ನಿರ್ದೇಶಕರ ಜೊತೆ ಕೆಲಸ ಮಾಡಿದ್ದೀರಿ. ನಿಮಗೆ ಮೆಚ್ಚಿನ ನಿರ್ದೇಶಕರು ಯಾರು?**

ಛಾಯಾ: ನನಗೆ ಎಲ್ಲ ಸಂಗೀತ ನಿರ್ದೇಶಕರು ಇಷ್ಟ. ಏಳು ಸ್ವರದಿಂದ ಕೂಡಿದ ಸಂಗೀತ ನನಗೆ ಹೇಗೆ ಇಷ್ಟವೋ ಹಾಗೆಯೇ ಎಲ್ಲಾ ನಿರ್ದೇಶಕರು ಇಷ್ಟ. ಒಬ್ಬೊಬ್ಬರದು ಒಂದೊಂದು ಶೈಲಿ ಹಾಗಾಗಿ ಎಲ್ಲಾರೂ ಇಷ್ಟ.

**7. ನಿಮಗೆ ಇಷ್ಟವಾದ ರಾಗ ಯಾವುದು ಹಾಗೂ ಅದನ್ನು ಹೆಚ್ಚಾಗಿ ಉಪಯೋಗಿಸುವ ನಿರ್ದೇಶಕರು ಯಾರು ?**

ಛಾಯಾ: ನನಗೆ ಅತ್ಯಂತ ಇಷ್ಟವಾದ ರಾಗವೆಂದರೆ "ಮೋಹನ" ರಾಗ. ಹಲವಾರು ನಿರ್ದೇಶಕರು ಕಲ್ಯಾಣಿ , ಕೀರವಾಣಿ ಇನ್ನು ಇತರ ರಾಗಗಳಲ್ಲಿ ಸಂಗೀತವನ್ನು ರಚಿಸುತ್ತಾರೆ, ಆದರೆ ಹೆಚ್ಚಾಗಿ ಚಲನಚಿತ್ರ ಗೀತೆಗಳಲ್ಲಿ ಮಿಶ್ರ ರಾಗಗಳನ್ನು ಬಳಿಸುತ್ತಾರೆ. ಹಾಗಾಗಿ ಇಂಥದೆ ನಿರ್ದೇಶಕರು/ರಾಗ ಇಷ್ಟ ಅಂತ ಹೇಳುವುದಕ್ಕೆ ಆಗುವುದಿಲ್ಲ.

**8. ಮುಂಚಿನ ಸಂಗೀತ ಕ್ಷೇತ್ರಕ್ಕೂ ಈಗಿನ ಸಂಗೀತ ಕ್ಷೇತ್ರಕ್ಕೂ ಬದಲಾವಣೆಗಳು/ವ್ಯತ್ಯಾಸ ಇದೆಯಾ ? ನಿಮ್ಮ ಅಭಿಪ್ರಾಯವೇನು ?**

ಛಾಯಾ: ವ್ಯತ್ಯಾಸಗಳಿವೆ , ಆ ಕಾಲಕ್ಕೆ ಆ ಸಂಗೀತ ಚೆನ್ನಾಗಿತ್ತು , ಈಗಿನ ಕಾಲಕ್ಕೆ ಈ ಸಂಗೀತ ಚೆನ್ನಾಗಿದೆ. ಸ್ವಲ್ಪ ಫಾಸ್ಟ್ ಮ್ಯೂಸಿಕ್, ಆದರೆ ಇದು ಒಂದುತರಹ ಚೆನ್ನಾಗಿದೆ. "ಪರಿವರ್ತನೆ ಜಗದ ನಿಯಮ". ಕಾಲ ಕಾಲಕ್ಕೆ ಒಂದೊಂದು ರೀತಿಯ ಸಂಗೀತಗಳು,



ಸರಿ ತಪ್ಪು ಅಂತ ಹೇಳಲಾಗದು.

**9. ಮುಂಚಿನ ದಿನಗಳಲ್ಲಿ ಕ್ಯಾಸೆಟ್ಟು/ಟೇಪ್ ರೆಕಾರ್ಡರ್ ಇತ್ತು. ಈಗ ಡಿಜಿಟಲ್ /ಸ್ಟ್ರೀಮಿಂಗ್ ರೀತಿಯಲ್ಲಿ ಸಂಗೀತ ಬರುತ್ತಿದೆ , ಈ ಬದಲಾವಣೆ ಏನು ಅನ್ನಿಸುತ್ತದೆ ?**

ಟೆಕ್ನಾಲಜಿ ಬಂದ ಮೇಲೆ ಸಂಗೀತ ಹಾಡುವುದು ಸುಲಭವಾಗಿಬಿಟ್ಟಿದೆ. ಅಪಶ್ರುತಿ ಹಾಡಿದರೂ ಆಮೇಲೆ ಅದನ್ನು ಸರಿ ಮಾಡಬಹುದು. ಆಟೋಟ್ಯೂನಿಂಗ್ ಉಪಯೋಗಿಸುವುದು ನನಗೆ ಅಷ್ಟೊಂದು ಇಷ್ಟವಿಲ್ಲ. ಇದರಿಂದ ಯಾರಾದರೂ ಹಾಡನ್ನು ರೆಕಾರ್ಡ್‌ಯೇನೋ ಮಾಡಬಹುದು ಆದರೆ ಅವರು ಲೈವ್ ಹಾಡಿದಾಗ ಆ ತಪ್ಪುಗಳು ಎದ್ದು ಕಾಣುತ್ತದೆ.

ಆದರೆ ಬೇರೆಲ್ಲ ಪರಿವರ್ತನೆಗಳಿಗೆ ಕಾಲಕ್ಕೆತಕ್ಕಂತೆ ನಾವು ಹೊಂದ್ಕೋಬೇಕು.

**10. ಈಗ ಬೇರೆ ಭಾಷೆಯ ಹಾಡುಗಾರರನ್ನು ಹೆಚ್ಚಾಗಿ ಚಲನಚಿತ್ರಗಲ್ಲಿ ಬಳಸಿಕೊಳ್ಳುತ್ತಿದ್ದಾರೆ . ಇದಕ್ಕೆ ನಿಮ್ಮ ಅನಿಸಿಕೆ ಏನು ?**

ಒಂದೇ ವಾಕ್ಯದಲ್ಲಿ ಹೇಳಬೇಕೆಂದರೆ ಅದು ಅವರವರ ಪ್ರಾಪ್ತಿ. ಅವರು ಹಾಡಬೇಕಿತ್ತು ಅವರು ಹಾಡಿದರು. ಜೀವನದ ಈ ಸತ್ಯ ತಿಳಿದುಕೊಂಡರೆ ನಮಗೆ ನಿರಾಶೆ ಆಗೋದಿಲ್ಲ. ಪ್ರಯತ್ನ ನಮ್ಮದು ಇಚ್ಛೆ ದೇವರದು.

**11. ಬೇರೆ ಭಾಷೆಗಳಲ್ಲಿ ಸುಗಮ ಸಂಗೀತ ಹಾಡಿದ್ದೀರಾ?**

ಕೊಂಕಣಿ, ತುಳು ಭಾಷೆಗಳಲ್ಲಿ ಹಾಡಿದ್ದೀನಿ. ಆದರೆ ಬೇರೆ ಯಾವ ಭಾಷೆಯಲ್ಲೂ ಹಾಡಿಲ್ಲ.

ಬಿ.ಆರ್. ಛಾಯಾ ಅವರ ಹಾಡುಗಳು, ಮಾತು ಹಾಗೂ ಮನಸ್ಸು ಎಲ್ಲವೂ ಅತಿ ಮಧುರ. ನಮ್ಮ ಎಲ್ಲಾ ಪ್ರಶ್ನೆಗಳಿಗೆ ತಾಳ್ಮೆಯಿಂದ ಉತ್ತರಿಸಿದರು ಹಾಗೂ ಹಲವಾರು ತಾತ್ವಿಕ ಉತ್ತರಗಳು.ಅವರ ಸಂಗೀತ ಸುಧೆಯ ಧಾರೆಯಂತಿತ್ತು. ಅವರನ್ನು ಸಂದರ್ಶಿಸಿ ಅವರ ಬಗ್ಗೆ ತಿಳಿದುಕೊಳ್ಳುವ ಅವಕಾಶ ಮಾಡಿಕೊಟ್ಟ ಅವರಿಗೆ ಬೃಂದಾವನದ ಪರವಾಗಿ ತುಂಬುಹೃದಯದ ಧನ್ಯವಾದಗಳು.

# ೨೦೧೭ ಬೃಂದಾವನ ವನವಿಹಾರ



ಮಹೇಶ್ ರಂಗಸ್ವಾಮಿ

ಜುಲೈ 8, 2017 ಶನಿವಾರದಂದು, ನ್ಯೂಜೆರ್ಸಿಯ ಕನ್ನಡ ಜನತೆಗೆ ನಮ್ಮ ನಾಡು, ನುಡಿ ಹಾಗು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರ ಬಿಂದುವಾದ ಬೃಂದಾವನ ಕನ್ನಡ ಕೂಟ ವನವಿಹಾರವನ್ನು (picnic) ಹಮ್ಮಿಕೊಂಡಿದ್ದರು.

ಇಸಲಿನ್ ನಗರದ ಮೇರಿಲ್ ಪಾರ್ಕ್ ನಲ್ಲಿ ನಡೆದ ವನವಿಹಾರಕ್ಕೆ, ಸುಮಾರು 400ಕ್ಕೂ ಹೆಚ್ಚಿನ ಮಂದಿ ಕನ್ನಡಿಗರು ಆಗಮಿಸಿ ನಾನಾ ಚಟುವಟಿಕೆಗಳಲ್ಲಿ ಭಾಗವಹಿಸಿ ಆನಂದಿಸಿದರು. ಹಿರಿಯರು, ಕಿರಿಯರು ಹಾಗೂ ಮುಖ್ಯವಾಗಿ ಕರ್ನಾಟಕದಿಂದ ಆಗಮಿಸಿದ್ದ ಅಜ್ಜ, ಅಜ್ಜಿಯರು ಎಲ್ಲರೊಂದಿಗೆ ಕಳೆದ ಸಮಯ ಅವಿಸ್ಮರಣೀಯ!



ಬೃಂದಾವನ ಅಭಿಮಾನಿ ತಂಡ ಆಯೋಜಿಸಿದ್ದ ಕಾರ್ಯಕ್ರಮಗಳು ಎಲ್ಲಾ ವಯಸ್ಸಿನವರನ್ನು ಮನದಲ್ಲಿಟ್ಟುಕೊಂಡು ತಯಾರಿ ಮಾಡಿದಂತಿತ್ತು. ಸುಮಾರು ಬೆಳಿಗ್ಗೆ 10:30ಕ್ಕೆ ಯೋಗದಿಂದ ಪ್ರಾರಂಭಗೊಂಡ ಕಾರ್ಯಕ್ರಮ, ನಂತರ ಚಾರಿಟಿ ಅಂಗವಾಗಿ ಹಮ್ಮಿಕೊಂಡಿದ್ದ 5 ಕಿ. ಮೀ ಮತ್ತು 10 ಕಿ. ಮೀ ಓಟದಲ್ಲಿ 85ಕ್ಕೂ ಹೆಚ್ಚು ಉತ್ಸಾಹಿ ಓಟಗಾರರು ಭಾಗವಹಿಸಿದರು. ಈ ಓಟಗಾರರನ್ನು ಉತ್ತೇಜಿಸಿ ಹಾಗು ದಣಿದವರಿಗೆ ನೀರಿನ ನೆರವು ನೀಡಿದ ಸ್ವಯಂಸೇವಕರ ಹಾಸ್ಯಲಾಸ್ಯಗಳು ನೋಡುಗರ ಮನಸ್ಸಿಗೆ ಮುದ ಕೊಟ್ಟಿತು. ಓಟ ಮುಗಿಯುತ್ತಿದ್ದಂತೆಯೇ, ಮರಗಳ ನೆರಳಿನಲಿ ಊಟದ ವ್ಯವಸ್ಥೆ ಮಾಡಲಾಗಿತ್ತು, ಚಪಾತಿ, ಪಲ್ಯ, ಮಾವಿನಕಾಯಿ ಚಿತ್ರಾನ್ನ, ತೆಂಗಿನಕಾಯಿ ಚಟ್ನಿ, ಮೊಸರನ್ನ, ಉಪ್ಪಿನಕಾಯಿ, ಗುಲಾಬ್ ಜಾಮೂನ್ ರಸಭರಿತವಾಗಿತ್ತು. ಹಾಗೂ ಊಟದ ಇನ್ನೊಂದು ವಿಶೇಷ ವೇನೆಂದರೆ, ಉಪಚರಿಸಿ, ಬಡಿಸಿದರವರು ನಮ್ಮ ಕನ್ನಡದ ಪುಟಾಣಿಗಳು. ಅವರು ಉಪಚರಿಸಿದ ರೀತಿ, ಬಡಿಸಿದ ಬಗೆ ಎಲ್ಲರನ್ನು ಆಶ್ಚರ್ಯಚಕಿತರನ್ನಾಗಿಸಿತ್ತು. ಊಟ ಮುಗಿಸಿ ವಿಶ್ರಮಿ ಸುತ್ತಿರಲು, ಕಾಫಿ ಹಾಗು ಮಸಾಲೆ ಮಜ್ಜಿಗೆಯ ಉಪಚಾರ, ನಡುವೆ ಸುಮಧುರ ಕನ್ನಡ ಚಲನಚಿತ್ರ ಗೀತೆಗಳು ಎಲ್ಲರ ಮೈಮರೆಸಿತ್ತು.

ವಿಶ್ರಾಂತಿ ಪಡೆದ ಸ್ವಲ್ಪ ಸಮಯದಲ್ಲೇ, ವಯಸ್ಸಿಗೆ ಅನುಗುಣವಾಗಿ ವೈವಿಧ್ಯಮಯ ಆಟಗಳನ್ನು ಆಯೋಜಿಸಲಾಗಿತ್ತು. ಅಜ್ಜ–ಅಜ್ಜಿಯರಿಗೆ: ಚೌಕಬಾರಾ, ಮ್ಯುಸಿಕಲ್ ಚೇರ್, ಜ್ಞಾಪಕ ಸ್ಪರ್ಧೆ (Memory Game), 100 ಮೀಟರ್ ನಡೆಯುವ ಸ್ಪರ್ಧೆ, ಚಿಕ್ಕ ಮಕ್ಕಳು ಹಾಗು ಕಿರಿಯರಿಗೆ : ಮ್ಯುಸಿಕ್ ಚೇರ್, 50 ಮೀ. ಓಟ, ಚೆಂಡನ್ನು ಬಕೆಟ್ಟಿಗೆ ಎಸೆಯುವುದು, ಮತ್ತು ಲಗೋರಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು, ಚೆಣ್ಣರ ಸ್ಫೂರ್ತಿದಾಯಕ ಆಟಗಳು ನಮ್ಮೆಲ್ಲರನ್ನು ನಮ್ಮ ಬಾಲ್ಯಕ್ಕೆ ಕರೆದೊಯ್ದಿತ್ತು. ಯುವಕ, ಯುವತಿಯರಿಗೆ ಆಯೋಜಿಸಿದ್ದ 100 ಮೀ. 400 ಮೀ. ಓಟ, ವಾಲಿಬಾಲ್, ನೀರು ತುಂಬಿದ ಬಲೂನ್ ಗಳ ಕ್ರೀಡೆ ಬಹಳ ಮೋಜು ತಂದಿತು. ಅಷ್ಟೇ ಅಲ್ಲದೆ, ಪುರುಷರ ಕ್ರಿಕೆಟ್ ಆಟ ಭರ್ಜರಿಯಾಗಿತ್ತು. ಈ ಬಾರಿ ಕ್ರಿಕೆಟ್ ಆಟದಲ್ಲಿ ತುಂಬಾ ಜನರು ಆಸಕ್ತಿ ತೋರಿದ್ದರಿಂದ ನಾಲ್ಕು ತಂಡ ಮಾಡಿ ಆಡಿಸಬೇಕಾಯಿತು.

ಈ ನಡುವೆ, ಬೃಂದಾವನ ಪುರುಷರು ಕಲ್ಲಂಗಡಿ ಹಣ್ಣುಗಳನ್ನು ಹೆಚ್ಚಿ ವಿತರಿಸುತ್ತಿರಲು, ಬೃಂದಾವನ ಬೆಡಗಿಯರು ಮತ್ತೊಂದೆಡೆ ಭೇಲ್ ಪುರಿಯ ತಯಾರಿಯಲ್ಲಿ ಮಗ್ನರಾಗಿದ್ದರು, ಒಟ್ಟಾರೆ ಆಗಮಿಸಿದ ಎಲ್ಲಾ ಅತಿಥಿಗಳಿಗೆ ಸ್ವಲ್ಪವೂ ಅಡಚಣೆಯಾಗದಂತೆ ನೋಡಿಕೊಂಡ ಎಲ್ಲಾ ಸ್ವಯಂಸೇವಕರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು. ಗಗನದಲ್ಲಿ ಸೂರ್ಯನು ಜಾರುತಿರಲು, ಕನ್ನಡ ಡಿ. ಜೆ. ಯವರ ಸಂಗೀತ ಸಂಜೆಯಲ್ಲಿ ಮೈಮರೆತ ಕನ್ನಡ ಕುಲಬಾಂಧವರು ಸಣ್ಣ ಹೆಜ್ಜೆ ಹಾಕುತ್ತಾ ಕುಣಿತದಲ್ಲಿ ತಲ್ಲೀನರಾಗಿದ್ದರು, ಕಿರಿಯರ ನೃತ್ಯ ವೈಭವ ನೋಡುಗರ ಮೆಚ್ಚುಗೆಯಾಗಿತ್ತು.

ದಿನವಿಡೀ ಆಟ, ಊಟ, ಓಟಗಳ ನಡುವೆ ಸಮಯ ಕಳೆದ ಅರಿವೇ ನಮಗಾಗಲಿಲ್ಲ, ಕೊನೆಗೆ ಸ್ಪರ್ಧೆಯಲ್ಲಿ ಭಾಗವಹಿಸಿದವರಿಗೆ, ಗೆದ್ದ ಕ್ರೀಡಾಪಟುಗಳಿಗೆ, ನೆರೆದ ಹಿರಿಯರ ನೇತೃತ್ವದಲ್ಲಿ ಅಭಿನಂದನ ಪತ್ರ ಹಾಗೂ ಪ್ರಶಸ್ತಿಗಳನ್ನು ವಿತರಿಸಿ ಗೌರವಿಸಲಾಯಿತು. ಬೃಂದಾವನ ಅಭಿಮಾನಿ ತಂಡ, ಆಗಮಿಸಿದ ಕನ್ನಡದ ಬಂಧುಗಳಿಗೆಲ್ಲ ಧನ್ಯವಾದಗಳನ್ನು ಅರ್ಪಿಸುತ್ತಾ, ಸ್ಮರಣೀಯ ವನವಿಹಾರ ಮುಕ್ತಾಯಗೊಳಿಸಿತು.

# ೨೦೧೭ ಗಣೇಶೋತ್ಸವ

ಅನಿಲ್ ಭಾರದ್ವಾಜ



ಬೃಂದಾವನ ಅಭಿಮಾನಿ ತಂಡ ಸೆಪ್ಟೆಂಬರ್ 23, ಶನಿವಾರದಂದು ಏರ್ಪಡಿಸಿದ್ದ, ಗಣೇಶ ಹಬ್ಬದ ಸಮಾರಂಭ ಬಹಳ ಯಶಸ್ವಿಯಾಗಿ ಜರುಗಿತು. ಉನ್ನತ ಮಟ್ಟದ ಕಾರ್ಯಕ್ರಮಗಳ ಭಾರಿ ಸಾಲುಗೂಡಿಕೆಯು ಆಗಿತ್ತು. ಮಕ್ಕಳಿಂದ ವಿಶೇಷ ಕನ್ನಡ ಪೂಜೆ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದ ವಿಶೇಷವೆಂದರೆ, ಮಕ್ಕಳು ಗಣೇಶನಿಗೆ ಪೂಜೆ ಸಲ್ಲಿಸುವುದಲ್ಲದೆ, ಗಣೇಶನ ಪ್ರತಿಮೆಯನ್ನು ಸ್ವತಃ ತಾವೇ ರಚಿಸಿಕೊಂಡರು. ಮಕ್ಕಳಿಗೆ ಧರ್ಮ ಮತ್ತು ಕಲೆಯನ್ನು ಒಂದೇ ಚಟುವಟಿಕೆಯಲ್ಲಿ ಅನುಭವಿಸುವ ಅವಕಾಶ ಸಿಕ್ಕಿತು.

ಸಮಕಾಲಿಕವಾಗಿ, ರಂಗವರ್ತುಲ ತಂಡದವರಿಂದ ಪ್ರಶಸ್ತಿ-ವಿಜೇತ ನಾಟಕ 'ವೇಷ' ಮುಖ್ಯ ವೇದಿಕೆಯ ಮೇಲೆ ನಡೆಯಿತು. ರಂಗವೇಷ ಹಾಕುವ ಒಬ್ಬ ಕಲೆಗಾರನನ್ನು ಹೊರಪ್ರಪಂಚ ಹೇಗೆ ಆ ಪಾತ್ರದಂತೆಯೇ ಗುರುತಿಸುತ್ತದೆ, ಅದರಿಂದ ಆ ಕಲೆಗಾರನ ಮಾನಸಿಕ ಸ್ಥಿತಿಗೆ ಆಗುವ ಪರಿಣಾಮ, ಕೊನೆಗೆ ಅವನು ಹೇಗೆ ಆ ವೇಷ ಕಳಚಿಹಾಕಿ, ವಿಮುಕ್ತನಾಗಿ, ತನ್ನ ಸಹಜ ವ್ಯಕ್ತಿತ್ವವನ್ನು ವಾಪಸ್ಸು ಪಡೆದುಕೊಳ್ಳುವನು ಎಂಬ, ಒಂದು ಸೂಕ್ಷ್ಮವಾದ, ಪಕ್ವವಾದ ವಿಷಯವನ್ನು, ಮಿರುಗುವ ಅಭಿನಯದಿಂದ ಪ್ರದರ್ಶಿಸಿ. ಪ್ರೇಕ್ಷಕರನ್ನು ಸೆರೆಹಿಡಿದರು.





ತದನಂತರ, ತಬಲಾ ನಾಣಿಯವರ ಹಾಸ್ಯರಂಜನಿ ತಂಡದಿಂದ ವಿಭಿನ್ನವಾದ ಹಾಸ್ಯದ ಕಿರುನಾಟಕಗಳು ಪ್ರಸ್ತುತವಾಯಿತು. ಅದು ಮುಂದಿನ ಸುಧಾ ಬರಗೂರ್ ಅವರ ಭರ್ಜರಿಯಾದ ನಿಂತು ಹೇಳುವ ಹಾಸ್ಯದ ಚುಟುಕಗಳ ಸುರಿಮಳೆಗೆ ಭೂಮಿಕೆಯಂತಿತ್ತು. ಅದಕ್ಕೆ ಮುನ್ನ ಶ್ರೀಮತಿ ಸುಧಾ ಬರಗೂರ್ ಅವರು, ಸಾಹಿತ್ಯ ಬೃಂದಾವನ ತಂಡ ಹೊರತಂದ 'ಬದುಕು ಜಟಕಾ ಬಂಡಿ' ಎಂಬ ಕಿರುಕಥೆಗಳ ಸಂಗ್ರಹವನ್ನು ಬಿಡುಗಡೆ ಮಾಡಿದರು. 'ಬದುಕು ಜಟಕಾ ಬಂಡಿ' ಪುಸ್ತಕದ ವೈಶಿಷ್ಟ್ಯವೇನೆಂದರೆ, ಅದು ಹವ್ಯಾಸಿ ಬರಹಗಾರರಾದ ಅಮೆರಿಕನ್ನಡಿಗರು ಬರೆದಿರುವ ಕಥೆಗಳ ಗುಚ್ಛ. ಶ್ರೀಮತಿ ಸುಧಾ ಬರಗೂರ್ ಅವರು ಅಮೆರಿಕನ್ನಡಿಗರಿಗಿರುವ ಈ ಕನ್ನಡ ಸಾಹಿತ್ಯದ ಮೇಲಿನ ಒಲವನ್ನು ತುಂಬುಹೃದಯದಿಂದ ಶ್ಲಾಘಿಸಿದರು.

ಹಾಸ್ಯದ ರಸದೌತಣದ ನಂತರ, ನೆರೆದ ಕನ್ನಡಾಭಿಮಾನಿಗಳಿಗೆ ಸ್ವಾದಿಷ್ಟವಾದ ಹಬ್ಬದೂಟ ಭೋಜನಶಾಲೆಯಲ್ಲಿ ಕಾದಿತ್ತು. ಬೃಂದಾವನ ತಂಡದ ಸ್ವಯಂಸೇವಕರು, ಊಟದ ವ್ಯವಸ್ಥೆಯನ್ನು ಬಹಳ ಎಚ್ಚರಿಕೆಯಿಂದ, ಅಚ್ಚುಕಟ್ಟಾಗಿ ಮಾಡಿದ್ದು, ಮನಸ್ಸಿಗೆ ಊಟದಲ್ಲಿ ತಿಂದ ಮೋದಕದಷ್ಟೇ ಮುದನೀಡಿತ್ತು.

ಮನೋರಂಜನಾ ಕಾರ್ಯಕ್ರಮ ಅಲ್ಲಿಗೇ ನಿಲ್ಲಲಿಲ್ಲ. ಊಟದ ನಂತರ 'ತರಂಗ' ತಂಡದಿಂದ ಫ್ಯೂಷನ್ ವಾದ್ಯಗೋಷ್ಠಿ ಏರ್ಪಡಿಸಲಾಗಿತ್ತು.

ಬಹುಮುಖ ಪ್ರತಿಭೆಯುಳ್ಳ ತಂಡದ ಸದಸ್ಯರು, ವಿವಿಧ ಸಂಗೀತ ಶೈಲಿಗಳಲ್ಲಿ ಹಾಡುಗಳನ್ನು ಹಾಡಿ, ಸೂಕ್ತವಾದ ಭಾರತೀಯ ಹಾಗು ವಿದೇಶೀಯ ವಾದ್ಯಗಳನ್ನು ಮನಕ್ಕೊಪ್ಪುವಂತೆ ನುಡಿಸಿದರು. ಮುಕ್ತಾಯದಲ್ಲಿ ಅವರು ಹಾಡಿದ ಜಬರ್ದಸ್ತಿನ ಹಾಡುಗಳಿಗೆ ಸಭಿಕರು ಕುಣಿದು ಕುಪ್ಪಳಿಸಿದರು. ಬೃಂದಾವನ ಸಂಘದ ಮುಂದಿನ ಮನೋರಂಜನಾ ಕಾರ್ಯಕ್ರಮ ಆಗಲೇ ಎದುರುನೋಡುತ್ತಾ, ನೆರೆದ ಅತಿಥಿಗಳು ಆಹ್ಲಾದಕರವಾಗಿದ್ದ ಸಂಜೆಗೆ ವಿದಾಯ ಹೇಳಿದರು.

# ೨೦೧೭ ಬೃಂದಾವನ ಮಕ್ಕಳೋತ್ಸವ

ಅನಿಲ್ ಭಾರದ್ವಾಜ



2017ರ ಡಿಸೆಂಬರ್ 10, ಭಾನುವಾರದಂದು , ನ್ಯೂಜೆರ್ಸಿಯ ಬೃಂದಾವನ ಕನ್ನಡ ಕೂಟದ ವತಿಯಿಂದ ಮಕ್ಕಳೋತ್ಸವ ಕಾರ್ಯಕ್ರಮ ಬಹಳ ವಿಜೃಂಭಣೆಯಿಂದ ಜರುಗಿತು.

ಈಸ್ಟ್ ಬ್ರನ್ವಿಕ್ ಪ್ರೌಢಶಾಲೆಯಲ್ಲಿ ನಡೆದ ಈ ಕಾರ್ಯಕ್ರಮ ಅಭಿಮಾನಿ ತಂಡದ ವಾರ್ಷಿಕ ವರದಿ ಮತ್ತು ಮಕ್ಕಳ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಿಂದ ಶುರುವಾಯಿತು. ಪುಟ್ಟ ಚಿಣ್ಣರಿಂದ ಹಿಡಿದು ಹದಿವಯಸ್ಸಿನ ಮಕ್ಕಳು ಈ ಸ್ಪರ್ಧೆಗಳಲ್ಲಿ ಬಹಳ ಉತ್ಸಾಹದಿಂದ ಪಾಲ್ಗೊಂಡರು. ಹಲವಾರು ವೇದಿಕೆ ಹಾಗೂ ಕೊಠಡಿಗಳಲ್ಲಿ ಏಕಕಾಲದಲ್ಲಿ ನಡೆಯುತ್ತಿದ್ದ ಸ್ಪರ್ಧೆಗಳಲ್ಲಿ, ಮೇಲೆ-ಕೆಳಗೆ ಓಡಾಡುತ್ತಿದ್ದ ಸ್ಪರ್ಧಿಗಳು, ಅವರ ಪೋಷಕರು ಹಾಗು ತೀರ್ಪುಗಾರರು ಹಬ್ಬದ ಸಡಗರದ ವಾತಾವರಣ ಮೂಡಿಸಿದ್ದರು. ಭಾಗವಹಿಸಿದ ಎಲ್ಲಾ ಮಕ್ಕಳ ಮೊಗದಲ್ಲಿ ಒಂದು ರೀತಿಯ ಗೆಲುವಿನ ಮಿನುಗು ಕಾಣುತ್ತಿತ್ತು.

ನಂತರ ಮುಖ್ಯ ವೇದಿಕೆಯ ಮೇಲೆ ಬೃಂದಾವನ ಕನ್ನಡ ಶಾಲೆಯ ಮಕ್ಕಳು ಸಂಕೇತಗೀತೆ 'ಕನ್ನಡದ ಕುಲದೇವಿ' ಮತ್ತು 'ಕಲಿಸು ಗುರುವೇ ಕಲಿಸು' ಎಂಬ ಹಾಡನ್ನು ಹೇಳಿದರು. ಆ ಹಾಡಿನ ಗಾಢವಾದ ಅರ್ಥ ಹಾಗು ಮಕ್ಕಳು ಅದನ್ನು ಅಚ್ಚುಕಟ್ಟಾಗಿ ಪ್ರಸ್ತುತಪಡಿಸಿದ್ದು ಬಹಳ ಜನರ ಮೆಚ್ಚುಗೆ ಪಡೆಯಿತು. "ನಾದ ಬೃಂದಾವನ" ಹಾಗು "ನೃತ್ಯ ವೃಂದಾವನ" ಎಂಬ ವಿಶಿಷ್ಟ ಕಾರ್ಯಕ್ರಮಗಳಲ್ಲಿ, ನ್ಯೂಜೆರ್ಸಿಯಲ್ಲಿ ಕನ್ನಡಿಗರು ನಡೆಸುವ, ಹಲವಾರು ಸಂಗೀತ ಮತ್ತು ನೃತ್ಯಶಾಲೆಗಳ ಮಕ್ಕಳು ಶಾಸ್ತ್ರೀಯ ಸಂಗೀತ ಹಾಗೂ ನೃತ್ಯ ಪ್ರದರ್ಶನ ಮಾಡಿದರು. ಈ ಮಕ್ಕಳು ದಾಸರ ಮತ್ತು ಶರಣರ ಪದಗಳನ್ನು ಹಾಡಿ ಮತ್ತು ವಿಭಿನ್ನವಾದ ಅಭಿನಯಮಾಡಿ ಎಲ್ಲರ ಮನಸೆಳೆದರು. ಈ ಶಾಲೆಗಳ ಗುರುಗಳನ್ನು ಬೃಂದಾವನ ಕನ್ನಡ ಕೂಟ ಗೌರವಿಸಿತು.

ಬೃಂದಾವನ ಕನ್ನಡ ಶಾಲೆಯ ಮಕ್ಕಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಈಸ್ಟ್ ವಿಂಡ್ಸರ್ ಶಾಲೆಯ ಮಕ್ಕಳು ಪ್ರಸ್ತುತಪಡಿಸಿದ 'ಕರುನಾಡ ತಾಯಿ ಸದಾ ಚಿನ್ಮಯಿ' ರೂಪಕ ಕರ್ನಾಟಕದ ಶ್ರೀಮಂತ ಇತಿಹಾಸವನ್ನು 'ವಿಶ್ವವಿನೂತನ ವಿದ್ಯಾಚೇತನ' ಹಾಡನ್ನು ಆಧರಿಸಿ ಬಹಳ ಸೊಗಸಾಗಿ ಪರಿಚಯಿಸಿಕೊಟ್ಟಿತು. ವಿವಿಧ ಕನ್ನಡ ಸಾಮ್ರಾಜ್ಯಗಳ ಅರಸುಗಳು, ವೀರ ಯೋಧರು ಹಾಗು ವನಿತೆಯರ ವೇಷ ಧರಿಸಿದ್ದ ಮಕ್ಕಳನ್ನು ಸಭಿಕರು ತುಂಬುಹೃದಯದಿಂದ ಹುರಿದುಂಬಿಸಿದರು.

ಏತನ್ಮಧ್ಯೆ, ರುಚಿಕರವಾದ ಭೋಜನ ಮಧ್ಯಾಹ್ನದ ಹೊತ್ತಿನಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಕೊನೆಯಲ್ಲಿ ಬೃಂದಾವನದ ಕನ್ನಡ ಬೆಡಗಿಯರಿಂದ ಫ್ಯಾಷನ್ ಶೋ ನಡೆಯಿತು. ಈ ಕಾರ್ಯಕ್ರಮದ ವೈಶಿಷ್ಟ್ಯವೇನೆಂದರೆ ರೇಷ್ಮೆ ಸೀರೆಗಳ ಮೂಲಕ ಪ್ರಕೃತಿಯ ವಿವಿಧ ಬಣ್ಣಗಳನ್ನು, ತಾಯಿ-ಮಗಳ ಪ್ರೀತಿಯನ್ನು ತೋರಿಸುವುದು ಇತ್ಯಾದಿ. ಕಾಮನಬಿಲ್ಲಿನ ಎಲ್ಲ ಬಣ್ಣಗಳನ್ನು ಜಾಗರೂಕವಾಗಿ ಮಿಶ್ರಿಸಿ, ಜಾದು ಮಾಡಿ ತಯಾರಿಸಿದಂತಿತ್ತು ಆ ಬಣ್ಣಗಳು. ಭಾರತದ ಹಾಗು ವಿಶಿಷ್ಟವಾಗಿ ಕರ್ನಾಟಕದ ಸೀರೆಯ ಕಲೆಗಳನ್ನು ಅಂದವಾಗಿ ಪ್ರದರ್ಶಿಸಿದರು ಆ ಮಹಿಳೆಯರು. ಬೃಂದಾವನ ಕನ್ನಡ ಕೂಟ ಹಾಗು ಅಭಿಮಾನಿ ತಂಡದ ಈ "ಮಕ್ಕಳೋತ್ಸವ" ಕಾರ್ಯಕ್ರಮ ಬಹಳ ಯಶಸ್ವಿಯಾಗಿ ನಡೆಯಿತು.



ಸಹ್ಯಾದ್ರಿಯು ಸಹನೆ ಕಳೆದುಕೊಳ್ಳುತ್ತಿದೆ. ಈ ಸಹ್ಯ ಪರ್ವತವು ಈಗ ಅಸಹ್ಯ ಪರ್ವತವಾಗುತ್ತಿದೆ
• ನಾಗೇಶ ಹೆಗಡೆ

# ೨೦೧೮ ಬೃಂದಾವನ ವಸಂತೋತ್ಸವ





ಅನಿಲ್ ಭಾರದ್ವಾಜ

ಏಪ್ರಿಲ್ 28, 2018, ನ್ಯೂ ಜೆರ್ಸಿ – ಬೃಂದಾವನ ಕನ್ನಡ ಕೂಟದ ವತಿಯಿಂದ ವಸಂತೋತ್ಸವ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಮಧ್ಯಾಹ್ನ 1:30 ಘಂಟೆಯಿಂದ ಸುಮಾರು ರಾತ್ರಿ ಹತ್ತರವರೆಗೆ ಅಭಿಮಾನಿ ತಂಡದವರು ಭರ್ಜರಿ ಮನೋರಂಜನಾ ಕಾರ್ಯಕ್ರಮದ ಸಾಲುಗೂಡಿಸಿದ್ದರು.

ಬೃಂದಾವನ ಕನ್ನಡ ಶಾಲೆಯ ಮಕ್ಕಳು ವಿಘ್ನೇಶ್ವರನ ಪ್ರಾರ್ಥನೆ, ಸಂಕೇತ ಗೀತೆ ಮತ್ತು ರಾಷ್ಟ್ರಗೀತೆಗಳಿಂದ ಕಾರ್ಯಕ್ರಮ ಶುರುಮಾಡಿದರು. ತದನಂತರ ಜೋಯಿಸರಿಂದ ಪಂಚಾಂಗ ಶ್ರವಣ ಮತ್ತು ಬೇವು-ಬೆಲ್ಲದ ವಿತರಣೆ ಆಯಿತು. ಅವರು ಎಲ್ಲ ರಾಶಿಗಳ ಫಲಾಫಲಗಳು, ಯೋಗಗಳನ್ನು ಸಂಕ್ಷಿಪ್ತವಾಗಿ ತಿಳಿಸಿಕೊಟ್ಟರು. ಯುಗಾದಿ ಹಬ್ಬದ ಆಚರಣೆಯಲ್ಲದೆ, ಆ ದಿನದ ವಸ್ತು ವಿಶೇಷವೆಂದರೆ ತಾಯಿಯನ್ನು ಆರಾಧಿಸುವುದಾಗಿತ್ತು. ಅದಕ್ಕೆ ಪೂರಕವಾಗಿ ಕನ್ನಡ ಚಿತ್ರರಂಗದ ಹೆಸರಾಂತ ಹಿರಿಯ ನಟಿ ಹರಿಣಿಯವರು ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಉಪಸ್ಥಿತರಾಗಿದ್ದರು.

ಎಂದಿನಂತೆ ಹಲವು ಬೃಂದಾವನ ಕನ್ನಡ ಶಾಲೆಯ ಮಕ್ಕಳು ವಿವಿಧ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿದರು. ಸೌತ್ ಬ್ರನ್ಸ್ವಿಕ್ ಶಾಲೆಯ ಮಕ್ಕಳು 'ಯಥಾ ಗುರು ತಥಾ ಶಿಷ್ಯ' ಎಂಬ ಹಾಸ್ಯ ನಾಟಕವನ್ನು ಮಾಡಿದರು. ಮಕ್ಕಳು ಉಪಾಧ್ಯಾಯರು ಕೇಳಿದ ಪ್ರಶ್ನೆಗಳಿಗೆ ಬುದ್ಧಿವಂತಿಕೆಯ ಹಾಗು ಹಾಸ್ಯಕರವಾದ ಉತ್ತರಗಳನ್ನು ಕೊಟ್ಟು ಸಭಿಕರಿಗೆ ನಗು ಹಾಗೂ ತಪಾಸಣಾಧಿಕಾರಿಗೆ ಆಘಾತವನ್ನೇ ನೀಡಿದರು. ಎಡಿಸನ್ ಶಾಲೆಯ ಮಕ್ಕಳು 'ಮಲ್ನಾಡಿನ್ ಮೂಲೆನಾಗೆ' ಹಾಡಿಗೆ ಸುಂದರವಾದ ನೃತ್ಯ ರೂಪಕ ಅಳವಡಿಸಿದ್ದರು. ಈಸ್ಟ್ ವಿಂಡ್ಸರ್ ಶಾಲೆಯ ಮಕ್ಕಳು ಹಿಂದಿನ ಸಮಾರಂಭಗಳಲ್ಲಿ ನೀಡಿದಂತೆ ಈ ಬಾರಿಯೂ ಅದ್ದೂರಿಯಾದ "ಕಣ್ಣಿಗೆ ಕಾಣುವ ದೇವರು" ಎಂಬ ನಾಟಕವನ್ನು ಪ್ರಸ್ತುತಪಡಿಸಿದರು. ನಲವತ್ತಕ್ಕೂ ಹೆಚ್ಚಿನ ಮಕ್ಕಳು ವಿವರಯುಕ್ತವಾದ ವೇಷ-ಭೂಷಣಗಳನ್ನು ಧರಿಸಿ, ಹಾಡು, ನಾಟ್ಯಗಳೊಂದಿಗೆ ತಾಯಿಯ ನಿಸ್ವಾರ್ಥ ಪ್ರೀತಿಯನ್ನು ಆಧರಿಸಿದ, ಹೀರಾಬಾಯಿಯ ಕಥೆಯನ್ನು ಮನಮುಟ್ಟುವಂತೆ ಹೇಳಿ ಸಭಿಕರ ಶ್ಲಾಘನೆಗೆ ಪಾತ್ರರಾದರು.

ವಿಶೇಷವಾಗಿ, ನಾಟಕಕ್ಕೆ ಮಾಡಿದ್ದ ರಂಗಸಜ್ಜಿಕೆ ಮತ್ತು ಪರಿಕರಗಳಿಗೆ ನೆರೆದ ಸಭಿಕರು ಅತ್ಯಂತ ಮೆಚ್ಚುಗೆ ಸೂಚಿಸಿದರು. ಅಲ್ಲದೆ ದೊಡ್ಡವರಿಂದ ಒಂದೆರಡು ಹಾಸ್ಯ ನಾಟಕಗಳು ಇದ್ದವು. ಮಲ್ಲಿ ಸಣ್ಣಪ್ಪನವರ್ ಅವರ ತಂಡ ಅಮೇರಿಕಾ ಕನ್ನಡ ಸಂಘಗಳಲ್ಲಿ ನಡೆಯುವ ಭಿನ್ನಮತಗಳು ಮತ್ತು ಘರ್ಷಣೆಗಳನ್ನು ಆಧರಿಸಿ ವೈಶಿಷ್ಟಪೂರ್ಣ ನಗೆನಾಟಕ ಪ್ರದರ್ಶಿಸಿದರು. ಅದರಲ್ಲೂ, ಮಲ್ಲಿ ಸಣ್ಣಪ್ಪನವರ್ ಅವರ ಅಜ್ಜಿಯ ಪಾತ್ರ ಮತ್ತು ಉತ್ತರ ಕರ್ನಾಟಕ ಶೈಲಿಯ ಅವರ ಹಾಸ್ಯದ ಮಾತುಗಳು ಎಲ್ಲರನ್ನು ನಕ್ಕುನಲಿಸಿತು. ಅತ್ತಕಡೆ, ಉಪಹಾರ ಗೃಹದಲ್ಲಿ ಜೋಳದ ರೊಟ್ಟಿ, ಲಾಡು ಸಹಿತವಾದ ಪುಷ್ಕಳವಾದ ಊಟ ಅತಿಥಿಗಳ ಉದರವನ್ನು ತೃಪ್ತಿಗೊಳಿಸಿತು. ಯುವ ಬೃಂದಾವನದ ಮಕ್ಕಳ ಸ್ವಯಂಸೇವಾ ಮನೋಭಾವ ಊಟದ ವ್ಯವಸ್ಥೆಯಲ್ಲಿ ಎದ್ದು ತೋರುತ್ತಿತ್ತು.

ಮುಖ್ಯ ಅತಿಥಿಗಳಾದ ಹರಿಣಿಯವರ ಬಗ್ಗೆ ಚೊಕ್ಕವಾಗಿ ಪರಿಚಯವಾದ ನಂತರ, ಅವರಿಗೆ ಸನ್ಮಾನ ನಡೆಯಿತು. ಅವರ ಬೆಳ್ಳಿತೆರೆಯ ಅನುಭವಗಳನ್ನು ಹಂಚಿಕೊಂಡ ಹರಿಣಿಯವರು, ನೆರೆದಿದ್ದ ಜನರು ಭಾರತ ದೇಶದ ಅಭಿಮಾನ ಮತ್ತು ತಾಯಿ-ತಂದೆಯರ ಪೋಷಣೆ ಮರೆಯಬಾರದೆಂದು ಕಳಕಳಿಯಿಂದ ವಿನಂತಿಸಿದರು. ಹರಿಣಿಯವರ ಸರಳ ಮತ್ತು ಸಜ್ಜನಿಕೆಯ ಸ್ವಭಾವ ನೆರೆದವರಿಗೆ ಬಹಳ ಖುಷಿ ಕೊಟ್ಟಿತು.

ಕೊನೆಯದಾಗಿ ರಸ-ಸಂಜೆ ಕಾರ್ಯಕ್ರಮ ಸಿಂಹಾದ್ರಿಯವರ ಮುಂದಾಳತ್ವದಲ್ಲಿ ಸ್ಥಳೀಯ ಕಲಾವಿದರಿಂದ ಹಮ್ಮಿಕೊಳ್ಳಲಾಗಿತ್ತು. ಕಳೆದ ವರ್ಷಗಳ ಚಿನ್ನದಂಥ ಹಾಡುಗಳನ್ನು ಸುಮಧುರವಾಗಿ ಅವರ ತಂಡದವರು ಹಾಡಿದರು. 'ಐಸಿಂಗ್ ಆನ್ ದಿ ಕೇಕ್' ಎನ್ನುವ ಹಾಗೆ ರಸಸಂಜೆ ಕಾರ್ಯಕ್ರಮ, ಬೆಂಗಳೂರಿನಿಂದ ಬಂದಿದ್ದ ಹಿನ್ನೆಲೆ ಗಾಯಕರು ಹಾಗೂ ಮ್ಯೂಸಿಕ್ ಐಡಲ್ ಗಳಾದ ದೀಕ್ಷಾ ರಾಮಕೃಷ್ಣ ಮತ್ತು ಧನುಷ್ ಜಗದೀಶ್‌ರ ಜಬರ್ದಸ್ತ್ ಹಾಡುಗಳಿಂದ ಕಾರ್ಯಕ್ರಮ ಮುಕ್ತಾಯಗೊಂಡಿತು. ಹುರುಪಿನಿಂದ ಹಾಡುಗಳನ್ನು ಹಾಡಿದ ಅವರು, ಸಭಿಕರು ಚಪ್ಪಾಳೆ ತಟ್ಟಿ, ಮುಂದೆ ಬಂದು ಕುಣಿದು ಕುಪ್ಪಳಿಸುವಂತೆ ಮಾಡಿದರು.

ನೊಂದ ನೋವನು ನೋಯದವರು ಎತ್ತಬಲ್ಲರು?
• **ಅಕ್ಕಮಹಾದೇವಿ**

# ೨೦೧೮ ಬೃಂದಾವನ ಪಿಕ್ನಿಕ್

**ರಾಘವೇಂದ್ರ ಕುಂದಲಗುರ್ಕಿ**



ಹಿತವಾದ ಸೂರ್ಯನ ಕಿರಣಗಳ ಬೇಸಿಗೆಯ ಒಂದು ಆಹ್ಲಾದಕರ ದಿನ. ನ್ಯೂ ಬ್ರುನ್ಸ್ವಿಕ್ ನ ಹೈಲ್ಯಾಂಡ್ ಪಾರ್ಕ್ ನಲ್ಲಿ ನ್ಯೂ ಜೆರ್ಸಿ ಕನ್ನಡದ ಜನತೆ ಎಲ್ಲಾ ಸೇರಿ ವಿವಿಧ ರೀತಿಯ ಕ್ರೀಡೆ, ಸಂಗೀತ, ಭರ್ಜರಿ ಊಟ, ಮಕ್ಕಳೊಂದಿಗೆ ಮೋಜು ಮಾಡುವುದೇ ಪಿಕ್ನಿಕ್ ನ ಭಾರಿ ವಿಶೇಷ.

ಜುಲೈ 7 ರಂದು ಬೆಳಗ್ಗೆ 10 ಘಂಟೆಗೆ ನಿರ್ದೇಶಕರು, ಅಧ್ಯಕ್ಷರು ಆದಿಯಾಗಿ ಜನ ಸಂದಣಿಸಿದಾಗ ಯೋಗಾಸನದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ರೋಹಿಣಿಯವರು ಯೋಗದ ಆಸನಗಳನ್ನು ತಿಳಿಸಿ, ಅವರ ಮಾರ್ಗದರ್ಶನದಲ್ಲಿ ಎಲ್ಲರೂ  ವಿವಿಧ ಆಸನಗಳನ್ನು ಹಾಕಿದರು. ಸುಮಾರು ಒಂದು ಗಂಟೆ ಕಾಲ ಮೈದಣಿಯುವ ಯೋಗಾಸನ ಮುಗಿದಂತೆ ಊಟದ ತಯಾರಿ ಪ್ರಾರಂಭ ವಾಯಿತು. ಚಪಾತಿ, ಪಲ್ಯ, ಪುಳಿಯೋಗರೆ, ಸಾಂಬಾರ್, ಮೊಸರನ್ನ, ಫ್ರೂಟ್ ಸಲಾಡ್, ಐಸ್ ಕ್ರೀಮ್ ಇನ್ನೂ ವಿಶೇಷ ಖಾದ್ಯಗಳೊಂದಿಗೆ ಭರ್ಜರಿ ವನ ಭೋಜನಕ್ಕೆ ಸ್ವಯಂಸೇವಕರ ತಂಡ ಅಣಿಯಾದಂತೆ, ಬಿಸಿಲಿನ ಬೇಗೆಗೆ ಹಸಿದಿದ್ದ ಜನರೆಲ್ಲರೂ ಸಾಲಾಗಿ ನಿಂತು ಖಾದ್ಯ ಸ್ವಾದನೆ ಮಾಡಿದರು.

ಬೃಂದಾವನದ ಹಲವಾರು ಕ್ರಿಕೆಟ್ ಪ್ರೇಮಿಗಳು ಸೇರಿ “ಕಾವೇರಿ”, ”ಭದ್ರಾ”  ಹಾಗು “ನೇತ್ರಾವತಿ” ತಂಡಗಳನ್ನು ರೂಪಿಸಿ ಕ್ರಿಕೆಟ್ ಕಾವು ಹೆಚ್ಚಿಸಿದ್ದರು. “ನೇತ್ರಾವತಿ” ಗುಂಪಿಗೆ ಫೈನಲ್ಸ್ ಎಂಟ್ರಿ ಕೊಟ್ಟು , “ಕಾವೇರಿ” ಮತ್ತು “ ಭದ್ರಾ” ನಡುವೆ ಮೊದಲ ಮ್ಯಾಚ್ ಏರ್ಪಟ್ಟಿತ್ತು. ಕಾವೇರಿಯ 48 ರನ್ ಗಳಿಗೆ ಪ್ರತ್ಯುತ್ತರವಾಗಿ ಭದ್ರಾ ಇನ್ನು ಒಂದು ಓವರ್ ಇರುವಾಗಲೇ ಜಯದ ಮಾಲೆ ಹಾಕಿಸಿಕೊಂಡರು. ಆಟದ ಮಧ್ಯೆ ಕಲ್ಲಂಗಡಿ, ಮಜ್ಜಿಗೆ ಸೇವನೆ, ನೀರಿನ ಸರಬರಾಜು ನಿರಂತರವಾಗಿ ನಡೆದು ಆಟಗಾರರಿಗೆ ದಣಿವು ಮರೆ ಮಾಚಿತು.

"ನೇತ್ರಾವತಿ" "ಭದ್ರಾ" ನಡುವಿನ ಫೈನಲ್ಸ್  ಇನ್ನೂ ರೋಚಕವಾದ ಪಂದ್ಯ, "ಭದ್ರಾ" ತಂಡದ 38 ರನ್ ಗಳ ಪ್ರತ್ಯುತ್ತರವಾಗಿ "ನೇತ್ರಾವತಿ" ಇನ್ನೂ ಹಲವಾರು ಒವರ್ ಇರುವಂತಯೇ ವಿಜಯದ ಮಾಲೆಯನ್ನು ಧರಿಸಿದರು. ಎಲ್ಲಾ ತಂಡದವರು ಒಟ್ಟಾಗಿ ಸೇರಿ ವಿಜಯೋತ್ಸವವನ್ನು ಆಚರಿಸಿದರು.

ಪಿಕ್ನಿಕ್ ನ ಮತ್ತೊಂದು ವಿಶೇಷ, ಹಿರಿಯ ನಾಗರಿಕರ ಆಟಗಳು: ತಾಯ್ನಾಡಿನಿಂದ ಮಗ–ಸೊಸೆ, ಮಗಳು–ಅಳಿಯರ ಮನೆಗೆ ಬಂದ ಹಿರಿಯ ಜೀವಗಳು ಪಗಡೆ, ಚೌಕಾಬಾರ, ಕವಡೆ, ಕೇರಂ, ಚದುರಂಗ ಆಟಗಳನ್ನು ಮನಸಾರೆ ಆಡಿ ಆನಂದಿಸಿದರು. ಮಕ್ಕಳ ಹಲವಾರು ಆಟಗಳು, ಮಹಿಳೆಯರ ಲಗೋರಿ, ಪುರುಷರ ರಿಲೆ ಓಟ, ಮ್ಯೂಸಿಕಲ್ ಛೇರ್ ಇದರ ಮಧ್ಯೆ ರುಚಿ ರುಚಿಯಾದ ಭೇಲ್ ಪುರಿ, ಕಾಫಿ ಮುಗಿಸಿ, ಕೊನೆಗೆ ಎಲ್ಲರೊಡನೆ ಸೇರಿ ಫೋಟೋ ಹಾಗೂ ಗೆದ್ದ ಎಲ್ಲಾ ವಿಜೇತರಿಗೆ ಬಹುಮಾನ ವಿತರಣೆಯೊಂದಿಗೆ “ಬೃಂದಾವನ ಪಿಕ್ನಿಕ್” ಮುಕ್ತಾಯವಾಯಿತು, ಅಭಿಮಾನಿ ತಂಡಕ್ಕೆ ಹಾಗು ಭಾಗವಹಿಸಿದ ಎಲ್ಲರಿಗೂ ಈ ಕಾರ್ಯಕ್ರಮ ಮರೆಯಲಾರದ ನೆನಪಾಯಿತು..



ಆನಂದದಿಂದ ಕಣ್ಮುಚ್ಚಿದ್ದಾಗ ನನ್ನ ಇರುವಿಕೆಯ ಅರಿವಾಗುತ್ತದೆ
• ಸುಕನ್ಯಾ ಮಾರುತಿ

# ಲೇಖನಗಳು

ಸದ್ದು ಮಾಡದೆ ಬಾಳು ಬಾಳೆಲವೋ ಜೀವ, ಗದ್ದಲದ ಬಿರುದಿರದೆ ಸೇರು ರೇವ
• ಸಿ. ಪಿ. ಕೆ.

## ಕವಿತೆಗಳು

ಡಾ. ನಾಗಭೂಷಣ ಮೂಲ್ಕಿ





### ೧. ಯುದ್ಧವದು... ಯುದ್ಧವದು..

ಯುದ್ಧವದು... ಯುದ್ಧವದು..
ಮಹಾಯುದ್ಧವದು...ಮಹಾಯುದ್ಧವದು ।।ಯು।।
ಮನೋಯುದ್ಧದು
ದೇಶವ ಗೆಲ್ಲಿಸಿದೆ
ಕೃಷ್ಣ ಉಪದೇಶವ
ಸಾಧಿಸಿ ತೋರಿದೆ ।।ಯು।।

ಶಸ್ತ್ರಾಸ್ತ್ರ ವಿಷಯ
ದಿವ್ಯಾಸ್ತ್ರ ಸಂಚಯ
ಶತ್ರುವಿಗಾಗೆ ಭಯ
ದೇಶಕೆ ಅದು ಅಭಯ ।।ಯು।।

ಗಾಢ ಆ ಯೋಚನೆ
ದೇಶ ವಿಮೋಚನೆ
ಯೋಜನೆ ಸಂಯೋಜನೆ
ಯಶಸ್ಸಿಗೆ ಆವಾಹನೆ ।।ಯು।।

### ೨. ನಾ ನಿನ್ನ ಕರೆದರೆ

ನಾ ನಿನ್ನ ಕರೆದರೆ
ನೀ ಬಂದು ನಿಂತರೆ ।।ನಾ।।

ಅಲ್ಲೊಂದು ಪಾಠಶಾಲೆ
ಯುವಪೀಳಿಗೆ ಪ್ರಶ್ನೆಮಾಲೆ
ಆಲಿಸುವೆ, ಓಲೈಸುವೆ
ಜ್ಞಾನದಾಹವ ತೀರಿಸುವೆ ।।ನಾ।।

ಜ್ಞಾನದ ಹಿರಿಮೆಯ
ಅಜ್ಞಾನದ ಕಿರಿಮೆಯ
ವಿಜ್ಞಾನ ದಾನವ ಮಾಡಿ
ಜ್ಞಾನಮಾರ್ಗದಿ ನಡೆಸುವೆ ।।ನಾ।।

ಅಂತಹ ಸಾಧನೆ
ಆತ್ಮ ಸಂವೇದನೆ
ನಿನ್ನ ನಿವೇದನೆ
ಮಾಡು ಸಂಶೋಧನೆ ।।ನಾ।।

### ೩. ವಿಜ್ಞಾನ ಲೋಕಕೆ ನೀ ಸೂರ್ಯ

ಜ್ಞಾನ ಲೋಕಕೆ ನೀ ಸೂರ್ಯ
ಅಜ್ಞಾನ ಮನಕೆ ನೀ ದೀಪ
ನೀನಿಲ್ಲೇ ಬೆಳಗಿದರೂ
ಎಲ್ಲೆಲ್ಲು ತುಂಬಿದೆ ಬೆಳಕು

ಉದಯವಾಗುವುದಿಲ್ಲ
ಅಸ್ತವಾಗುವುದಿಲ್ಲ
ಸಮಸ್ತ ಜನಮನದಲ್ಲಿ
ಬೆಳಗುತಿರುವೆ ಅನುದಿನ

ಸೂರ್ಯನಲ್ಲಾ ನೀ ಚಂದಿರನಲ್ಲಾ
ದೂರ ಗೋಚರಿಸುವಾ ನಕ್ಷತ್ರವಲ್ಲಾ
ಆಗೋಚರಾ ನಿನ್ನಾ ಬೆಳಕು ಹೊಳಪು
ಮನದಂಗಳದಲ್ಲಿ ಬೆಳಗುವೆಯಲ್ಲಾ

ಸನಿಹದಲಿರೆ ನೀ ಸೂರ್ಯ
ದೂರ ಸರಿದರೆ ನೀ ನಕ್ಷತ್ರ
ಮನದಂಗಳದಲಿ ನೀ ದಾರಿದೀಪ
ಆರಾಧ್ಯ ದೇಗುಲದ ನೀ ನಂದಾದೀಪ

ಕಂದಯ್ಯ ಅತ್ತಾರೆ ಕಣಗಿಲು ಚಿಗುರಾವು ಒಣಗಿದ್ದ ಬಾಳೆ ಚಿಗುರಾವು
• ಜನಪದ

## ೪. ನಿನ್ನೊಲವೆ ದೇಶದೆಡೆ

ನಿನ್ನೊಲವೆ ದೇಶದೆಡೆ
ನಿನ್ನೊಲವೆ ದೇಶದೆಡೆ
ನಿನ್ನ ಗೆಲುವು ದೇಶದ ಕಡೆ ॥ನಿ॥

ಕಡೆ ಕಡೆಗಣಿಸದೆ
ಕಾ ಕಾಗುಣಿಸದೆ
ಸಂಚನು ಮಾಡದೆ
ವಂಚನೆ ಮಾಡದೆ ॥ನಿ॥

ನಡೆದೇ ಮುನ್ನಡೆದೆ
ನಡೆಸಿ ಮುನ್ನಡೆಸಿದೆ
ಮಾನ್ಯತೆ ದೊರಕಿಸಿ
ಯಶೋಧಾರಿಯಾದೆ ॥ನಿ॥

ಅಭಾಗ್ಯರ ಭಾಗದ
ಬಾಗಿಲ ತೆರೆಸಿದೆ
ದೇಶದ ಉನ್ನತಿಗೆ
ನಾಂದಿ ಹಾಡಿದೆ ॥ನಿ॥

ಓ ಭರತೋತ್ತಮನೆ
ನೀ ನರೋೀಯನೆ
ಯುವ ಜನಾಂಗಕೆ
ನೀ ಸರ್ವೋತ್ತಮ್ಮನೆ ॥ನಿ॥

## ೫. ಮಹಾನುಭಾವನೆ

ಮಹಾನುಭಾವನೆ
ದೇಶವ ಕಾವವನೆ
ಓ ವಿಜ್ಞಾನಿಯೇ
ನಿ ಸುಜ್ಞಾನಿಯೇ

ದೇಹವು ದಣಿದರು
ಮನ ತಲ್ಲಣಿಸಿದರು
ಜಯ ಸಾಧಕ ನೀ
ಗುರಿ ಯೋಜಕ ನೀ

ಕೃಷ್ಣನು ಬೋಧಿಸಿದ
ಅಕರ್ಮ ಯೋಗಿನೀ
ಭೋಗಕೆ ವಾಲದೆ
ಜ್ಞಾನಯಜ್ಞ ಮಾಡಿದೆ

ದೇಶದ ಹಿರಿಮೆಯೇ
ನಿನ್ನಯ ಧರುಮ
ಕರುಮದಿ ಗೆಲಿದೆ
ಈ ಮಹಾ ಮರ್ಮ



## ೬. ನೀ ಗೆದ್ದೆ ಅಗ್ನಿ ಪರೀಕ್ಷೆ

ನೀ ಗೆದ್ದೆ ಅಗ್ನಿ ಪರೀಕ್ಷೆ
ನೀ ಮೀರಿದೆ ವಿಶ್ವ ನಿರೀಕ್ಷೆ ॥ನೀ॥

ಭಾರತದ ಆಕಾಂಕ್ಷೆ
ಸನ್ಮಾನದ ಮಹದಾಕಾಂಕ್ಷೆ
ನಮ ಮಮತೆಯ ಘನತೆಯ
ಹೆಚ್ಚಿಸಿ ಹೆಚ್ಚಿಸಿ ಮೆಚ್ಚಿಸಿದೆಯಾ ॥ನೀ॥

ಗಣ್ಯರು  ಅಗ್ರಗಣ್ಯರು
ಈ ದೇಶ ಆ ವಿದೇಶದಿ
ಹೀನಾವೇಶ ವೇಷವ
ಅವಶೇಷವ ನಾಶಿಸಿದೆ ॥ನೀ॥

ಓ ಧೀರೋತ್ತಮನೆ
ನೀ ನರೋತ್ತಮನೆ
ಮನ ಜನಸ್ತೋಮದ
ಹೇ ಸರ್ವೋತ್ತಮ್ಮನೆ॥ನೀ॥

## ೭. ಅದ್ಭುತ ಮಾನವನೇ ..

ಅದ್ಬುತ ಮಾನವನೇ ..
ದೇವ ಸಮಾನನೇ...॥ಅ॥

ಭಾರತ ವರ್ಷಕೆ
ಹರುಷವ ತಂದೆ
ವರುಷವು ಹರುಷವು
ವೃದ್ಧಿಸಲೆಂದೇ ॥ಅ॥

ಯುವ ಜನಾಂಗವ
ರೂಪಿಸಲೆದೆ
ನವ  ಜನಾಂಗವ
ನಿರೂಪಿಸುಯೆಂದೆ ॥ಅ॥

ದುಡಿಮೆಯ ಹಿರಿಮೆಯ
ಜ್ಞಾನದ ಗರಿಮೆಯ
ಸತ್ಯದ ಹಾದಿಯೇ
ಬಾಳಿನ ಏಳ್ಗೆಯು ॥ಅ॥

(ಈ ಏಳು ಕವನಗಳು ಡಾ. ಅಬ್ದುಲ್ ಕಲಾಂ ಅವರನ್ನು ಕುರಿತವು)

# ಅಮೇರಿಕದ ಬಡವರು

ಕಾವ್ಯಾ ಕಡಮೆ
ನಾಗರಕಟ್ಟೆ



"ಡೂ ಯೂ ಹ್ಯಾವ್ ಅ ಮಿನಿಟ್?" ನಮ್ಮ ಮನೆಗೆ ಹತ್ತಿರವಿರುವ ಹೈಲ್ಯಾಂಡ್ ಪಾರ್ಕ್ ಗ್ರಂಥಾಲಯದಲ್ಲಿ ಪುಸ್ತಕವೊಂದರಲ್ಲಿ ಮುಖ ಹುದುಗಿಸಿ ಕುಳಿತಾಗ ಕೇಳಿದ ಆ ದನಿಗೆ ತಲೆಯೆತ್ತಿದೆ. ಸುಮಾರು ನಲವತ್ತರಂಚಿನ ಆ ಹೆಂಗಸು ಪ್ರಶ್ನಾರ್ಥಕವಾಗಿ ನನ್ನನ್ನು ನೋಡುತ್ತಿದ್ದಳು. ನನಗೆ ಆ ಹೊತ್ತು ಬೇರೇನೂ ಮುಖ್ಯ ಕೆಲಸ ಇರದಿದ್ದ ಕಾರಣ "ಯೆಸ್, ಹೌ ಮೆ ಐ ಹೆಲ್ಪ್ ಯೂ?" ಅಂದೆ.

ಆಗ ನಾನು ಈ ಗ್ರಂಥಾಲಯದಲ್ಲಿ ವಾಲಂಟಿಯರಿಂಗ್ ಮಾಡುತ್ತಿದ್ದೆ. ಅಂದರೆ ಸಮಯ ಸಿಕ್ಕಾಗ ಲೈಬ್ರರಿಯ ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಕೊಡುವುದು. ಓದುಗರು ಮರಳಿಸಿದ ಪುಸ್ತಕಗಳನ್ನು ಪುನಃ ರ್‍ಯಾಕ್‌ಗಳಲ್ಲಿ ಹೊಂದಿಸಿಡುವುದು, ಲೈಬ್ರರಿಗೆ ಬಂದ ಹೊಸ ಪುಸ್ತಕಗಳಿಗೆ ಲೇಬಲ್ ಹಚ್ಚಿ ವೆಬ್‌ಸೈಟಿನಲ್ಲಿ ಪಟ್ಟಿ ಮಾಡುವುದು, ಪುಟ್ಟ ಚೀಟಿಗಳಲ್ಲಿ ಪುಸ್ತಕದ ಹೆಸರನ್ನು ಮಾತ್ರ ಬರೆದು ತಂದ ಹಿರಿಯ ನಾಗರಿಕರಿಗೆ ಆ ಹೊತ್ತಿಗೆಗಳನ್ನು ಹುಡುಕಿಕೊಡುವುದು ಮುಂತಾದವು ಆ ಕೆಲಸದಲ್ಲಿ ಸೇರಿರುತ್ತಿದ್ದವು. ಆಗಾಗ ಇಷ್ಟದ ಪುಸ್ತಕ ಹಿಡಿದು ಸೋಫಾದ ಮೇಲೆ ಪವಡಿಸುವುದೂ ಸಾಧ್ಯವಾಗುತ್ತಿತ್ತು.

ಅಂದು ನನ್ನನ್ನು ಮಾತನಾಡಿಸಿದ ಹೆಂಗಸಿನ ಹೆಸರು ಟ್ರೇಸಿ ಅಂತ ತಿಳಿಯಿತು. ಅಂತರ್ಜಾಲದಲ್ಲಿ ಒಂದು ಅರ್ಜಿಯನ್ನು ಕಳುಹಿಸಲು ಸಹಾಯ ಬೇಕಿತ್ತೆಂದು ಕೇಳುತ್ತಿದ್ದಳು. ಗ್ರಂಥಾಲಯದ ಓದುವ ತಾಣದಿಂದ ಕಂಪ್ಯೂಟರ್ ಸೆಕ್ಷನ್ನಿಗೆ ತೆರಳುವಾಗ ಮಾತನಾಡುತ್ತ ನಡೆದಳು.

ಟ್ರೇಸಿ ಒಬ್ಬ ಸಿಂಗಲ್ ಮದರ್. ಅಂದರೆ ಸಂಗಾತಿಯ ಸಹಾಯವಿಲ್ಲದೇ ಮಕ್ಕಳನ್ನು ಬೆಳೆಸುವ ಹೊಣೆ ಹೊತ್ತವಳು. ಅವಳಿಗೆ ಮೂವರು ಮಕ್ಕಳು. ದೊಡ್ಡವನು ಮೈಕಲ್ ಸಿನಿಮಾಗಳಲ್ಲಿ ನಟಿಸುವ ಆಸೆಯಿಂದ ದೂರದ ಲಾಸ್ ಏಂಜಲಿಸ್ ಪಟ್ಟಣವನ್ನು ಸೇರಿದ್ದ. ಕಳೆದ ಒಂದಿಷ್ಟು ತಿಂಗಳಿಂದ ಅವನ ಫೋನ್ ಕರೆಗಳು ಬರುವುದೂ ನಿಂತುಹೋಗಿತ್ತು. ಮಗಳು ಸೂಸಿ ಮತ್ತು ಚಿಕ್ಕ ಮಗ ಟೆರ್ರಿ ಇಬ್ಬರೂ ಶಾಲೆಯಲ್ಲಿ ಓದುತ್ತಿದ್ದರು. ಒಂದಿಷ್ಟು ವರ್ಷ ತನ್ನ ಮನೆಯ ಹತ್ತಿರವಿರುವ ರೆಸ್ಟಾರೆಂಟ್ ಒಂದರಲ್ಲಿ ಟ್ರೇಸಿ ಕೆಲಸ ಮಾಡುತ್ತಿದ್ದಳು. ಅಲ್ಲಿ ಅವಳು ಇಡೀ ದಿನ ಕೆಲಸಕ್ಕೆಂದು ತೆರಳಿದಾಗ ಮನೆಯಲ್ಲಿ ಮಕ್ಕಳ ಬದುಕು ಅತಂತ್ರವಾಗುತ್ತಿತ್ತು. ಅವಳ ಮನೆಯಿರುವ ಏರಿಯಾ ಅಷ್ಟೇನೂ ಸುರಕ್ಷಿತವಾಗಿರಲಿಲ್ಲ. ಎಂಟ್ಹತ್ತು ವರ್ಷದ ಹುಡುಗರನ್ನೇ ಮಾದಕ ವಸ್ತುಗಳನ್ನು ಮಾರುವ ಏಜೆಂಟರನ್ನಾಗಿ ಲೋಕಲ್ ಡ್ರಗ್ ಲಾರ್ಡುಗಳು ನೇಮಿಸಿಕೊಳ್ಳುತ್ತಿದ್ದರು. ಪೋಷಕರು ಮಕ್ಕಳ ವಿಷಯದಲ್ಲಿ ಚೂರೇ ಚೂರು ಅಸಡ್ಡೆ ತೋರಿದರೂ ಅವರು ಕೈತಪ್ಪಿ ಹೋಗುವುದರಲ್ಲಿ ಸಂದೇಹವಿರಲಿಲ್ಲ. ಅವಳ ಚಿಕ್ಕ ಮಗನ ಸ್ನೇಹಿತರನೇಕರು ಕಿಸೆಗಳಲ್ಲಿ ಚಾಕುಗಳನ್ನು ಝಳಪಿಸುತ್ತ ನಡೆಯುತ್ತಿದ್ದರಂತೆ.

ಮಕ್ಕಳ ಭವಿಷ್ಯದ ಕುರಿತು ಚಿಂತೆ ಕಾಡಿ ಟ್ರೇಸಿ ಕೆಲಸ ಬಿಟ್ಟಿದ್ದಳು. ಈಗ ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ಸರ್ಕಾರ ಒದಗಿಸುವ ಧನಸಹಾಯದಿಂದ ಬದುಕು ನಡೆಸುತ್ತಿದ್ದಳು. ಆಹಾರ ಕೊಳ್ಳಲು ಫುಡ್-ಸ್ಟಾಂಪುಗಳು, ನಿರುದ್ಯೋಗಿ ಭತ್ಯೆ, 'ಮೆಡಿಕೇಡ್' ಹೆಸರಿನ ಆರೋಗ್ಯ ಸೇವೆ, ಸಹಾಯ ಬೇಕಿರುವ ಕುಟುಂಬಗಳಿಗೆ ಒದಗಿಸಲಾಗುವ ತಾತ್ಕಾಲಿಕ ನೆರವು (ಟಿ.ಎ.ಎನ್.ಎಫ್), ಆರ್ಥಿಕವಾಗಿ ಹಿಂದುಳಿದವರಿಗೆ ಕೊಡಮಾಡುವ ವಿಶೇಷ ತೆರಿಗೆ ವಿನಾಯಿತಿ ಮುಂತಾದ ಅನೇಕ ಸೇವೆಗಳು ಸರಕಾರ ಒದಗಿಸುವ ಈ ಧನಸಹಾಯ ಸೇವೆಯಲ್ಲಿ ಸೇರಿರುತ್ತದೆ. ಟಿ.ಎ.ಎನ್.ಎಫ್ ಸೇವೆಗೆ ಅರ್ಹವಾಗಲು ಅವಳು ವಾರಕ್ಕೆ ಮೂವತ್ತು ಘಂಟೆಗಳ ಕಾಲ ಕೆಲಸ ಮಾಡಲೇಬೇಕಿತ್ತು. ಹೀಗಾಗಿ ಮಕ್ಕಳ ಶಾಲೆಯ ಸಮಯದಲ್ಲಿಯೇ ನ್ಯಾನಿಯಾಗಿ ಅಂದರೆ ಪರರ ಮಕ್ಕಳನ್ನು ನೋಡಿಕೊಳ್ಳುವ ದಾದಿಯಾಗಿ ಪಾರ್ಟ್-ಟೈಮ್ ಕೆಲಸದಲ್ಲಿ ತೊಡಗಿಸಿಕೊಂಡಿದ್ದಳು.

ಅಂದು ಟ್ರೇಸಿ ನನ್ನ ಸಹಾಯ ಕೇಳುತ್ತಿದ್ದುದೂ ಅಂಥದೇ ಒಂದು ಧನಸಹಾಯಕ್ಕಾಗಿ ಅರ್ಜಿ ಸಲ್ಲಿಸಲು. ಸ್ಕ್ಯಾನ್ ಮಾಡಿದ ಅವಳ ಸಹಿಯನ್ನು ಅರ್ಜಿಯಲ್ಲಿ ನಮೂದಿಸಲು ಕಷ್ಟಪಡುತ್ತಿದ್ದಳು.



ಒಂದೇ ಕ್ಲಿಕ್ಕಿನಲ್ಲಿ ಅವಳ ಸಹಿ ಅರ್ಜಿಯಲ್ಲಿ ನಮೂದಾಗುವಂತೆ ಮಾಡಿದ್ದಕ್ಕೆ ಖುಷಿಪಟ್ಟು ಹಾರ್ದಿಕವಾಗಿ ಥ್ಯಾಂಕ್ಸ್ ಹೇಳಿ ಅಪ್ಪಿಕೊಂಡಳು.

ಟ್ರೇಸಿಯ ನಡೆಯಲ್ಲಿ, ಮಾತಿನಲ್ಲಿ ಒಂದು ಬಗೆಯ ನಿರಾತಂಕವನ್ನು ಕಂಡೆ. ಅಮೇರಿಕದಂಥ ದೈತ್ಯದೇಶ ಮಾತ್ರ ಕಡುಬಡವರಿಗೂ ಒದಗಿಸಬಲ್ಲ ನಿರಾಯಾಸವಿರಬಹುದು ಇದು ಅನ್ನಿಸಿತು. ಉಗುರನ್ನು ನೀಟಾಗಿ ಕತ್ತರಿಸಿಕೊಂಡು ನೇಲ್‌ಪಾಲಿಶ್ ಹಚ್ಚಿದ್ದಳು. ಒಂದು ಬದಿಯ ಕೂದಲಿಗೆ ಚೆಲುವಾಗಿ ನೀಲಿ ಬಣ್ಣದ ಹೇರ್‌ಕಲರ್ ಹಚ್ಚಲಾಗಿತ್ತು. ಸ್ವಭಾವದಲ್ಲಿ, ಆಗಾಗ ಚೆಲ್ಲುವ ನಗುವಿನಲ್ಲಿ ಆತ್ಮವಿಶ್ವಾಸ ಎದ್ದು ಕಾಣುತ್ತಿತ್ತು.

"ವಾರಕ್ಕೆ ಮೂವತ್ತು ಘಂಟೆ ದುಡಿದು, ಆ ಸಂಬಳದ ಜೊತೆ ಸರ್ಕಾರದ ಧನಸಹಾಯ ಪಡೆದರೂ ಅದು ಮನೆಯ ಬಾಡಿಗೆಗೆ, ಕಾರಿನ ಪೆಟ್ರೋಲಿಗೇ ಸಾಕಾಗಲ್ಲ. ಹೆಚ್ಚು ದುಡಿಯಲು ಹೋಗಿ ಮನೆಯಲ್ಲಿ ಮಕ್ಕಳನ್ನಷ್ಟೇ ಬಿಡುವ ರಿಸ್ಕನ್ನು ಹೇಗೆ ತೊಗೊಳ್ಳಲಿ ಹೇಳು?" ಅಂತ ನಿಟ್ಟುಸಿರುಬಿಟ್ಟಳು. ವರ್ಷಕ್ಕೆ ನಾಲ್ಕು ತಿಂಗಳು ಹಿಮ ಸುರಿಯುವ ನ್ಯೂಜೆರ್ಸಿಯಂಥ ರಾಜ್ಯದ ಪಟ್ಟಣಗಳಲ್ಲಿ ಕಾರು ಮತ್ತು ಏರ್‌ಕಂಡೀಷನರ್‌ಗಳು ಐಶಾರಾಮಿ ಸಾಧನಗಳಾಗಿರದೇ ದಿನಬಳಕೆಯ ಅಗತ್ಯ ವಸ್ತುವಾಗಿರುವುದರ ಅರಿವಿದ್ದ ನಾನು ತಲೆದೂಗಿದೆ. ಇಲ್ಲಿ ಹೆಚ್ಚು ಕಡಿಮೆ ಎಲ್ಲರ ಬಳಿಯೂ ಕಾರ್ ಇರುವುದರಿಂದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನೂ ನೆಚ್ಚಿಕೊಳ್ಳುವಂತಿರಲಿಲ್ಲ.

ಇಲ್ಲಿಗೆ ಬರುವ ಮೊದಲು ನನಗೆ ಅಮೇರಿಕಾದಲ್ಲೂ ಬಡವರಿರುತ್ತಾರೆ ಅಂತ ಹೇಳಿದ್ದರೆ ನಂಬುತ್ತಿದ್ದೆನೋ ಇಲ್ಲವೋ. ಅದಕ್ಕೆ ಕಾರಣ ನಮ್ಮ ಸಿನಿಮಾಗಳಲ್ಲಿ, ಪ್ರವಾಸಿ ಫೋಟೋಗಳಲ್ಲಿ ಅಮೇರಿಕವೆಂದರೆ ಥಳಥಳ ಹೊಳೆಯುವ ರಸ್ತೆಗಳನ್ನು, ಗಾಜು ಹೊದಿಸಿದ ಸ್ಟೇನ್‌ಲೆಸ್ ಸ್ಟೀಲು ಕಟ್ಟಡಗಳನ್ನು, ಐಶಾರಾಮಿ ಬಂಗಲೆಗಳನ್ನು ಮಾತ್ರ ಕಾಣಿಸುವುದೂ ಇರಬಹುದು. ಥಳುಕಿನ ಪರದೆಯನ್ನು ಚೂರೇ ಚೂರು ಸರಿಸಿ ನೋಡಿದಾಗ ಜನಜೀವನದ ಇತರ ಸಹಜ ಬಣ್ಣಗಳು ತಡವಿಲ್ಲದೇ ಕಣ್ಣಿಗೆ ಕಾಣುವವು. "ದುಡಿದಿದ್ದನ್ನೆಲ್ಲ ಬಾಡಿಗೆಗೆ, ಪೆಟ್ರೋಲಿಗೆ ಹಾಕಿದರೆ ಮತ್ತೆ ಊಟಕ್ಕೇನು ಮಾಡುತ್ತೀರಿ ನೀನು ಮತ್ತು ಮಕ್ಕಳು?" ಅಂತ ಟ್ರೇಸಿಯನ್ನು ಕೇಳಿದೆ. ಆಗಲೇ ನನಗೆ ಕೇಂದ್ರ ಕೃಷಿ ಇಲಾಖೆಯ 'ಸ್ನಾಪ್' ಸೇವೆಯ ಬಗೆಗೆ ತಿಳಿದಿದ್ದು.

## 'ಸ್ನಾಪ್' ಎಂದರೇನು?

2004ರ ತನಕ ಕೇಂದ್ರ ಸರಕಾರ ಬಡತನ ರೇಖೆಗಿಂತ ಕೆಳಗಿರುವವರಿಗೆ 'ಫುಡ್–ಸ್ಟ್ಯಾಂಪ್'ಗಳನ್ನು ಕೊಡುತ್ತಿತ್ತು. ಫುಡ್‌ಸ್ಟ್ಯಾಂಪುಗಳೆಂದರೆ ಊಟ ಕೊಳ್ಳುವ ಚೀಟಿಗಳು. ಈ ಸ್ಟ್ಯಾಂಪುಗಳಲ್ಲಿ ಒಂದು ಡಾಲರ್ ಮೌಲ್ಯದ ಕಂದು ಚೀಟಿ, ಐದು ಡಾಲರ್ ಮೌಲ್ಯದ ನೀಲಿ ಚೀಟಿ ಮತ್ತು ಹತ್ತು ಡಾಲರ್ ಮೌಲ್ಯದ ಹಸಿರು ಚೀಟಿಗಳು ಸೇರಿರುತ್ತಿದ್ದವು. ಈ ಚೀಟಿಗಳನ್ನು ಸೂಪರ್‌ಮಾರ್ಕೆಟ್ಟಿನಲ್ಲಿ, ದಿನಸಿ ಅಂಗಡಿಗಳಲ್ಲಿ ಕೊಟ್ಟರೆ ಆ ಚೀಟಿಯ ಮೌಲ್ಯದ ದಿನಸಿಯನ್ನು ಅಥವಾ ತಯಾರಿಸಿದ ಊಟವನ್ನು ಕೊಳ್ಳಬಹುದಿತ್ತು. ಈ ಚೀಟಿಗಳ ಮೂಲಕ ಹಣ್ಣು ಮತ್ತು ತರಕಾರಿಗಳು, ಬೆಳಗಿನ ತಿಂಡಿಗಾಗಿ ಬ್ರೆಡ್ ಮತ್ತು ಸೀರಿಯಲ್‌ಗಳು, ಹಾಲು, ಊಟಕ್ಕೆ ಅಗತ್ಯವಿರುವ ಮೀನು ಮತ್ತಿತರ ಮಾಂಸಾಹಾರಿ ಪದಾರ್ಥಗಳನ್ನು ಕೊಳ್ಳಬಹುದಿತ್ತು. ಆದರೆ ವೈನ್, ಬಿಯರ್, ಸಿಗರೇಟ್, ಹೊಗೆಸೊಪ್ಪು ಮುಂತಾದ ಮಾದಕ ವಸ್ತುಗಳನ್ನು ಈ ಚೀಟಿಗಳಲ್ಲಿ ಕೊಳ್ಳಲು ಬಿಡುತ್ತಿರಲಿಲ್ಲ.

ಈ ವ್ಯವಸ್ಥೆಯನ್ನು ಕೆಲವರು ದುರುಪಯೋಗ ಪಡಿಸಿಕೊಳ್ಳುವುದು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ಬಂತು. ಕೆಲವರು ಈ ಫುಡ್‌ಸ್ಟ್ಯಾಂಪುಗಳನ್ನು ಇನ್ನೊಬ್ಬರಿಗೆ ಮಾರಿ ಆ ಹಣದಲ್ಲಿ ಮಾದಕ ವಸ್ತುಗಳನ್ನು ಕೊಳ್ಳುತ್ತಿದ್ದರು. ಒಮ್ಮೊಮ್ಮೆ ಈ ಚೀಟಿಗಳು ಕಳುವಾಗಿಬಿಡುತ್ತಿದ್ದವು. ಕೆಲವು ಸಲ ದಿನಸಿ ಅಂಗಡಿಯ ಸಾಲುಗಳಲ್ಲಿ ನಿಂತಾಗ ಫುಡ್‌ಸ್ಟ್ಯಾಂಪುಗಳನ್ನು ಪೇರಿಸಿ ಕೊಡುವುದು ಮುಜುಗರದ ಸಂಗತಿಯಾಗಿತ್ತು. ಸಾಲಿನಲ್ಲಿ ನಿಂತ ಇತರ ನಾಗರಿಕರು ಇವರನ್ನು ಕಡೆಗಣ್ಣಿನಿಂದ ಹಂಗಿಸಿ ನೋಡುತ್ತಿದ್ದರು. ಇಂಥ ನೋಟಗಳಿಂದ ಹಣವಿಲ್ಲದವರ ಆತ್ಮಸ್ಥೈರ್ಯ ಇನ್ನಷ್ಟು ಕುಗ್ಗಿ ಗಾಯದ ಮೇಲೆ ಬರೆ ಎಳೆದಂತಾಗುತ್ತಿತ್ತು. ಇಂಥದೇ ಹಲವು ಕಾರಣಗಳಿಗಾಗಿ ಈ ಚೀಟಿಗಳ ಉಪಯೋಗವನ್ನು ನಿಲ್ಲಿಸಿ ಇಲೆಕ್ಟ್ರಾನಿಕ್ ಕಾರ್ಡುಗಳ ಬಳಕೆ ತರಬೇಕೆಂದು ಕೆಲವರ್ಷಗಳಿಂದ ಮಾತುಕತೆ ನಡೆಯುತ್ತಿತ್ತು.

ಕೊನೆಗೆ 2004ರ ಜೂನ್ ತಿಂಗಳಲ್ಲಿ ಆಗ ಅಧಿಕಾರದಲ್ಲಿದ್ದ ಬುಶ್ ಆಡಳಿತ ಫುಡ್‌ಸ್ಟ್ಯಾಂಪುಗಳಿಗೆ ಸಂಪೂರ್ಣವಾಗಿ ವಿದಾಯ ಹೇಳಿತು. ಆ ಊಟದ ಚೀಟಿಗಳ ಬದಲಾಗಿ ಡೆಬಿಟ್ ಕಾರ್ಡುಗಳನ್ನು ಹೋಲುವ ಇ.ಬಿ.ಟಿ (ಇಲೆಕ್ಟ್ರಾನಿಕ್ ಬೆನಿಫಿಟ್ ಟ್ರಾನ್ಸ್‌ಫರ್) ಕಾರ್ಡುಗಳನ್ನು ಫಲಾನುಭವಿಗಳಿಗೆ ಕೊಡಮಾಡಲಾಯಿತು. ಈಗ ಈ ಸೇವೆ ಪಡೆಯುವವರು ಕಟ್ಟುನಿಟ್ಟಾಗಿ ಊಟಕ್ಕೆ ಬೇಕಾಗುವ ಅಗತ್ಯ ವಸ್ತುಗಳನ್ನು ಮಾತ್ರ ಕೊಳ್ಳಲು ಸಾಧ್ಯವಾಗಿದೆ. ಈ ಕಾರ್ಡುಗಳು ಕಳುವಾದರೂ ತಕ್ಷಣ ಕಳುವಾದ ಕಾರ್ಡಿನ ಉಪಯೋಗವನ್ನು ನಿಲ್ಲಿಸುವಂತೆ ಬ್ಲಾಕ್ ಮಾಡಲಾಗುತ್ತದೆ. ಈ ಸೇವೆಯಲ್ಲಿ ತಿಂಗಳಿಗೆ ಒಬ್ಬರಿಗೆ ಸುಮಾರು ನೂರಾ ಇಪ್ಪತ್ತೈದು ಡಾಲರುಗಳಷ್ಟು ಹಣವನ್ನು ಊಟದ ನಿರ್ವಹಣೆಗೆಂದು ಕೊಡಲಾಗುತ್ತದೆ. ಈ ಪೂರ್ತಿ ಕಾರ್ಯಕ್ರಮವನ್ನು 'ಸ್ನಾಪ್' ಎಂಬ ಹೊಸ ಹೆಸರಿನಲ್ಲಿ ಕರೆಯಲಾಗುತ್ತದೆ. 'ಸ್ನಾಪ್' ಎಂದರೆ 'ಸಪ್ಲಿಮೆಂಟಲ್ ನ್ಯೂಟ್ರಿಷನ್ ಅಸಿಸ್ಟನ್ಸ್ ಪ್ರೋಗ್ರಾಮ್' ಎಂದು. ಅಂದರೆ ಅಧಿಕ ಅಗತ್ಯ ಪೋಷಕಾಂಶಗಳನ್ನು ಒದಗಿಸುವ ಸೇವೆ ಎಂಬ ಅರ್ಥ ಬರುತ್ತದೆ.

ಅಮೇರಿಕದ ಜನಗಣತಿ ಕಾರ್ಯಾಲಯ 2016ರಲ್ಲಿ ತಯಾರಿಸಿದ ವರದಿಯ ಪ್ರಕಾರ ಇಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 12.7%ರಷ್ಟು ಜನ ಬಡತನ ರೇಖೆಗಿಂತ ಕೆಳಗಿದ್ದಾರೆ. ಅಂದರೆ ಸುಮಾರು ನಾಲ್ಕುಕೋಟಿ, ಆರು ಲಕ್ಷ ಜನರು ಈ ವರ್ಗದಲ್ಲಿ ಗುರುತಿಸಲ್ಪಡುತ್ತಾರೆ. ಈ ಗಣತಿ ಕಾರ್ಯಾಲಯವು ಬಡತನ ರೇಖೆಯನ್ನು ವ್ಯಾಖ್ಯಾನಿಸಲು ಬೇರೆಬೇರೆ ಮಾನದಂಡಗಳನ್ನು ಉಪಯೋಗಿಸುತ್ತದೆ. ಉದಾಹರಣೆಗೆ ಇಬ್ಬರು



ವಯಸ್ಕರು ಮತ್ತು ಇಬ್ಬರು ಮಕ್ಕಳಿರುವ ಮನೆಗಳ ಆದಾಯ ವರ್ಷಕ್ಕೆ 24,858 ಡಾಲರುಗಳಿಗಿಂಥ ಕಡಿಮೆಯಿದ್ದರೆ ಅವರು ಈ ಅಧಿಕ ಸೇವೆಗಳನ್ನು ಪಡೆಯಲು ಅರ್ಹರಾಗುತ್ತಾರೆ.

ಕಳೆದ ವರ್ಷ ವಿಶ್ವಸಂಸ್ಥೆಗಾಗಿ ಸಿದ್ಧಪಡಿಸಿದ ವಿಶೇಷ ವರದಿಯಲ್ಲಿ ಅಂತರಾಷ್ಟ್ರೀಯ ಕಾನೂನು ತಜ್ಞ ಫಿಲಿಪ್ ಆಲ್ಸ್ಟನ್ ಅಮೇರಿಕದಲ್ಲಿ ಒಂದು ಕೋಟಿ, ತೊಂಬತ್ತು ಲಕ್ಷ ಜನ ಭರವಸೆಯೇ ಇಲ್ಲದ ಕಡುಬಡತನದಲ್ಲಿ ಬದುಕು ನಡೆಸುತ್ತಿದ್ದಾರೆ ಅಂತ ಹೇಳಿದಾಗಿನಿಂದ ಇಲ್ಲಿನ ಮಾನವ ಹಕ್ಕುಗಳ ಪ್ರತಿಪಾದಕರು ನಿದ್ದೆಗೆಡುವಂತಾಗಿದೆ. ಪ್ರಪಂಚದ ಅತಿ ಶ್ರೀಮಂತ ರಾಷ್ಟ್ರಗಳಲ್ಲಿ ಒಂದಾದ ಅಮೇರಿಕಾದ ಪ್ರಜೆಗಳು ಆಹಾರ, ಕುಡಿಯುವ ನೀರು, ನೈರ್ಮಲ್ಯ, ಆರೋಗ್ಯಸೇವೆ, ಆಶ್ರಯ, ವಿದ್ಯೆ, ಮಾಹಿತಿಯಿಂದ ವಂಚಿತರಾಗಿದ್ದಾರೆ ಎಂದು ಸಾರುವ ಈ ವರದಿ ಎಷ್ಟೋ ಪಂಡಿತರನ್ನು ಕಂಗೆಡಿಸಿದೆ. ಈ ಸಂಖ್ಯೆಗಳು ಈ ದೇಶದ ಆತ್ಮಸ್ಥೈರ್ಯ ಎತ್ತಿಹಿಡಿವ 'ಅಮೇರಿಕನ್ ಡ್ರೀಮ್' ಎಂಬ ಮೂಲಮಂತ್ರಕ್ಕೆ ಕುತ್ತು ತರುವಂತಿದೆ. ಯಾವುದೇ ಹಿನ್ನೆಲೆಯಿಂದ ಬಂದವರಾದರೂ ಕಷ್ಟಪಟ್ಟು ದುಡಿದರೆ ಮುಂದೆ ಬರಬಹುದು ಎಂಬ ನಂಬಿಕೆಗೆ ಪೆಟ್ಟುಬಿದ್ದಂತಾಗಿದೆ. ಸ್ವತಃ ಮಾನವ ಹಕ್ಕುಗಳ ಕಾರ್ಯಕರ್ತರೂ ಆಗಿರುವ ಫಿಲಿಪ್ ಆಲ್ಸ್ಟನ್ ತಮ್ಮ ಒಂದು ರೇಡಿಯೋ ಸಂದರ್ಶನದಲ್ಲಿ ಅಮೇರಿಕಾದಲ್ಲಿ ಬಡವರು ಮತ್ತು ಶ್ರೀಮಂತರ ನಡುವಿನ ಅಂತರ ಅಪಾಯಕಾರಿ ಮಟ್ಟದಲ್ಲಿ ಹೆಚ್ಚುತ್ತಿದೆ ಎಂದು ಕಟುನುಡಿಗಳನ್ನಾಡಿದ್ದಾರೆ.

## ಬಡತನವೆಂಬ ವಿಷಚಕ್ರ ಮತ್ತು ಶಿಕ್ಷಣ ವ್ಯವಸ್ಥೆ

ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಗಾಗಿ ಬರೆದ ಲೇಖನದಲ್ಲಿ ಪುಲಿಟ್ಜರ್ ಪ್ರಶಸ್ತಿ ವಿಜೇತ ಪತ್ರಕರ್ತ ನಿಕೊಲಾಸ್ ಕ್ರಿಸ್ಟಾಫ್ ಹೀಗೆ ಹೇಳಿದ್ದಾರೆ– "ಅಮೇರಿಕದಲ್ಲಿ ಬಡತನವೆಂಬುದು ಹಣದ ಅಭಾವದಿಂದ ಮಾತ್ರ ಉಂಟಾಗುತ್ತದೆ ಅಂತ ಹೇಳಿದರೆ ಅಪೂರ್ಣವಾದೀತು. ಏಕೆಂದರೆ ಒಮ್ಮೆ ಈ ವಿಷಚಕ್ರಕ್ಕೆ ಸಿಲುಕಿದ ವ್ಯಕ್ತಿ ಮತ್ತೆ ಮೇಲೇಳಲು ನಮ್ಮ ಸಮಾಜದಲ್ಲಿ ಬಹು ಕಡಿಮೆ ಆಯ್ಕೆಗಳಿವೆ."

ಅಮೇರಿಕದ ಶಿಕ್ಷಣ ವ್ಯವಸ್ಥೆ ವಿವಿಧ ಆರ್ಥಿಕ ವರ್ಗಗಳ ನಡುವೆ ತಾರತಮ್ಯ ಉಂಟು ಮಾಡುವುದು ವಿಪರ್ಯಾಸವೇ ಸರಿ. ಈ ದೇಶದ ಶೇಕಡಾ 87% ಮಕ್ಕಳು ಸರಕಾರಿ ಶಾಲೆಗಳಲ್ಲೇ ಉಚಿತವಾಗಿ ಕಲಿಯುತ್ತಾರೆ. ಆಯಾ ಪ್ರಾಂತ್ಯದಲ್ಲಿ ವಾಸಿಸುವ ಮಕ್ಕಳು ಆ ಪ್ರಾಂತ್ಯದ ಶಾಲೆಗಳಿಗೇ ಹೋಗಬೇಕೆಂಬ ನಿಯಮವಿದೆ. ಆ ಶಾಲೆಗಳನ್ನು ನಡೆಸಲು ಬಹುಪಾಲು ಹಣ ಆ ಪ್ರಾಂತ್ಯದಲ್ಲಿ ವಾಸಿಸುವವರ ಆಸ್ತಿ ತೆರಿಗೆಯಿಂದ (ಪ್ರಾಪರ್ಟಿ ಟ್ಯಾಕ್ಸ್‌ನಿಂದ) ಸಂದಾಯವಾಗುತ್ತದೆ. ಹೀಗಿದ್ದಾಗ ಶ್ರೀಮಂತ ಅಥವಾ ಮಧ್ಯಮವರ್ಗದವರು ವಾಸವಾಗಿರುವ ಪ್ರಾಂತ್ಯ (ಸ್ಕೂಲ್ ಡಿಸ್ಟ್ರಿಕ್ಟ್)ಗಳಲ್ಲಿ ಶಾಲೆಗಳ ಗುಣಮಟ್ಟ ಬಡ ಪ್ರಾಂತ್ಯದ ಶಾಲೆಗಳಿಗಿಂತ ಉತ್ತಮವಾಗಿರುತ್ತದೆ. ಬಡಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳು, ಶಿಕ್ಷಕರ ಗುಣಮಟ್ಟ, ಸುರಕ್ಷತೆ ಎಲ್ಲದಕ್ಕೂ ಮಕ್ಕಳೂ, ಪೋಷಕರೂ ಹೆಣಗಾಡಬೇಕು.

ಹಾಗಂತ ಬಡವರು ಶ್ರೀಮಂತ ಪ್ರಾಂತ್ಯಗಳಲ್ಲಿ ಮನೆ ಕೊಂಡು ಅಲ್ಲಿನ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸುವುದೂ ಕಷ್ಟಸಾಧ್ಯ. ಸಿರಿವಂತ ಪ್ರಾಂತ್ಯಗಳ ಅಧಿಕ ತೆರಿಗೆ ಮತ್ತು ಮಿತಿಮೀರಿದ ಆಸ್ತಿ ಬೆಲೆಗಳು ಅವರನ್ನು ಕಂಗೆಡಿಸುತ್ತವೆ. ಈ ಕಾರಣಕ್ಕಾಗಿ ಬಡಪ್ರಾಂತ್ಯಗಳ ಶಾಲೆಯಲ್ಲಿ ಕಲಿತ ಮಕ್ಕಳು ಸಮಾಜದಲ್ಲಿ ಎದುರಿಸುವ ಸವಾಲುಗಳು ಅಧಿಕವಾಗುತ್ತದೆ. ಹೀಗೆ ಬಡವರ ಮಕ್ಕಳನ್ನು ಬಡವರಾಗೇ ಉಳಿಸುವ, ಶ್ರೀಮಂತರ ಮಕ್ಕಳನ್ನು ಇನ್ನಷ್ಟು ಹಣವಂತರನ್ನಾಗಿಸುವ ವ್ಯವಸ್ಥೆಯಲ್ಲಿನ ತಾರತಮ್ಯವನ್ನು ಭೇದಿಸಲು ಇತ್ತೀಚೆಗೆ ಕೆಲವು ಕ್ರಮಗಳ ಕುರಿತು ಮಾತುಕತೆ ನಡೆಯುತ್ತಿದೆ.

## ಹೋಮ್‌ಲೆಸ್ ಹೇಗಾಗುತ್ತಾರೆ?

ಬಡತನ ರೇಖೆಗಿಂತ ಕೆಳಗಿರುವಾಗ ಬದುಕಿನಲ್ಲಿ ಅನಿರೀಕ್ಷಿತ ತಿರುವುಗಳು ಬಂದರೆ ಆ ಸಂಕಟ ಹೇಳತೀರದು. ಇರುವ ಕೆಲಸ ದಿಢೀರನೆ ಹೋದಾಗ, ಮನೆಯ ಕ್ರಯ ತೀರಿಸಲು ಆಗದಿದ್ದಾಗ, ಮಾದಕ ವ್ಯಸನಕ್ಕೆ ತುತ್ತಾದಾಗ, ಮಾನಸಿಕವಾಗಿ ಅಸ್ವಸ್ಥರಾದಾಗ, ಕೌಟುಂಬಿಕ ದೌರ್ಜನ್ಯದಿಂದ ಬೇಸತ್ತಾಗ ಇವರು ಮನೆ ತೊರೆದು ರಸ್ತೆಗಳ ಮೇಲೆ ವಾಸಿಸಲು ತೊಡಗುತ್ತಾರೆ. 2015ರಲ್ಲಿ ರೈಟರ್ಸ್ ನ್ಯೂಸ್ ಏಜೆನ್ಸಿಯು ವರದಿ ಮಾಡಿದ ಪ್ರಕಾರ ಅಮೇರಿಕಾದಲ್ಲಿ ಐದು ಲಕ್ಷಕ್ಕಿಂತ ಹೆಚ್ಚು ಜನ 'ಹೋಮ್‌ಲೆಸ್' ಅಂದರೆ ಸೂರಿಲ್ಲದ ಜನರಿದ್ದಾರೆ.

ನಾನು ಕೇಳರಿಯದ ಅನ್ಯ ಲೋಕದ ಮಾಹಿತಿಯನ್ನು ಟ್ರೇಸಿಯಿಂದ ತಿಳಿದುಕೊಂಡಾಗಿನಿಂದ ಅಮೇರಿಕದ ಜನ ಜೀವನವನ್ನು ಬೇರೆಯದೇ ಕಣ್ಣಿನಿಂದ ಕಾಣುವುದು ಸಾಧ್ಯವಾಗಿದೆ. ಅಂದು ಸಮಯವಾಯಿತೆಂದು ಲೈಬ್ರರಿಯಿಂದ ಹೊರಟ ಟ್ರೇಸಿಯನ್ನು ಇನ್ನೊಮ್ಮೆ ಅಪ್ಪಿ ಬೀಳ್ಕೊಟ್ಟೆ. ಯಾವ ಕೆಟ್ಟ ಕ್ಷಣದಲ್ಲೂ ಇವಳ ತಲೆಯ ಮೇಲಿನ ಸೂರು ಮಾಯವಾಗದಿರಲಿ ಅಂತ ಮನಸ್ಸು ಆಳವಾಗಿ ಬಯಸಿತು.

ಅಂಥ ದುರುಳ ಕ್ಷಣ ಎಂದಿಗೂ ಬರುವುದಿಲ್ಲವೆಂಬ ಆತ್ಮವಿಶ್ವಾಸದಲ್ಲಿ ಹೈಹೀಲ್ಡು ಧರಿಸಿ ಟ್ರೇಸಿ ಬಿಂಗಿನಿಂದ ನಡೆದಿದ್ದಳು.

ನಾ ಮೇಲಿನವನು ಎಂದು ಮರೆದಾಡ ಬೇಡ ಗೆಳೆಯ ನಿನಗಿಂತ ಮಿಗಿಲವರು ಇದ್ದಾರು ಭುವಿಯಲ್ಲಿ
• ಬಿ. ಟಿ. ಲಲಿತಾನಾಯಕ

# ನಾಟಕ ಒಂದು ಪಕ್ಷಿನೋಟ

ಡಾ. ಎಂ ಜಿ ಪ್ರಸಾದ್



## ಪೀಠಿಕೆ

ಮನುಷ್ಯನು ಬುದ್ಧಿಜೀವಿಯಷ್ಟೇ ಅಲ್ಲದೆ ಭಾವಜೀವಿಯೂ ಹೌದು. ಆದ್ದರಿಂದ ಯಾವರೀತಿಯ ಭಾವಗಳಲ್ಲಿ ಮನುಷ್ಯನು ತನ್ನ ಮನಸ್ಸನ್ನು ಅಳವಡಿಸಿಕೊಂಡಿರಬೇಕು ಎಂಬುದು ಮುಖ್ಯವಾಗುತ್ತದೆ. ಅದಕ್ಕಾಗಿಯೇ "ಯದ್ಭಾವಂ ತದ್ ಭವತಿ" ಎಂದರೆ ಹೇಗೆ ಭಾವವಿದೆಯೋ ಹಾಗೆ ಆಗುತ್ತದೆ ಎಂದಿದೆ. ಇನ್ನೊಂದು ಮುಖ್ಯವಾದ ವಿಷಯವೆಂದರೆ ಮನುಷ್ಯನ ಭಾವ ಪ್ರಪಂಚವೆಂದರೆ ಅವನು ಅಥವಾ ಅವಳು ಓದುವ, ನೋಡುವ ಮತ್ತು ಕೇಳುವ ಸಾಹಿತ್ಯ ಮತ್ತು ಕಲಾ ಪ್ರಪಂಚ. ಆದ್ದರಿಂದಲೇ "ಸಂಗೀತ ಸಾಹಿತ್ಯ ಕಲಾವಿಹೀನಃ ಸಾಕ್ಷಾತ್ಪಶು: ಪುಚ್ಛವಿಷಾಣಹೀನಃ" ಅಂದರೆ ಯಾವುದೇ ಮನುಷ್ಯನಿಗೆ ಸಂಗೀತ, ಸಾಹಿತ್ಯ ಹಾಗೂ ಕಲೆಯಲ್ಲಿ ಯಾವ ರೀತಿಯ ಆಸಕ್ತಿಯೂ ಇಲ್ಲವೋ ಅಂತಹ ಮನುಷ್ಯನು ಕೊಂಬು ಹಾಗೂ ಬಾಲ ಇಲ್ಲದ ಪಶುವಿನಂತೆ ಎಂದಿದೆ. ನಾಟಕವು ಸಾಹಿತ್ಯ, ಸಂಗೀತ ಹಾಗೂ ಕಲೆ ಇವುಗಳನ್ನು ಒಳಗೊಂಡಿರುವುದಾಗಿದೆ. ಅದಕ್ಕಾಗಿಯೇ "ಕಾವ್ಯೇಷು ನಾಟಕಂ ರಮ್ಯಂ" – ಕಾವ್ಯಗಳಲ್ಲಿ ನಾಟಕವು ರಮಣೀಯವಾದುದು ಎಂದಿದ್ದಾರೆ ಕಾಳಿದಾಸ ಎಂದಿದೆ. ನಾಟಕವು ಆನಂದದ ಸ್ಪಂದನ. ಅದು ಹೇಗೆಂದರೆ ರಂಗಭೂಮಿಯ ಮೇಲೆ ಅತ್ಯಂತ ಪ್ರತಿಭಾನ್ವಿತ ನಟ ಹಾಗೂ ನಟಿಯರಿಂದ ತುಂಬಿ ಬರುವ ರಸಭರಿತವಾದ ಸಂಭಾಷಣೆಗಳು ಒಂದು ಕಲೆಯ ಮೂಲಕ ಬಂದಾಗ ಅದನ್ನು ಉನ್ನತ ಮನೋಭಾವದಲ್ಲಿ ಪ್ರೇಕ್ಷಕರು ನೋಡಿ ಆನಂದದಿಂದ ಸ್ಪಂದಿಸುತ್ತಾರೆ. ನಾಟಕವು ಜೀವನವನ್ನೇ ರಂಗಭೂಮಿಯ ಮೇಲೆ ಪ್ರತಿಬಿಂಬಿಸುವ ಕಲೆಯಾಗಿದೆ. ಆಂಗ್ಲ ಸಾಹಿತ್ಯದ ಪ್ರಖ್ಯಾತ ನಾಟಕಕಾರನಾದ ಷೇಕ್ಸ್ ಪಿಯರ್ ಹೇಳಿದಂತೆ "ಜಗತ್ತೇ ಒಂದು ರಂಗಭೂಮಿ. ಎಲ್ಲಾ ಪುರುಷರು ಹಾಗೂ ಸ್ತ್ರೀಯರು ನಟ–ನಟಿಯರಂತೆ." ಸಂಸ್ಕೃತ ಸಾಹಿತ್ಯದ ಆಧ್ಯಾತ್ಮಿಕ ಮತ್ತು ಮಹಾ ಕವಿಯಾದ ಶ್ರೀ ಕಾಳಿದಾಸನು ತನ್ನ ಮಾಳವಿಕಾಗ್ನಿಮಿತ್ರ ಎಂಬ ನಾಟಕದಲ್ಲಿ "ಕೃತುಂ ಚಾಕ್ಷುಷು" ಎಂದರೆ ನಾಟಕವು ಒಂದು ನೇತ್ರ ಯಜ್ಞದಂತೆ ಎಂದು ಹೇಳಿ "ತ್ರೈಗುಣ್ಯೋದ್ಭವಮತ್ರ ಲೋಕಚರಿತಂ ನಾನಾ ರಸಂ ದೃಶ್ಯತೇ; ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ" ಅಂದರೆ ಲೋಕದಲ್ಲಿ ಮೂರು ಗುಣಗಳಿಂದ (ಸತ್ವ, ರಜಸ್, ತಮಸ್) ನಾನಾ ರಸಗಳ (ನವರಸ) ಮೂಲಕ ಭಿನ್ನ ರುಚಿಗಳಿರುವ ಪ್ರೇಕ್ಷಕರಿಗೆ ನಾಟಕ ಹಾಗೂ ನಾಟ್ಯವು ಆನಂದ ನೀಡುವ ಸಮಾರಾಧನೆ. ಮನುಷ್ಯರ ಭಾವಲೋಕದಲ್ಲಿನ ಅವಿಭಾಜ್ಯ ಅಂಗವಾದ ನಾಟಕ ಕಲೆಯು ಪ್ರಭಾವಯುತವಾಗಬೇಕಾದರೆ ಮೂರು ಅಂಶಗಳನ್ನೊಳಗೊಂಡಿರಬೇಕು. ಅವುಗಳ ಸಂಯೋಗವೇ ನಾಟಕದ ಸಫಲತೆ. ಆ ಮೂರು ಅಂಗಗಳೇ ಕಥಾವಸ್ತು, ನಟ–ನಟಿಯರು ಹಾಗೂ ಪ್ರೇಕ್ಷಕ ವರ್ಗ.

## ಕಥಾವಸ್ತು

ಕಥಾವಸ್ತು ನಾಟಕದ ಆಧಾರ. ನಟ–ನಟಿಯರ ವರ್ಗವನ್ನು ಹಾಗೂ ಪ್ರೇಕ್ಷಕ ವರ್ಗವನ್ನು ಒಟ್ಟಿಗೆ ಜೊತೆಗೂಡಿಸುವುದೇ ಕಥಾವಸ್ತು ಅಥವಾ ಸಾಹಿತ್ಯ. ಮನುಷ್ಯನಿಗೆ ಹೇಗೆ ಭೌತಿಕ ದೃಷ್ಟಿಯಿಂದ ಆಹಾರದಲ್ಲಿ ಷಡ್ರಸ ಅಂದರೆ ಉಪ್ಪು, ಹುಳಿ, ಖಾರ, ಸಿಹಿ, ಕಹಿ ಮತ್ತು ಒಗರು ಸಮನ್ವಯಗೊಂಡಿರಬೇಕೋ, ಹಾಗೆಯೇ ಮನೋ ಬುದ್ಧಿಗಳ ಮಟ್ಟದಲ್ಲಿ ಸಾಹಿತ್ಯದ ನವರಸಗಳು ಬೇಕು. ಆ ನವರಸಗಳೇ ಶೃಂಗಾರ, ವೀರ, ಕರುಣ, ಹಾಸ್ಯ, ಅದ್ಭುತ, ರೌದ್ರ, ಭೀಭತ್ಸ, ಭಯಾನಕ ಮತ್ತು ಶಾಂತ. ಈ ನವರಸಗಳಲ್ಲಿ ಮೊದಲ ಎಂಟು ರಸಗಳು ಒಂದು ವರ್ಗಕ್ಕೆ ಸೇರಿದರೆ ಅಂತಿಮವಾದ ಶಾಂತ ರಸವು ಪ್ರತ್ಯೇಕವಾಗಿ ನಿಲ್ಲುತ್ತದೆ. ಏಕೆಂದರೆ ಸಂತೋಷವನ್ನರಸಿ ಹೊರಟ ಮನಸ್ಸಿಗೆ ಮೊದಲು ಶೃಂಗಾರ ರಸವೇ ಸ್ಫೂರ್ತಿಯನ್ನು ನೀಡಿ ಧ್ಯೇಯ ವಸ್ತುವನ್ನು ಪಡೆಯಲು ಮನಸ್ಸನ್ನು ಹೊರಡಿಸುತ್ತದೆ. ನಂತರ ಮಾರ್ಗದಲ್ಲಿ ಮಿಕ್ಕ ವಸ್ತುಗಳ ಅನುಭವವಾಗಿ ಅಂತಿಮ ಧ್ಯೇಯ ಶಾಂತ ರಸ ಎಂದು ತೋರಿಸಿ ಮನಸ್ಸನ್ನು ಶಾಂತಿ ಹಾಗೂ ಆನಂದದಲ್ಲಿ ನಿಲ್ಲಿಸುವುದೇ ಉತ್ಕೃಷ್ಟವಾದ ಸಾಹಿತ್ಯ ಅಥವಾ ಕಥಾವಸ್ತು.

ಆದಿಕಾವ್ಯವೆನಿಸಿದ ಶ್ರೀ ವಾಲ್ಮೀಕಿ ರಚಿಸಿದ ರಾಮಾಯಣವು ನವರಸಗಳ ಸಮನ್ವಯಕ್ಕೆ ಆದರ್ಶವೆನಿಸಿದೆ. ಇದರಲ್ಲಿ ರಾಮನು ತನ್ನ ಪತ್ನಿ ಸೀತಾದೇವಿಯೊಡನೆ ರಮಿಸುವಾಗ ಶೃಂಗಾರ ರಸ, ಶಿವಧನುಸ್ಸನ್ನು ಮುರಿದಾಗ ವೀರ ರಸ, ಕಾಕಾಸುರನಿಗೆ ಕರುಣೆ ತೋರಿದಾಗ ಕರುಣ ರಸ, ಕಪಿಗಳ ಸಹಾಯದಿಂದ ಸಾಗರದಲ್ಲಿ ಸೇತುವೆ ಕಟ್ಟಿದಾಗ ಅದ್ಭುತ ರಸ, ಯುದ್ಧ ಭೂಮಿಯಲ್ಲಿ ಕಾದಾಡುವಾಗ ಭಯಾನಕ ಮತ್ತು ಭೀಭತ್ಸ ರಸಗಳು, ರಾವಣನನ್ನು ಸಂಹಾರ ಮಾಡುವಾಗ ರೌದ್ರ ರಸ ಹಾಗೂ ಮುನಿಜನರ ವಿಷಯ ದಲ್ಲಿ ಶಾಂತರಸ. ಈ ನವರಸ ಪೂರ್ಣತೆಯಿಂದಲೇ ಇವತ್ತಿಗೂ ಅನೇಕಾನೇಕ ನಾಟಕ ಹಾಗೂ ನೃತ್ಯ ನಾಟಕಗಳು ರಾಮಾಯಣವನ್ನು ಆಧರಿಸಿ ರಚಿತವಾಗುತ್ತಿವೆ. ಸಂಸ್ಕೃತ ಸಾಹಿತ್ಯದಲ್ಲಿ ಹಾಗೂ ಅದರ ಪ್ರಭಾವ ಮತ್ತು ಪ್ರೇರಣೆಯಿಂದ ಕನ್ನಡ ಸಾಹಿತ್ಯದಲ್ಲಿ ಅತ್ಯುತ್ತಮವಾದ ನಾಟಕಗಳನ್ನು ರಚಿಸಿದ ನಾಟಕಕಾರರಿದ್ದಾರೆ. ಸಂಸ್ಕೃತ ನಾಟಕಕಾರರಲ್ಲಿ ಕಾಳಿದಾಸ, ಭಾಸ, ಶೂದ್ರಕ ಮತ್ತು ಭವಭೂತಿ ಮುಂತಾದವರಿದ್ದಾರೆ. ಕನ್ನಡ ಸಾಹಿತ್ಯದಲ್ಲಿಯೂ ಅತ್ಯುತ್ತಮ ನಾಟಕಗಳನ್ನು ನೀಡಿರುವವರಲ್ಲಿ ಕುವೆಂಪು, ಪುತಿನ, ಬಿಎಂಶ್ರೀ ಮತ್ತು ಕೈಲಾಸಂ ಮುಂತಾದವರಿದ್ದಾರೆ.



## ನಟ-ನಟಿಯರ ವರ್ಗ

ಕಥಾವಸ್ತುವಿನ ಪ್ರಾಮುಖ್ಯತೆಗೆ ಸಮನಾಗಿರುವ ಎರಡನೆಯ ಅಂಶವೇ ನಟ-ನಟಿಯರ ವರ್ಗ ಹಾಗೂ ನಾಟಕದ ಸೂತ್ರಧಾರನಾದ ನಿರ್ದೇಶಕ. ನಾಟಕವನ್ನು ರಂಗಭೂಮಿಯ ಮೇಲೆ ಸಫಲತೆಯಿಂದ ಜೀವಂತಗೊಳಿಸಬೇಕಾದರೆ ನಿರ್ದೇಶಕನಿಗೆ ಕಥಾವಸ್ತು, ಪಾತ್ರಗಳಿಗೆ ತಕ್ಕ ನಟ-ನಟಿಯರ ನಟನಾ ಸಾಮರ್ಥ್ಯ, ರಂಗಭೂಮಿಯ ಹಿನ್ನೆಲೆ ಹಾಗೂ ಪ್ರೇಕ್ಷಕರ ಮನೋಭಾವ ಇವುಗಳ ಪರಿಚಯ ಚೆನ್ನಾಗಿ ಇರಬೇಕು. ನಿರ್ದೇಶಕನಿಗೆ ನಟನಾ ಸಾಮರ್ಥ್ಯವಿರಬೇಕು. ನಾಟಕದ ಪೂರ್ಣ ಪ್ರಭಾವ ಪ್ರೇಕ್ಷಕರ ಮೇಲಾಗಬೇಕಾದರೆ ಅತಿ ಮುಖ್ಯವಾಗಿ ಎಲ್ಲ ನಟ-ನಟಿಯರು ತಮ್ಮ ಪಾತ್ರವು ಚಿಕ್ಕದು ಅಥವಾ ದೊಡ್ಡದು ಎಂಬ ಭಾವನೆಯನ್ನು ತ್ಯಜಿಸಿ ನಾಟಕದ ಸಫಲತೆಗೆ ಎಲ್ಲರೂ ಸಮ ಎಂಬ ಒಂದೇ ಗುರಿಯಿಂದ ನಟಿಸಬೇಕು. ನಿರ್ದೇಶಕನು ನಟ-ನಟಿಯರ ಪಾತ್ರ ನಿರ್ವಹಣೆಗೆ ಬೇಕಾದ ರಂಗ ಸಜ್ಜಿಕೆ, ಹಿನ್ನೆಲೆ ಸಂಗೀತ, ವೇಷ ಭೂಷಣಗಳು ಇತ್ಯಾದಿ ಅಂಶಗಳ ಬಗ್ಗೆ ಗಮನವಿಡಬೇಕು.

## ಪ್ರೇಕ್ಷಕ ವರ್ಗ

ನಾಟಕದ ಸಫಲತೆಯ ಪೂರ್ಣತೆ ಉಂಟಾಗುವುದು ಪ್ರೇಕ್ಷಕರು ನಾಟಕವನ್ನು ನೋಡಿ, ಅರಿತು, ಆನಂದಿಸಿ ಅದರಿಂದ ಅವರ ಮನಸ್ಸು ಉತ್ತಮ ಸಂಸ್ಕಾರ ಪಡೆದಾಗ ಮಾತ್ರ ಎನ್ನಬಹುದು. ಹೇಗೆ ಷಡ್ರಸಪೂರಿತವಾದ ಆಹಾರವನ್ನು ನಾಲಿಗೆಯ ಮೂಲಕ ರಸಾಸ್ವಾದನೆ ಮಾಡಿದಾಗ ಒಳ್ಳೆಯ ರುಚಿಯೊಡನೆ ಉತ್ತಮ ಅರೋಗ್ಯ ನೀಡುವುದೋ, ಹಾಗೆಯೇ ನವರಸಭರಿತ ಕಥಾವಸ್ತುವನ್ನು ಉತ್ತಮ ನಿರ್ದೇಶಕ ಹಾಗೂ ಉತ್ತಮ ನಟ-ನಟಿಯರು ನೀಡಿದ ನಾಟಕವು ಮನಸ್ಸಿಗೆ ಸಂತೋಷ ನೀಡುವುದರ ಜೊತೆಗೆ ಉನ್ನತ ಸಂಸ್ಕಾರ ನೀಡಬೇಕು. ಪ್ರೇಕ್ಷಕರು ಉದಾತ್ತ ಭಾವನೆಗಳನ್ನು ಹೊರತರುವ ಕಥಾವಸ್ತುವನ್ನೇ ನಾಟಕದಲ್ಲಿ ನಿರೀಕ್ಷಿಸಬೇಕು. ಏಕೆಂದರೆ ಪ್ರೇಕ್ಷಕರು ಕಳಪೆ ವಿಷಯಗಳನ್ನು ಹಾಗೂ ಕೆಳಮಟ್ಟದ ಕಥಾವಸ್ತುವನ್ನು ಅಪೇಕ್ಷಿಸಿದರೆ ನಾಟಕಕಾರನೇ ಆಗಲಿ ಅಥವಾ ನಿರ್ದೇಶಕನೇ ಆಗಲಿ ಹೇಗೆ ಉನ್ನತ ಮಟ್ಟದಲ್ಲಿ ಇರಲು ಸಾಧ್ಯ. ಆದ್ದರಿಂದ ಪ್ರೇಕ್ಷಕರ ಜವಾಬ್ದಾರಿ ಉನ್ನತವಾದುದು. ಇನ್ನೊಂದು ದೃಷ್ಟಿಯಲ್ಲಿ ನೋಡಿದಾಗ ಹೇಗೆ ಉತ್ತಮವಾದ ರುಚಿಯಿರುವ ಆಹಾರವಿದ್ದರೂ ತಿನ್ನುವವರ ನಾಲಿಗೆಯು ಕೆಟ್ಟಿದ್ದರೆ ರುಚಿಕಾಣುವುದಿಲ್ಲವೋ ಹಾಗೆಯೇ ಉತ್ತಮವಾದ ಕಥಾವಸ್ತು ಹಾಗೂ ಉತ್ತಮ ನಾಟಕ ಪ್ರದರ್ಶನವಿದ್ದರೂ ನೋಡುವ ಪ್ರೇಕ್ಷಕನ ಮನಸ್ಸು ಕೆಟ್ಟು ಕೆಳಗಿನ ಮಟ್ಟದಲ್ಲಿ ಇದ್ದರೆ ರುಚಿಸುವುದಿಲ್ಲ. ಅದಕ್ಕಾಗಿಯೇ ಪ್ರೇಕ್ಷಕನು ರಸಿಕನಾಗಿರಬೇಕು. ಅಂದರೆ ಉದಾತ್ತವಾದ ಭಾವದೊಡನಿರಬೇಕು.

## ಸಾರಾಂಶ

ಒಟ್ಟಿನಲ್ಲಿ ನಾಟಕ ಮನುಷ್ಯನ ಮನಸ್ಸು ಹಾಗೂ ಬುದ್ಧಿಯ ಮೇಲೆ ಅತಿ ಪ್ರಭಾವ ಬೀರುವ ಮಾಧ್ಯಮ. ನಾಟಕದ ಕಥಾ ವಸ್ತು, ನಿರ್ದೇಶಕನೊಡಗೂಡಿದ ನಟ-ನಟಿಯರು ಹಾಗೂ ರಸಿಕರಾದ ಪ್ರೇಕ್ಷಕರು ಎಲ್ಲವೂ ಉದಾತ್ತವಾಗಿರಬೇಕು. ಕೇವಲ ಮನೋರಂಜನೆಯಲ್ಲಿ ನಿಲ್ಲದೆ ಅದರ ಜೊತೆಗೆ ಮನೋ ಪೋಷಣೆ ಉಂಟಾಗಿ ನಾಟಕ ಕ್ಷೇತ್ರದಲ್ಲಿ ಎಲ್ಲರೂ ಉದಾತ್ತ ಭಾವನೆಗಳತ್ತ ಇರಲೇಬೇಕು. ಆಗಲೇ ನಾಟಕದ ಸಫಲತೆ.

---

**ಲೇಖಕರ ಬಗ್ಗೆ**

ಡಾ. ಎಂ ಜಿ ಪ್ರಸಾದ್ ರವರು ತಮ್ಮ ಪತ್ನಿ ಶ್ರೀಮತಿ ಗೀತಾ ಪ್ರಸಾದ್ ಅವರೊಡನೆ ಸೇರಿ ತರಂಗ ಕಲಾಲಯದ ಕಲಾವಿದರೊಡಗೂಡಿ ಸುಮಾರು ಐವತ್ತಕ್ಕೂ ಮೀರಿ ಕನ್ನಡ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ನಾಟಕ ಮತ್ತು ನೃತ್ಯನಾಟಕಗಳನ್ನು ಪ್ರದರ್ಶಿಸಿದ್ದಾರೆ. ನ್ಯೂಯಾರ್ಕ್ ನ ಕನ್ನಡ ಕೂಟವು ಡಾ. ಎಂ ಜಿ ಪ್ರಸಾದ್ ರವರಿಗೆ 'ಕನ್ನಡ ಕಲಾರತ್ನ' ಎಂಬ ಗೌರವ ನೀಡಿದೆ.

(mgprasad@comcast.net)

**ಕವಿತೆ**

ಕರುಣಾ ಬಿ.ಎಸ್.

# ಶಕ್ತಿ–ಅಭಿವ್ಯಕ್ತಿ



ಈಶನೇ ಬ್ರಹ್ಮಾಂಡ ಈಶನೇ ಜಗತ್ತು ಸಾರುತ್ತಾ ಸಾಗಿತ್ತು ಆ ಶಕ್ತಿ
ಇರಬಹುದು ಬಲ್ಲವರಾರು? ಎಂದಿತ್ತು ಈ ನನ್ನ ಅಭಿವ್ಯಕ್ತಿ
ಗುಡಿಯಲ್ಲಿಲ್ಲ ಮೂರ್ತಿಗಳಲ್ಲಿಲ್ಲ ಅಂತರಂಗವನ್ನರತು ಉಸುರಿತ್ತು ಆ ಶಕ್ತಿ
ಮೊದಲು ಸಿದ್ಧಾಂತಗಳನ್ನರಿವೆ ಎಂದುಲಿಯಿತು ಈ ನನ್ನ ಅಭಿವ್ಯಕ್ತಿ

ಮಠವನ್ನು ಸೇರಿದೆ ಶಾಸ್ತ್ರ–ಪುರಾಣಗಳನ್ನು ಜಾಲಾಡಿದೆ
ಜಗಕೆ ಹುಸಿ ಜ್ಞಾನದ ಉಪದೇಶವನ್ನೇ ಹರಿಸಿದೆ
ಸಮಾಜದಿ ನಾನೇ ದೇವಾಂಶನೆಂಬ ಭ್ರಮೆಯ ಬಿತ್ತಿದೆ
ಜ್ಞಾನದ ಮೇರು ಶಿಖರವೇ ನಾನೆಂದು ಬೀಗಿದೆ
ಭಜಿಸುವ ಭಕ್ತರು ದೇವರ ಅವತಾರವೆಂದರು
ನೆಲಕೆ ಬೀಳುವ ತರಗಲೆಯಂತೆ ಕಾಲೊಳೆ ಕುಸಿದರು
ಅಹಂಕಾರ ಪಡಬೇಡ ಕೆಳಗೆ ಬಾ ಎಚ್ಚರಿಸಿತು ಆ ಶಕ್ತಿ
ಸುಮ್ಮನಿರು ಈರ್ಷ್ಯೆ ಪಡಬೇಡ ಹುಡುಕಾಡಿತು ಈ ನನ್ನ ಅಭಿವ್ಯಕ್ತಿ
ನಿನ್ನ ಸಿದ್ಧಾಂತಗಳು ಜ್ಞಾನವೆಲ್ಲ ಒಳ ಇಣುಕೆಂದು ಸಂತಾಪಿಸಿತು ಆ ಶಕ್ತಿ
ಎಲ್ಲೆಲ್ಲೂ ಪಸರಿಸಿರುವೆ ನಿನಗೆ ತಿಳಿಯದೆಂದಿತು ಈ ನನ್ನ ಅಭಿವ್ಯಕ್ತಿ

ಪಾಮರರು ಬದುಕಿನ ಸೂತ್ರಧಾರನೆನ್ನತೊಡಗಿದರು
ಜುಟ್ಟು ಜನಿವಾರ ಎನ್ನ ಕೈಯಲಿತ್ತು ಪಾಪದವರಾದರು
ನಂಬಿಕೆಯ ಮನೆಯ ಮೇಲೆ ನವಸಿದ್ಧಾಂತದ  ಕಟ್ಟಡ ಕಂಡು ಬೆಚ್ಚಿಬಿದ್ದರು
ಎಲ್ಲವೂ ಅಯೋಮಯವೆಂದು ಗೊಂದಲದಿಂದ ತಬ್ಬಿಬ್ಬಾದರು

ಮುಗ್ಧ ನಂಬಿಕೆಯ ಹುಸಿಮಾಡದಿರು ಎಚ್ಚರಿಸಿತು ಆ ಶಕ್ತಿ
ಲೊಳಲೊಟ್ಟೆ ಇದು ಜನಾದೇಶವೆಂದಿತು ನನ್ನ ಅಭಿವ್ಯಕ್ತಿ
ನೀ ಬೊಮ್ಮನಾಗದಿರು ಪರಿಪರಿಯಾಗಿ ಬೇಡಿತು ಆ ಶಕ್ತಿ
ನೀನು ಮಿಥ್ಯೆ ನಾನು ಶಕ್ತಿ ಕೂಗಿತು ನನ್ನ ಅಭಿವ್ಯಕ್ತಿ

ಇಟ್ಟ ನಂಬಿಕೆಯ ಹುಸಿಮಾಡಿದೆಯಲ್ಲೋ ದುರುಳ, ಕೂಗಿತು ಜನತೆ
ಮನ್ನಿಸು ಎನ್ನ, ಪಶ್ಚಾತ್ತಾಪದಿ ರೋದಿಸುತ್ತಾ ಕುಳಿತೆ
ನೀನೇ ಶಕ್ತಿ ನಾನೇ ಮಿಥ್ಯೆ ಒಪ್ಪಿತು ಎನ್ನ ಅಭಿವ್ಯಕ್ತಿ
ಕಾಲ ಮಿಂಚಿಲ್ಲವಿನ್ನೂ ಎನ್ನ ಬಳಿ ಬಾ; ಕೈ ಚಾಚಿತ್ತು ಆ ಶಕ್ತಿ

# "ಗುರು ಎಂದರೆ ಗೂಗಲ್ ಅಲ್ಲ ಕಂದ...."

ಸರಿತಾ ನವಲಿ



**"ಕಲಿಸುಗುರುವೆಕಲಿಸು, ಕಲಿಸುಸದ್ಗುರುವೆನೀಕಲಿಸು।**
**ಸುಳ್ಳಿನನಡುವೆನಾಸತ್ಯವನಾಡಲುಕಲಿಸು,**
**ಸ್ವಾರ್ಥದನಡುವೆನಿಸ್ವಾರ್ಥಿಯಾಗಲುಕಲಿಸು,**
**ಅಂಜಿನಡೆವರನಡುವೆಧೀರನಾಗಲುಕಲಿಸು,**
**ಧರೆಯದುಷ್ಟರನಡುವೆಜಾಣನಾಗಲುಕಲಿಸು ॥"**

ಕನ್ನಡ ಶಾಲೆಯಲ್ಲಿ ನಮ್ಮ ಪುಟ್ಟ ಕಲಿತ ಹಾಡೊಂದರ ಸಾಲುಗಳಿವು. "ಗುರು ಅಂದ್ರೆ ಯಾರೋ ಕಂದ?" ಎಂದ ಅಮ್ಮನ ಪ್ರಶ್ನೆಗೆ "Teacher"ಎಂದು ಉತ್ತರ ಹೇಳಿದ ಪುಟ್ಟ. ಅಷ್ಟಕ್ಕೇ ಸುಮ್ಮನಾಗದ ಅಮ್ಮ, "ಟೀಚರ್ ಅಂದ್ರೆ ಯಾರು?" ಅಂದಾಗ, "One who teaches," ಎನ್ನುತ್ತ ತನ್ನ ಮಾತು ಮುಂದುವರೆಸಿ, "ಒಂದ್ನಿಮಿಷ ಇರಮ್ಮ, ಗೂಗಲ್ ನಲ್ಲಿ ನೋಡಿ ಹೇಳ್ತೀನಿ" ಎಂದ ಪುಟ್ಟ ಕಂಪ್ಯೂಟರಿನ ಮುಂದೆ ಕುಳಿತುಕೊಂಡ. ಅಂತರ್ಜಾಲದ 'ಗೂಗಲ್' ಪುಟದಲ್ಲಿ 'ಟೀಚರ್' ಎಂಬ ಪದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಹುಡುಕಿದ. "TEACHER ಅಂದ್ರೆ, MenTor, InspirE, EducAte, CoaCh, SHare, InfluEnce, EncouRage" ಎಂದುಪುಟ್ಟ ಹುಡುಕಿದ ಮಾಹಿತಿಯಲ್ಲಿ ಟೀಚರ್ ಎನ್ನುವ ಪದವನ್ನು ಅನೇಕಗುಣ ವಿಶೇಷಕಗಳಿಂದ ವಿವರಿಸಲಾಗಿತ್ತು. ಇದು ನಾವೆಲ್ಲರೂ ಒಪ್ಪುವ ಮಾತೇ ಆಗಿದೆ. "'ಗುರು' ಎಂದರೆ ಯಾರು?"ಎಂದು ನಮ್ಮನ್ನು ನಾವೇ ಪ್ರಶ್ನಿಸಿಕೊಂಡಾಗ ತಕ್ಷಣ ಹೇಳುವ ಸರಳವಾದ ಉತ್ತರವೆಂದರೆ, ಮಗುವಾಗಿದ್ದಾಗ ಅಕ್ಷರತಿದ್ದಿಸಿ, ಬುದ್ಧಿ ಹೇಳುವ ತಂದೆ–ತಾಯಿ, ಶಾಲೆ–ಕಾಲೇಜುಗಳಲ್ಲಿ ವಿದ್ಯೆ ಹೇಳಿ ಕೊಡುವ ಶಿಕ್ಷಕರು ಮತ್ತು ಹೆಚ್ಚಿನ ಜ್ಞಾನವನ್ನು ಪಡೆದುಕೊಳ್ಳುವ ಅವಕಾಶ ದೊರೆತಾಗ, ಆ ವಿಷಯದಲ್ಲಿ ನಿಪುಣತೆ ಹೊಂದಿದ ಮತ್ತು ಸರಿಯಾದ ಮಾರ್ಗದರ್ಶನ ನೀಡುವವ್ಯಕ್ತಿ ಎಂಬುದು. 'ಗುರು' ಎಂಬ ಪದವನ್ನು ವಿಸ್ತರಿಸಿ ಅರ್ಥವನ್ನು ತಿಳಿದಾಗ, 'ಗುರು' ಎಂದರೆ ಅಜ್ಞಾನದ ಅಂಧಕಾರದಿಂದ ಜ್ಞಾನದ ಬೆಳಕಿನೆಡೆಗೆ ಕರೆದೊಯ್ಯುವ ಶಕ್ತಿ ಎಂದು ತಿಳಿಯುತ್ತದೆ. ಮತ್ತು ಮನೆಯಲ್ಲಿನ ತಂದೆ–ತಾಯಿ, ಶಾಲೆಯಲ್ಲಿನ ಶಿಕ್ಷಕರು, ಹೆಚ್ಚಿನ ಜ್ಞಾನವನ್ನು ಪಡೆಯಲು ಮಾರ್ಗದರ್ಶನ ನೀಡುವುದ– ರೊಂದಿಗೆ,ನಮ್ಮ ಬದುಕಿನಲ್ಲಿ 'ಗುರು'ವಾಗಿ ದಾರಿ ತೋರುವಲ್ಲಿ ನಮ್ಮ ಜೀವನಾನುಭವಗಳೂ ಮುಖ್ಯಪಾತ್ರ ವಹಿಸುತ್ತವೆ ಎನ್ನುವುದೂ ತಿಳಿಯುತ್ತದೆ.



**"ಅನುಭವದ ಪಾಲೊಳು ವಿಚಾರ ಮಂಥನವಾಗೆ ।**
**ಜನಿಯಿಕುಂ ಜ್ಞಾನನವನೀತವದೆ ಸುಖದಿಂ ॥**

**ಗಿಣಿಯೋದು ಪುಸ್ತಕ ಜ್ಞಾನ ; ನಿನ್ನನುಭವವೆ ।**
**ನಿನಗೆ ಧರುಮದ ದೀಪ – ಮಂಕುತಿಮ್ಮ ॥"**


ನಾವುಮನನ ಮಾಡಿಕೊಳ್ಳುವ ಜೀವನದ ಅನುಭವಗಳೇ ನಮಗೆ ಜ್ಞಾನವನ್ನು ನೀಡುವುದರೊಂದಿಗೆ, ನಮ್ಮ ಬದುಕಿಗೆ ದಾರಿ ತೋರುವ ದೀಪವಾಗುತ್ತವೆ ಎನ್ನುವುದನ್ನು ಡಿ.ವಿ.ಜಿ. ಯವರ ಈ ಕಗ್ಗದ ಸಾಲುಗಳು ಮನವರಿಕೆ ಮಾಡಿಸುತ್ತವೆ. ಅಲ್ಲದೇ "ಅನುಭವದ ಪರಿ ನೂರ್ವರಿಗೆ ನೂರು, ನೂರು ಪರಿ । ದಿನವೊಂದರೊಳೆ ಅದೊಬ್ಬಂಗೆ ನೂರುಪರಿ" ಎನ್ನುವ ಸಾಲುಗಳಂತೆ ಜೀವನಾನುಭವಗಳೂ ನೂರಾರು. ಜೀವನದಲ್ಲಿ ಸತ್ಯ–ಅಸತ್ಯ, ಧರ್ಮ–ಅಧರ್ಮ, ನ್ಯಾಯ–ಅನ್ಯಾಯ, ಸರಿ–ತಪ್ಪುಗಳನ್ನು ತೂಗಿಸಿ ನೋಡುವ ಸಾಮರ್ಥ್ಯವನ್ನು ಬೆಳೆಸಿ ಕೊಳ್ಳುವಲ್ಲಿ, ಬದುಕಿನ ಸಿಹಿ–ಕಹಿಗಳ ಅರಿವನ್ನು ಮೂಡಿಸುವಲ್ಲಿ ಸಹಾಯಕ್ಕೆ ಬರುವಅನುಭವಗಳು ಹಲವಾರು.

ಪುಟ್ಟ ಕಲಿತಿದ್ದ ಹಾಡಿನ ಸಾಲುಗಳು, ಅಮೆರಿಕದ ಅಧ್ಯಕ್ಷರಾಗಿದ್ದ ಅಬ್ರಹಾಂ ಲಿಂಕನ್ ಅವರು ತಮ್ಮ ಮಗನ ಶಾಲೆಯ ಶಿಕ್ಷಕನಿಗೆ ಇಂಗ್ಲೀಷಿನಲ್ಲಿ ಬರೆದ ಪತ್ರದ ಕನ್ನಡಾನುವಾದಿತ ಸಾಲುಗಳು ಎನ್ನುವ ಮಾಹಿತಿಯೊಂದಿಗೆ, ಅಬ್ರಹಾಂ ಲಿಂಕನ್ ಈ ಪತ್ರವನ್ನು ಬರೆದಿಲ್ಲ ಎಂದು 'ಅಬ್ರಹಾಂ ಲಿಂಕನ್ ಅಸೋಸಿಯೇಶನ್' ಪ್ರಕಟಿಸಿದ 'ಫಾರ್ ದ ಪೀಪಲ್' ಎನ್ನುವ ನ್ಯೂಸ್ ಲೆಟರಿನಲ್ಲಿದ್ದ ಮಾಹಿತಿಯನ್ನು ನಾನು ಗೂಗಲಿನಿಂದಲೇ ಪಡೆದಿದ್ದೆ. ಯಾರ ಲೇಖನಿಯಿಂದ ಮೂಡಿದ ಪದಗಳಿವು ಎನ್ನುವುದಕ್ಕಿಂತ, ಬಹಳ ಅರ್ಥಗರ್ಭಿತವಾಗಿದ್ದ ಪ್ರತಿಸಾಲುಗಳು ನಾನೂ ಆ ಹಾಡನ್ನು ಹಾಡಿಕೊಳ್ಳುವಂತೆ ಮಾಡಿದ್ದವು. ಮತ್ತೆ, ಮತ್ತೆ ಹಾಡಿಕೊಂಡತೆಲ್ಲ, ಜೀವನದ ಅನುಭವಗಳಿಂದ ಬರೆದ ಸಾಲುಗಳಿವು, ಅವುಗಳನ್ನು ಅರ್ಥ ಮಾಡಿಕೊಳ್ಳುವುದು ಪುಟ್ಟ ಮಕ್ಕಳಿಗಷ್ಟೇ ಅಲ್ಲ

ಬಗೆಬಗೆಯಾದರು ದೇಹದ ಬಣ್ಣ ಎಲ್ಲರ ನಗೆಯೂ ಒಂದೇ ಅಣ್ಣ
• **ದಿನಕರ ದೇಸಾಯಿ**



ದೊಡ್ಡವರಿಗೂ ಕಷ್ಟಕರವೆನಿಸಿತ್ತು. ಅಲ್ಲಿನ ಪದಗಳನ್ನು ಸುಲಭವಾಗಿ ಓದಿಕೊಂಡು, ಇಂಪಾಗಿ ಹಾಡಿಕೊಂಡು ಹೋಗಬಹುದು. ಆದರೆ ಅವುಗಳನ್ನು ಅಂತರಾಳಕ್ಕೆ ಇಳಿಸಿಕೊಂಡು, ನಮ್ಮ ಅನುಭವಗಳಿಗೆ ಒರೆಹಚ್ಚಿ ನೋಡಿದಾಗಲೇ ತಿಳಿವು ಮೂಡುವುದು ಎಂದು ಅನಿಸಿತ್ತು. ಈಗೀಗ ಅಂತರ್ಜಾಲದಲ್ಲಿ ಅದೆಷ್ಟೋ, ಲೆಕ್ಕವಿಡಲಿಕ್ಕಾಗದಷ್ಟು ಮಾಹಿತಿ ದೊರೆಯುತ್ತಿದೆ. ಹಾಗೆ ಪಡೆದ ಒಳ್ಳೆಯ, ಉತ್ಕೃಷ್ಟವಾದ ಮಾಹಿತಿಗಳನ್ನು ಮನನ ಮಾಡಿಕೊಳ್ಳುವ ಪ್ರಯತ್ನ ಪಡದೇ, ಅವುಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ತೇಲಿ ಬಿಡುವ ರೂಢಿಯನ್ನೇ ಜ್ಞಾನವೆಂದುಕೊಂಡವರ




ಸಂಖ್ಯೆ ಹೆಚ್ಚಾಗಿದೆ. ಇಂತಹ ಗೂಗಲ್ ಜ್ಞಾನಿಗಳ ಮತ್ತು ಅನುಭವ ಜ್ಞಾನಿಗಳ ನಡುವೆ ಮಾತಿನ ಘರ್ಷಣೆ ಕಂಡಾಗಲೆಲ್ಲ, "ಅರೆಕೊಡದ ಬುಡುಬುಡಿಕೆ, ಅಲ್ಪತೆಯ ಮೆರವಣಿಗೆ, ತಥ್ಯವಿಲ್ಲದ ಹೊಟ್ಟು ತೂರುತಿಹರು" ಎನ್ನುವ ಕವಿಯ ಮಾತುಗಳು ನೆನಪಿಗೆ ಬರುತ್ತವೆ. ನಾವು ಪಡೆಯುವ ಯಾವುದೇ ಮಾಹಿತಿಯನ್ನು ಜ್ಞಾನವೆಂದುಕೊಂಡರೆ, "ಜೀವನಾನುಭವವೆಂಬ ಹಾಲಿನಲ್ಲಿ ವಿಚಾರಗಳ ಮಂಥನವಾದಾಗಲೇ, ಜ್ಞಾನವೆಂಬ ಬೆಣ್ಣೆ ಉತ್ಪತ್ತಿಯಾಗುತ್ತದೆ"ಎನ್ನುವ ಹಿರಿಯರ ಮಾರ್ಗದರ್ಶನದಪಾಡೇನು?

ಪುಟ್ಟ ಹಾಡುತ್ತಿದ್ದ "ಜಗವೆಲ್ಲ ಒಂದಾಗಿ ಜರಿದರೂ ಸರಿಯೇ, ನನ್ನನ್ನೇ ನಾ ನಂಬುವ ಬಗೆ ನೀ ಕಲಿಸು" ಎನ್ನುವ ಸಾಲನ್ನು ಹಾಡಿಕೊಂಡು, ಬದುಕಿನ ಪಯಣದಲ್ಲಿ ನಮಗಾದ ಅನುಭವವನ್ನು ಇಲ್ಲಿ ಹೋಲಿಸಿ ನೋಡಿದಾಗ, ಇಂತಹ ಸಂದರ್ಭಗಳಲ್ಲಿ ನಮ್ಮ ಅಂತರಾತ್ಮವೇ ಗುರುವಾಗಿ ದಾರಿ ತೋರಿಸುತ್ತದೆ ಎನಿಸುವುದಿಲ್ಲವೇ? "ನೀವು ನಿಮ್ಮೊಳಗಿನಿಂದಲೇ ಬೆಳೆಯಬೇಕು. ಯಾರೂ ನಿಮಗೆ ಕಲಿಸಲಾರರು, ನಿಮ್ಮಾತ್ಮವೇ ನಿಮ್ಮ ಗುರು" ಎನ್ನುವ ಸ್ವಾಮಿ ವಿವೇಕಾನಂದರ ಮಾತುಗಳನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ನಮ್ಮದಾಗಬೇಕಲ್ಲವೇ? ಬದಲಾದ ಕಾಲದಲ್ಲಿ ಬರೀ ಮಾಹಿತಿಯನ್ನಷ್ಟೇ ನೀಡುವ ಅಂತರ್ಜಾಲದ ಪುಟಗಳೇ 'ಗುರು'ವಿನಂತಾಗಿರುವುದು, ನಿಜವಾದ 'ಗುರು'ವಿನ ಬಗ್ಗೆ ಅರಿತುಕೊಳ್ಳುವ ಅರಿವನ್ನೂ ಕಡಿಮೆಯಾಗಿಸಿವೆ. ಹಿರಿಯರು, ಅನುಭವಿಗಳು ಏನೇ ಹೇಳ ಹೊರಟರೂ ಅದನ್ನು ಒಪ್ಪಿಕೊಳ್ಳದೇ ಅಂತರ್ಜಾಲವನ್ನು ಜಾಲಾಡುವವರಲ್ಲಿ ಒಬ್ಬನಾಗಿ, ಕಂಪ್ಯೂಟರಿನ ಮುಂದೆ ಕುಳಿತು ಮಾಹಿತಿ ಕಲೆಹಾಕುವ ಪುಟ್ಟನಿಗೆ ಈ ಅಮ್ಮ ಕೂಗಿ ಹೇಳಿದಳು, "ಗುರು ಎಂದರೆ ಗೂಗಲ್ ಅಲ್ಲ ಕಂದ"!

> ಸುತ್ತಲು ಕವಿಯುವ ಕತ್ತಲೆಗೆ ಪ್ರೀತಿಯ ಹಣತೆಯ ಹಚ್ಚೋಣ
> • ಜಿ. ಎಸ್. ಶಿವರುದ್ರಪ್ಪ.

# ಹೆಜ್ಜೆ ಗುರುತು

ದಾಶರಥಿ ಭಟ್ಟ



ಊರು ಬಿಟ್ಟು ನಾಲ್ಕು ದಶಕಗಳೇ ಕಳೆದು ಹೋಗಿದ್ದರೂ ಊರಿನ ಮೇಲಿನ ಮೋಹ ಬಿಟ್ಟಿಲ್ಲ. ಮೋಹವೆಂದರೇನೂ ಅಲ್ಲಿ ಹೋಗಿ ಇರುತ್ತೇನೆಂದಲ್ಲ. ಆದರೆ ನಾಲ್ಕೈದು ಬಾರಿಯಾದರೂ ಊರನ್ನೋ, ಊರಿನಲ್ಲಿ ಜೊತೆಗಿದ್ದ ಜನಗಳನ್ನೋ, ಈಗ ಇಲ್ಲವಾಗಿರುವ ಅಜ್ಜಿಯರನ್ನೋ ನೆನೆಸಿಕೊಳ್ಳದ ದಿನಗಳೇ ಇಲ್ಲ. ಹುಟ್ಟಿದೂರಿನ ಮಣ್ಣು ಶರೀರಕ್ಕೆ ಅಂಟಿಕೊಂಡಿರದಿದ್ದರೂ, ಮನಸ್ಸಿಗಂತೂ ಬಲವಾಗಿ ಅಂಟಿಕೊಂಡುಬಿಟ್ಟಿದೆ. ಅದಕ್ಕಾಗೇ ಉದಯ ಕನ್ನಡ ವಾರ್ತೆಗಳಲ್ಲೋ, ಪಬ್ಲಿಕ್ ಟಿವಿಯಲ್ಲೋ ಬಯಲು ಸೀಮೆಯ ಯಾವುದಾದರೂ ಕುಗ್ರಾಮ ಕಂಡಾಗ ಮನಸ್ಸು ಮಾರ್ದವವಾಗಿ ಆತ್ಮೀಯತೆಯ ಭಾವ ಮೂಡುತ್ತದೆ.

ನನಗೆ ಊರಿಗೆ ಹೋಗಲು ಯಾವುದೇ ರೀತಿಯ ಆಕರ್ಷಣೆಗಳೋ, ತೀವ್ರ ಸಂಬಂಧಗಳೋ ಇಲ್ಲ. ನಮಗಿದ್ದ ಜಮೀನಿನ ತುಂಡುಗಳನ್ನೂ, ಮಾವಿನ ತೋಟವನ್ನೂ, ಹುಣಿಸೆ ಮರಗಳನ್ನೂ ಅಪ್ಪ ಮಾರಿ ಇಪ್ಪತ್ತು ವರ್ಷಗಳೇ ಆಗಿಹೋಗಿವೆ. ಉಳಿದ ಪೂರ್ವಿಕರ ಜಮೀನುಗಳಲ್ಲಿ ಮುಳ್ಳು ಕಂಟಿಯ ಜಿಗ್ಗು ಬೆಳೆದು, ಅವುಗಳೊಳಗೆ ಕಾಲಿಡುವುದೇ ದುಸ್ಸಾಧ್ಯವಾಗಿದೆ. ಮೇಲಾಗಿ ಊರಿಗೆ ಹೋದಾಗ ಜಮೀನು ಜಟರೆ ಹುಡುಕಿಕೊಂಡು ಹೋಗಲು ಸಮಯವಾದರೂ ಎಲ್ಲಿರುತ್ತದೆ? ಆದರೂ ಊರಿಗೆ ಹೋಗಬೇಕೆಂದು ಏಕೆ ತವಕ ಪಡುತ್ತೇನೆಂದು ಯಾರಾದರೂ ಕೇಳಿದರೆ ನನ್ನ ಬಳಿ ಯಾವ ಉತ್ತರವೂ ಇಲ್ಲ. ಮನಸ್ಸಿಗೆ ದುಗುಡವಾದಾಗಲೆಲ್ಲ , ಎಲ್ಲಾ ಬಿಟ್ಟು ನಮ್ಮೂರಿಗೆ ಹೋಗಿ ಆರಾಮವಾಗಿ ಇದ್ದು ಬಿಡಬೇಕು ಎಂದು ಕೊಳ್ಳುವ ಮಾತಿನಲ್ಲಿ ಎಷ್ಟು ಹುರುಳಿರುತ್ತದೋ, ಅಷ್ಟೇ ನನ್ನ ಉತ್ತರಕ್ಕೂ ಇರುತ್ತದೆ ಎಂದು ನನಗೆ ಗೊತ್ತು.

ಹಾಗೆ ನೋಡಿದರೆ ನಾನು ಬೆಳೆದ ಮತ್ತು ಬಿಟ್ಟು ಬಂದ ಊರೇ ಅಲ್ಲಿಲ್ಲ. ನನ್ನ ನೆನಪಿನಲ್ಲಿರುವ ಊರಿನ ಮಟ್ಟಿಗೆ ಹೇಳುವುದಾದರೆ ನಾನು ಕಾಲದ ಯಾವುದೋ ಒಂದು ಘಟ್ಟದಲ್ಲಿ ಘನೀಭೂತಗೊಂಡಿದ್ದೇನೆ. ನಮ್ಮೂರು ಭೂಗೋಳದ ಅವೇ ಅಕ್ಷಾಂಶ ರೇಖಾಂಶಗಳ ಮೇಲಿದೆ. ಅವೇ ರಸ್ತೆಗಳು ಊರೊಳಗೆ ಸುತ್ತಿ ಹೋಗಿವೆ. ರಸ್ತೆಯ ಮೇಲಿನ ಕಸ ಹೆಚ್ಚಾಗಿದೆ. ಊರಿಗೆ ಕೆಲವು ಹೊಸ ಮನೆಗಳು ಸೇರಿಕೊಂಡಿವೆ. ನಾನಿದ್ದಾಗ ಜನಗಳಿಂದ ನಳನಳಿಸುತ್ತಿದ್ದ ಮನೆಗಳು ಭಣಗುಟ್ಟುತ್ತಿವೆ. ಭಣಗುಟ್ಟುತ್ತಿದ್ದ ಮನೆಗಳು ಹೊಸ ರೂಪ ಪಡೆದು, ಹೊಸ ಜನಗಳಿಂದ ತುಂಬಿವೆ. ಪ್ರಪಂಚದ ಯಾವುದೇ ಮೂಲೆಯಲ್ಲಿ ಆಗುವ ಸ್ಥಿತ್ಯಂತರಗಳು ಅಲ್ಲಿಯೂ ಆಗಿವೆ.

ಪುರುಸೊತ್ತಾದಾಗ ತಿಂಗಳಿಗೆ ಒಂದೋ, ಎರಡೋ ಸಲ ಊರಿನಲ್ಲಿರುವ ಚಿಕ್ಕಪ್ಪನಿಗೆ ಫೋನ್ ಮಾಡುತ್ತಿರುತ್ತೇನೆ. ನಾನು ಫೋನ್ ಮಾಡಿದಾಗಲೆಲ್ಲ ಏನಾದರೂ ಸೆನ್ಸೇಷನಲ್ ಸುದ್ದಿ ಹೇಳಲೇಬೇಕೆಂದು ನಿರ್ಧರಿಸುತ್ತಿರುತ್ತಾನೋ ಎನ್ನುವಂತೆ, ನಮ್ಮ ಚಿಕ್ಕಪ್ಪ ಊರಿನಲ್ಲಿ ಮತ್ತು ಊರ ಸುತ್ತ–ಮುತ್ತ ಯಾರ್ಯಾರು ಇತ್ತೀಚೆಗೆ ಸತ್ತರು ಎನ್ನುವ ಯಾದಿಯನ್ನೇ ನನಗೆ ಒಪ್ಪಿಸುತ್ತಾರೆ. ಯಾರೋ ಸತ್ತ ಸುದ್ದಿಗಿಂತ ಸೆನ್ಸೇಷನಲ್ ಯಾವುದಿದ್ದೀತು ಹೇಳಿ? ಹೀಗೆ ಒಮ್ಮೆ ಊರಿಗೆ ಫೋನ್ ಮಾಡಿದ್ದಾಗ ಊರ ಮುಂದಿನ ಬಸವಣ್ಣನ ಕಲ್ಲಿನ ಮೂರ್ತಿಯನ್ನು ಯಾರೋ ಕದ್ದುಕೊಂಡು ಹೋಗಿದ್ದಾರೆಂಬ ಸುದ್ದಿ ಹೇಳಿದರು. ಈ ಬಸವಣ್ಣ ಭಾಗಶಃ ನಮ್ಮೂರಿನ ಎಲ್ಲ ವಯಸ್ಸಿನವರ ಅವಿಭಾಜ್ಯ ಅಂಗ. ಊರ ಮುಂದಿನ ಬಯಲಲ್ಲಿ ರಸ್ತೆಗಳು ಬಂದು ಕೂಡುವ ಜಾಗದಲ್ಲಿ ಪುಟ್ಟ ಪುಟ್ಟ ಕಲ್ಲುಗಳನ್ನು ನಮ್ಮಲ್ಲಿನ ಕರ್ಬ್‌ನಂತೆ ಹೂತು ಒಂದು ವೃತ್ತ ಮಾಡಿದ್ದಾರೆ. ವೃತ್ತದ ಮಧ್ಯೆ ನಾಲ್ಕಡಿ ಎತ್ತರದ ವೃತ್ತಾಕಾರದ ಕಟ್ಟೆ ಕಟ್ಟಿ, ಅದರ ಮೇಲೆ ಬಸವಣ್ಣನ ಮೂರ್ತಿಯಿದೆ. ಈ ಬಸವನಿಗೆ ನೆರಳು ಕೊಡಲು ಸುಣ್ಣಕತ್ತಿ ಹೂವಿನ ದೊಡ್ಡ ಮರವಿದೆ. ಮರದ ಕೆಳಗೆ ಒಂದೆರಡು ಕಲ್ಲು ಬೆಂಚುಗಳನ್ನು ಹಾಕಿದ್ದಾರೆ. ಊರಿನೊಳಕ್ಕೆ ಬರುವ ಮೂರೋ ನಾಲ್ಕೋ ಬಸ್ಸುಗಳು ಈಗ ಇಲ್ಲೇ ಬಂದು ನಿಲ್ಲುತ್ತವೆ. ಬರುವ ಬಸ್ಸುಗಳಿಗೆ ಕಾಯುತ್ತಾ ಜನ ಈ ಕಲ್ಲು ಬೆಂಚುಗಳ ಮೇಲೋ, ಬಸವಣ್ಣನ ವೃತ್ತದ ಕರ್ಬ್ ಮೇಲೋ ಕುಳಿತಿರುತ್ತಾರೆ.

ನಾವು ಊರಲ್ಲಿದ್ದ ಕಾಲಕ್ಕೆ ಯಾರೋ ಊರಿಗೆ ಬಂದಿದ್ದ ಅನುಕೂಲಸ್ಥರು ಬಸವಣ್ಣನ ಪಕ್ಕ ಒಂದು ತಗಡಿನ ಟ್ಯಾಂಕನ್ನು ಮಾಡಿಸಿ, ಚೈನಿಗೆ ಒಂದು ಲೋಟ ಕಟ್ಟಿ, ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದರು. ಅಲ್ಲಿ ಹಾದುಹೋಗುವ ದಾರಿಹೋಕರು ನೀರು ಕುಡಿದು ಸ್ವಲ್ಪ ಸುಧಾರಿಸಿಕೊಂಡು ಹೋಗುತ್ತಿದ್ದರು. ಅದಲ್ಲದೇ ಹಳ್ಳಿಯ ಯಾರಾದರೂ ರೈತ ತಾನು ಬೆಳೆದ ಪಪಾಯವನ್ನೋ, ಕಲ್ಲಂಗಡಿ ಹಣ್ಣನ್ನೋ, ಏನೂ ಇಲ್ಲದಿದ್ದರೆ ಸೌತೇ ಕಾಯಿಗಳನ್ನೋ ಹಚ್ಚಿ ಮಾರಲು ಅಲ್ಲಿ ಇಟ್ಟುಕೊಂಡಿರುತ್ತಿದ್ದ. ಹತ್ತು ಪೈಸೆಗೆ ಒಂದು ದೊಡ್ಡ ಹಣ್ಣಿನ ಹೋಳು, ಐದು ಪೈಸೆಗೆ ಅದರ ಅರ್ಧ ಕೊಡುತ್ತಿದ್ದ. ನಾನು ಅವನ ಅಂಗಡಿಯ ಹತ್ತಿರ ಹೋಗಿ, ಅವನು ಪಪಾಯಿಯ ಸಿಪ್ಪೆ ಹೆರೆಯುವುದನ್ನೋ, ಹಣ್ಣಿನ ಒಂದೇ ಅಳತೆಯ ಸಮನಾದ ಹೋಳುಗಳನ್ನು ಮಾಡುವುದನ್ನೋ ನೋಡುತ್ತಾ ನಿಂತಿರುತ್ತಿದ್ದೆ. ಮಕ್ಕಳ ಕೈಗೆ ಕಾಸು ಕೊಡುವುದೂ, ಹೊರಗಿನ ಪದಾರ್ಥಗಳನ್ನು ಮಕ್ಕಳು ಕೊಂಡು ತಿನ್ನುವುದೂ ನಿಷಿದ್ಧವಾಗಿದ್ದ ನಮ್ಮ ಮನೆಯಲ್ಲಿ–



ಎಂದಾದರೊಂದು ದಿನ ಅವನಿಂದ ಒಂದು ತುಂಡು ಹಣ್ಣು ಕೊಂಡು ತಿನ್ನಬೇಕೆಂಬ ಆಸೆ ಕೈಗೊಡಲೇ ಇಲ್ಲ. ಈಗಲೂ ಎಲ್ಲಾದರೂ ಹಚ್ಚಿಟ್ಟ ಕಲ್ಲಂಗಡಿ ಹಣ್ಣು ನೋಡಿದರೆ ಆ ಅನಾಮಿಕ ಹಳ್ಳಿಗನ ಮುಂದೆ ಕೊಯ್ದು ಇಟ್ಟಿರುತ್ತಿದ್ದ ಹಣ್ಣಿನ ನೆನಪೇ ಬರುತ್ತದೆ. ಊರಲ್ಲಿದ್ದಷ್ಟು ದಿನ ಈ ಬಸವಣ್ಣ ನಮ್ಮಗಳ ಪ್ರೀತಿಯ ಸಂಗಾತಿಯೇ ಆಗಿದ್ದ. ಇವನ ಜೊತೆ ಜೋಡಿಸಿದ ಮತ್ತೊಂದು ನೆನಪು– ರಾತ್ರಿ ಊಟವಾದ ಮೇಲೆ ಅಣ್ಣನ ಜೊತೆ ಬಸವಣ್ಣನ ಬಳಿಗೆ ಹೋಗಿ ಕಳೆಯುತ್ತಿದ್ದ ಸಮಯ. ನಾವೆಲ್ಲಾ ನಮ್ಮ ತಂದೆಯವರನ್ನು 'ಅಣ್ಣ' ಎಂದೇ ಕರೆಯುತ್ತಿದ್ದೆವು. ಅಣ್ಣ ಸಂಜೆ ಕೆಲಸದಿಂದ ಬೇಗ ಬಂದರೆ, ಊಟ ಮಾಡಿದ ನಂತರ, ಮನೆಯಲ್ಲಿನ ಪುಟ್ಟ ಕೂಸನ್ನು ಎತ್ತಿಕೊಂಡು, ನಮ್ಮಗಳನ್ನೂ ಕರೆದುಕೊಂಡು ಬಸವನ ಬಳಿಗೆ ಹೋಗುತ್ತಿದ್ದರು. ಬೇಸಿಗೆಯ ಬೇಗೆಯ ಸಂಜೆಗಳಲ್ಲಂತೂ ಬಸವಣ್ಣನ ಹತ್ತಿರ ತುಂಬಾ ಆರಾಮವಾಗಿರುತ್ತಿತ್ತು. ಬಸವನ ಸುತ್ತಲಿನ ವಿಶಾಲವಾದ ಬಯಲು, ಹತ್ತಿರದ ಕೆರೆ ಕಟ್ಟೆಯ ಮೇಲಿನ ದೊಡ್ಡ ಅರಳೀ ಮರಗಳಿಂದ ಆಗೀಗ ಬೀಸುವ ಗಾಳಿ, ಚಂದ್ರನ ಬೆಳಕು, ಕೋಟಿ ಕೋಟಿ ಮೈಲು ದೂರದಲ್ಲಿ ಮಿನುಗುವ ನಕ್ಷತ್ರಗಳು, ಊರ ಯಾವುದೋ ಮೂಲೆಯಲ್ಲಿ ಬೊಗಳುತ್ತಿರುವ ನಾಯಿಗಳು– ಒಂದು ಅನೂಹ್ಯ ಸನ್ನಿವೇಶವನ್ನು ಸೃಷ್ಟಿಸಿರುತ್ತಿತ್ತು. ಅಪ್ಪ ನನ್ನನ್ನು ಎತ್ತಿ ಬಸವಣ್ಣನ ಬೆನ್ನ ಮೇಲೆ ಕೂಡಿಸುತ್ತಿದ್ದರು. ಬಸವಣ್ಣನ ಕೋಡುಗಳನ್ನು ಹಿಡಿದು ಭದ್ರವಾಗಿ ಕೂತು ಅಪ್ಪ ತೋರಿಸುತ್ತಿದ್ದ ಸಪ್ತರ್ಷಿ ಮಂಡಲ, ಧೃವ ನಕ್ಷತ್ರ ನೋಡಲು ತಲೆಯೆತ್ತಲೂ ಹೆದರಿಕೆಯಾಗುತ್ತಿತ್ತು. ಇನ್ನೂ ಸ್ವಲ್ಪ ಹೊತ್ತು ಅಲ್ಲೇ ಕೂತಿರೋಣ ಎಂದುಕೊಂಡರೆ, ಕೂಸು ಅಳುತ್ತಿರುತ್ತಿತ್ತು. ಸರಿ ಮತ್ತೆ ಮರುದಿನ ರಾತ್ರಿಯವರೆಗೂ ಕಾಯಬೇಕು. ಹಗಲಲ್ಲಿ ನೋಡಿದರೆ ಇಲ್ಲಿ ಬರೀ ಜನ ತುಂಬಿರುತ್ತಾರೆ. ಬೇಗ ದೊಡ್ಡವನಾದರೆ, ಬಸವಣ್ಣನ ಬಳಿ ಬಂದು, ಬೇಕಾದಷ್ಟು ಹೊತ್ತು ಕೂತಿರಬೇಕು ಎಂದುಕೊಳ್ಳುತ್ತಿದ್ದೆ.

ಒಂದು ದಿನ ನಾವೆಲ್ಲಾ ಗುಡಿಯ ಪ್ರಾಕಾರದಲ್ಲಿ ಆಡುತ್ತಿದ್ದಾಗ, ಬಸವಣ್ಣನ ಹತ್ತಿರ ಯಾವುದೋ ಕಾರು ನಿಂತಿದೆಯೆಂದು ಅಚ್ಯುತ ಓಡಿ ಬಂದು ಹೇಳಿದ. ಆಟ ಬಿಟ್ಟ ಎಲ್ಲಾ ಅಲ್ಲಿಗೆ ಓಡಿದ್ದೆವು. ಅಬ್ಬ ಎಷ್ಟು ದೊಡ್ಡ ಅಂಬ್ಯಾಸಿಡರ್ ಕಾರು. ಅದರ ಬಿಳಿ ಬಣ್ಣ, ಗಾಜಿನ ಮೂಲಕ ಕಾಣುತ್ತಿದ್ದ ಮೆತ್ತನೆ ಸೀಟುಗಳು, ಸ್ಟೇರಿಂಗ್ ವೀಲ್, ಸ್ಪೀಡಾಮೀಟರ್– ಎಂತಹ ಸಮ್ಮೋಹಕ ಆಕರ್ಷಣೆಯಿಂದ ನಮ್ಮಗಳನ್ನು ಸೆಳೆದು, ಕಾರಿನ ಸುತ್ತಲಿನ ಪರಿಧಿಯಲ್ಲಿ ಬಂಧಿಸಿಬಿಟ್ಟಿತ್ತು. ಕಾರಿನಲ್ಲಿ ಯಜಮಾನನಿಗೆ ಕಾಯುತ್ತಾ ಕುಳಿತಿದ್ದ ಡ್ರೈವರ್, ಮಹಾರಾಜನ ಪೋಸು ಕೊಡುತ್ತಾ ನಮ್ಮಗಳನ್ನು ಕ್ಷುಲ್ಲಕ ಪ್ರಾಣಿಗಳಂತೆ ನೋಡುತ್ತಿದ್ದ. ಈ ಕಾರಿದ್ದುಬಿಟ್ಟರೆ ನಮ್ಮ ಹೊಲಕ್ಕೆ ಹೋಗಲು ಮೂರು ನಿಮಿಷ ಸಾಕು. ಆದರೆ ಕಾರಿದ್ದವರು ಯಾರು ಹೊಲಗಳಿಗೆ ಹೋಗುತ್ತಾರೆ. ಅವರೆಲ್ಲಾ ದುಡ್ಡಿರೋ ಸಾವುಕಾರರು. ದುಡ್ಡಿಲ್ಲದ ನಮ್ಮಂಥವರು ಹೊಲಗದ್ದೆಗಳಲ್ಲಿ ಕೆಲಸ ಮಾಡಬೇಕು. ಅವತ್ತು ಕಾರು ಅಲ್ಲಿಂದ ಹೊರಡುವವರೆಗೂ, ಬಸವಣ್ಣನ ಹತ್ತಿರವೇ ನಿಂತಿದ್ದು, ಅದು ಹೊರಟ ಮೇಲೆ ಬಸ್ ಆಟ ಆಡುವ ಯೋಚನೆ ಮಾಡಿದ್ದೆವು. ನಾನು, ಅಂಬರೀಷ, ರಮೇಶ ಕೆರೆ ಅಂಗಳಕ್ಕೆ ಹೋಗಿ, ತೀಳುಬಳ್ಳಿ ಕಿತ್ತು, ಒಂದಕ್ಕೊಂದು ಗಂಟು ಹಾಕಿ ಲೂಪ್ ಮಾಡಿ, ಬಸ್ ಮಾಡಿದ್ದೆವು. ಸ್ವಲ್ಪ ಸ್ವಲ್ಪ ಹೊತ್ತು ಒಬ್ಬೊಬ್ಬರು ಡ್ರೈವರ್. ಬಸವಣ್ಣನ ಹತ್ತಿರದಿಂದ ಹೊರಟು ಊರೆಲ್ಲಾ ಸುತ್ತಿ, ಮೈಯ್ಯಲ್ಲಾ ಧೂಳು ಮಾಡಿಕೊಂಡು ಮನೆ ಸೇರಿದಾಗ ಕಾರಿನ ದೆವ್ವ ಬಿಟ್ಟು, ಹೊಟ್ಟೆ ಚುರುಗುಟ್ಟುತ್ತಿತ್ತು.

ಶಾಲೆ ಮುಗಿಸಿ ಸಂಜೆ ಅಜ್ಜಿಯ ಜೊತೆ ಹೊಲಕ್ಕೆ ಹೋಗಿದ್ದಾಗ ಸಿಕ್ಕಿದ ಬುಡುಮೆ ಹಣ್ಣು ಎಷ್ಟು ಸಿಹಿಯಾಗಿರುತ್ತಿತ್ತು. ಒಂದು ದಿನ ಮಾಸಲು ಹಳದಿ ಬಣ್ಣದ ಆ ಹಣ್ಣುಗಳಲ್ಲಿ ಒಂದು ತಿಂದು, ಇನ್ನೊಂದನ್ನು ತಮ್ಮನಿಗೆ ಕೊಡಲೆಂದು ಜೇಬಲ್ಲೆ ಇಟ್ಟುಕೊಂಡಿದ್ದೆ. ಮನೆಗೆ ಬಂದು ನೋಡಿದರೆ ಇರಲೇ ಇಲ್ಲ. ಕೈ ಕಾಲು ತೊಳೆದು, ಅಜ್ಜಿ ಮುಂದೆ ಕೂತು ಕಸ್ತೂರಿ ತಿಲಕಂ ಹೇಳಿದ್ದಾಯ್ತು. ಚಿಕ್ಕಪ್ಪನಿಗೇನು, ಪಕ್ಕದ ನಾಲ್ಕು ಮನೆಗಳಿಗೂ ಕೇಳುವಂತೆ ಪಾಠ ಓದಿದ್ದಾಯ್ತು. ಅಮ್ಮ ಹಿತ್ತಲಲ್ಲಿ ಹಸಿ ಕಟ್ಟಿಗೆಯಲ್ಲಿ ಅಡುಗೆ ಮಾಡುತ್ತಿದ್ದಳು. ಮನೆಯೆಲ್ಲಾ ಹೊಗೆ. ಇದರ ಮೇಲೆ ಬೇಸಿಗೆ ಸೆಕೆಯ ಕಿರಿಕಿರಿ ಬೇರೆ. ಕತ್ತಲಾದ ಮೇಲೆ ಹೊರಗೆ ಹೋಗಲು ನಿಷೇಧ. ಕೆಲಸವಿಲ್ಲದೇ ಕೂತು ಕೂತು ಬೇಜಾರಾಗಿ, ಏನಾದರೂ ತಿನ್ನಬೇಕೆನಿಸುತ್ತಿತ್ತು. ಆ ಬುಡುಮೆ ಹಣ್ಣಿದ್ದಿದ್ದರಾದರೂ ಯಾರಿಗೂ ಕಾಣದೆ ತಿನ್ನ ಬಹುದಾಗಿತ್ತು ಎಂದುಕೊಂಡರೆ ಅದೂ ಕಳೆದು ಹೋಗಿತ್ತು.



ಅವೆಲ್ಲಾ ಈಗ ಬರೀ ನೆನಪಿನ ಹಳವಂಡಗಳಷ್ಟೇ! ಈ ಸಲ ಇಂಡಿಯಾಗೆ ಹೋದಾಗ ಬೆಂಗಳೂರು ತಲುಪಿದ್ದು, ಅಲ್ಲಿಂದ ಮೈಸೂರಿಗೆ ಹೋಗಿದ್ದು, ಅಲ್ಲಿನ ಓಡಾಟಗಳು, ಭೇಟಿ ಕೊಟ್ಟ ಬಂಧು ಮಿತ್ರರ ಮನೆಗಳು ಮತ್ತು ಹಾಜರಿ ಕೊಟ್ಟ ಸಮಾರಂಭಗಳ ಬಗ್ಗೆ ಬರೆದರೆ ಒಂದು ದೊಡ್ಡ ಕಂತೆ ಪುರಾಣವಾಗುತ್ತದೆ. ಊರಿಗೆ ಹೋಗಬೇಕೆನ್ನುವುದು ತೀವ್ರವಾಗಿ ಕಾಡುತ್ತಿದ್ದುದರಿಂದ, ತಮ್ಮನನ್ನು ಪುಸಲಾಯಿಸಿ, ಒಂದು ಕಾರು ಮಾಡಿಕೊಂಡು ಊರಿಗೆ ಹೊರಟೆ. ಬೆಳಿಗ್ಗೆ ಏಳಕ್ಕೆ ಬಿಡೋಣವೆಂದುಕೊಂಡು, ಕೊನೆಗೆ ಒಂಬತ್ತೂವರೆಗೆ ಬೆಂಗಳೂರು ಬಿಟ್ಟು, ಹನ್ನೆರಡು ಗಂಟೆಗೆ ಊರು ಸೇರಿದೆವು. ಮನೆಗೆ ಹೋಗುವ ದಾರಿಯಲ್ಲಿ. ಕಾರಿನ ಕಿಟಕಿಯಿಂದಲೇ ಬಸವಣ್ಣನನ್ನು ನೋಡಿದೆ. ಕದ್ದು ಹೋದ ಮೂರ್ತಿಯ ಜಾಗದಲ್ಲಿ, ಹೊಸ ಬಸವಣ್ಣನ ಮೂರ್ತಿಇಟ್ಟಿದ್ದಾರೆ. ಬಸವಣ್ಣನ ಪೀಠಕ್ಕೆ ಕೈಗೆ ಸಿಕ್ಕ ಬಣ್ಣಗಳನ್ನೆಲ್ಲಾ ಬಳಿದಿದ್ದಾರೆ. ಸುತ್ತ ಮುತ್ತಲೂ ನಿಂತೋ, ಹಾಸಿರುವ ಚಪ್ಪಡಿ ಕಲ್ಲುಗಳ ಮೇಲೆ ಕುಳಿತೋ ಕಾಲ ಕಳೆಯುತ್ತಿರುವ ಜನಗಳ ಸೆಕೆಂಡ್ ಹ್ಯಾಂಡ್ ಧೂಮವೇ ಈಗ ಬಸವಣ್ಣನಿಗೆ ಧೂಪ.

ಊರಲ್ಲಿ ಇದ್ದದ್ದು ಎರಡೇ ಗಂಟೆ. ಕಾರಿನಿಂದ ಇಳಿದು ಮನೆಯೊಳಗೆ ಹೋಗುತ್ತಿರುವಾಗಲೇ, ಮೂಲೆಗಳಲ್ಲಿ ಇದ್ದ ಕಸ–ಕಡ್ಡಿ ಕಣ್ಣಿಗೆ ಬಿದ್ದು ಕಸಿವಿಸಿ. ಇಲ್ಲಿ ಊಟ ಮಾಡಲೇ ಬೇಕಾ? ನೀರೇನೋ ತಂದಿದ್ದೇನೆ. ಊಟಕ್ಕೆ ಇಟ್ಟ ತಟ್ಟೆಯನ್ನು ಯಾವ ನೀರಲ್ಲಿ ತೊಳೆದಿದ್ದಾರೆ? ಅಡಿಗೆ ಮನೆಯ ಈ ಕತ್ತಲಲ್ಲಿ ಜಿರಳೆಗಳು ಎಲ್ಲೆಲ್ಲಿ ಓಡಾಡಿರಬಹುದು. ಅಡಿಗೆ ಸರಿಯಾಗಿ ಮುಚ್ಚಿಟ್ಟಿದ್ದರೇ? ಇಲ್ಲಿ ಊಟ ಮಾಡಿ, ವಾಪಸ್ ಹೋಗುವಾಗ ಬೆಂಗಳೂರು ಸೇರುವ ಮುಂಚೆಯೇ ಏನಾದರೂ ಆದರೆ ಮಾಡುವುದೇನು? ಊಟವಂತೂ ಮಾಡಿ, ಮನೆಯ ಮುಂದೆಯೇ ನಿಂತು ದೇವರ ಗುಡಿಯ ಕಡೆ ನೋಡಿ ಕೈ ಜೋಡಿಸಿದೆ. ಇದೇ ಗುಡಿಯ ಪೂಜೆ ಚೆರಪಿಗೆ ಎರಡೆರಡು ಸಲ ಕೈಯೊಡ್ಡುತ್ತಿದ್ದುದು ನೆನಪಿಗೆ ಬಂತು. ನವರಾತ್ರಿ ದಿನಗಳಲ್ಲಿ ಸಂಜೆಯಿಂದಲೇ ಗುಡಿಯ ಸುತ್ತ ಠಳಾಯಿಸುತ್ತಿದ್ದೆವು. ರಥೋತ್ಸವದ ಸಮಯದಲ್ಲಿ ಗುಡಿಯೇ ನಮ್ಮಗಳ ಮನೆಯಾಗಿಬಿಡುತ್ತಿತ್ತು. ಊರಿಗೆ ಹತ್ತು ಮೈಲು ದೂರದ ಊರಿನಲ್ಲಿದ್ದ ದೊಡ್ಡಪ್ಪನ ಮನೆಗೆ ಹೋಗಿ ಅವರನ್ನೂ ನೋಡಿಕೊಂಡು ಬರುವುದೆಂದುಕೊಂಡು ಹೊರಟೆವು. ಚಿಕ್ಕಮ್ಮನೂ ನಮ್ಮ ಜೊತೆ ಹೊರಟಳು. ಅಲ್ಲಿ ಹೋಗಿ ಸೇರುವಷ್ಟರಲ್ಲಿ ಸಂಜೆ 4:00 ಗಂಟೆ. ಮನೆಯಲ್ಲಿ ಸ್ವಲ್ಪ ಹೊತ್ತು ಕೂತು, ಚಾ ಕುಡಿದು, ದೊಡ್ಡಮ್ಮ, ದೊಡ್ಡಪ್ಪರಿಗೆ ನಮಸ್ಕಾರ ಮಾಡಿ ಮತ್ತೆ ಊರು ಸೇರುವಷ್ಟರಲ್ಲಿ ಸಂಜೆ ಏಳು ಗಂಟೆ. ಇನ್ನು ನಾವು ಯಾವಾಗ ಬೆಂಗಳೂರು ಸೇರಿಕೊಳ್ಳುವುದು ಎಂಬ ಧಾವಂತದಲ್ಲಿ, ಚಿಕ್ಕಮ್ಮನನ್ನು ಬಸವಣ್ಣನ ಹತ್ತಿರವೇ ಇಳಿಸಿ, ಕಾರನ್ನು ಮೇನ್ ರೋಡ್ ಕಡೆಗೆ ತಿರುಗಿಸಿದೆವು.

ಸಂಜೆಯ ಕತ್ತಲಿನಲ್ಲಿ ಮತ್ತೊಮ್ಮೆ ಬಸವಣ್ಣನನ್ನು ನೋಡಿದೆ. ಬಾಲ್ಯದಲ್ಲಿ ಸುಮಾರು ದಿನ ನನ್ನನ್ನು ಹೊತ್ತುಕೊಂಡಿದ್ದ, ನನ್ನ ಪುಟ್ಟ ಕೈಗಳಲ್ಲಿ ತನ್ನ ಕೋಡು ಸವರಿಸಿಕೊಂಡಿದ್ದ, ಕಿವಿ ಹಿಂಡಿಸಿಕೊಂಡಿದ್ದ ಬಸವಣ್ಣ, ನಾನು ನಿಂತಿರುವ ನೆಲದ ಮೇಲೆ ಒಂದು ಕ್ಷಣ ನಿಲ್ಲಲೂ ನಿನಗೆ ಈಗ ವ್ಯವಧಾನವಿಲ್ಲವೇ ಎಂದು ಕೇಳಿದಂತೆ ಎನಿಸಿತು. ಮನಸ್ಸಿನ ತುಂಬಾ ಯಾವುದೋ ಅವ್ಯಕ್ತ ದುಗುಡ ತುಂಬಿ, ನೀರು ತುಂಬಿದ ಕಣ್ಣುಗಳು

ಮಂಜಾದವು. ಅಷ್ಟರಲ್ಲಾಗಲೇ ಕಾರು ಬಸವಣ್ಣನನ್ನು ಬಿಟ್ಟು ಕುಂಟೆಯ ಪಕ್ಕದ ರಸ್ತೆಯಲ್ಲಿ ಓಡುತ್ತಿತ್ತು. ನಾನು ಹಿಂದೆ ತಿರುಗಿ ನೋಡುತ್ತಿದ್ದಂತೆ, ಊರಿನ ಪರಿಸರ ನಿಧಾನವಾಗಿ ಮರೆಯಾಗಿ, ಕಾರು ಎಬ್ಬಿಸುತ್ತಿದ್ದ ಧೂಳಿನ ಅಲೆಗಳು ಮಾತ್ರ ಕಾಣಿಸುತ್ತಿತ್ತು. ನಕ್ಷತ್ರಗಳ ಮಿಣುಕು ಬೆಳಕಿನಲ್ಲಿ ಮಣ್ಣಿನ ರಸ್ತೆಯ ಮೇಲೆ ನನ್ನಹೆಜ್ಜೆ ಗುರುತುಗಳು ಏನಾದರೂ ಇವೆಯೇನೋ ಎಂದು ಹುಡುಕತೊಡಗಿದೆ. ಬರೀ ಕತ್ತಲೆ ಮಾತ್ರ ಬೃಹತ್ ಪೆಡಂಭೂತದಂತೆ ನಮ್ಮನ್ನು ಅಟ್ಟಿಸಿಕೊಂಡು ಬರುತ್ತಿತ್ತು.

ಪರಿಸರದಲ್ಲಿ ಎಲ್ಲಾ ಪ್ರಾಣಿಗಳಿಗೂ ಬದುಕುವ ಹಕ್ಕಿದೆ
• ಎ. ಎನ್. ಮೂರ್ತಿರಾವ್

# ಮತ್ತೆ ಬದುಕುವಂತಾದರೆ

ಅಹೀಶ್ ಭಾರದ್ವಾಜ



ಈ ಭೂಮಿಯ ಮೇಲೆ ಎಲ್ಲಾ ಜೀವಜಂತುಗಳು ತಮ್ಮ ಹುಟ್ಟಿನ ಪ್ರಾರಂಭದಿಂದಲೇ ತಮ್ಮ ಬದುಕನ್ನು ಚಾಲನೆಗೊಳಿಸುತ್ತವೆ. ಜೀವಜಂತುಗಳಲ್ಲೇ ಅತಿ ಬುದ್ಧಿವಂತನಾದ ಮಾನವನು ತನ್ನ ಜೀವಿತಾವಧಿಯಲ್ಲಿ ಬದುಕನ್ನು ಸಾರ್ಥಕಗೊಳಿಸಿಕೊಳ್ಳಲು ಬಯಸುತ್ತಾನೆ. ಆ ಸಾರ್ಥಕತೆಯನ್ನು ಹೊಂದಲು ನಾನಾ ರೀತಿಯಲ್ಲಿ ತನ್ನದೇ ಆದ ಮಾರ್ಗಗಳನ್ನು, ಚೌಕಟ್ಟುಗಳನ್ನು ಹಾಕಿಕೊಂಡು ಅವುಗಳನ್ನು ಸಾಧಿಸಲು ಪ್ರಯತ್ನಿಸುತ್ತಾನೆ. ಚಿಕ್ಕ ಮಗುವಿನಿಂದ ಹಿಡಿದು ವಯೋವೃದ್ಧರವರೆಗಿನ ಎಲ್ಲರಿಗೂ ಕ್ಷಣಕ್ಷಣಕ್ಕೂ ತಮ್ಮ ಬದುಕನ್ನು ರೂಢಿಸಿಕೊಳ್ಳುವುದೇ ಬಹು ದೊಡ್ಡ ಸವಾಲು. ಈ ಪಯಣದಲ್ಲಿ ಎಲ್ಲವೂ ಅವನ ಇಚ್ಛೆಯಂತೆ ಆಗುವುದಿಲ್ಲ, ಅವನು ಬಯಸಿದ್ದು ಸಿಗುವುದಿಲ್ಲ. ಮನುಷ್ಯನು ತಾನು ಅಂದುಕೊಂಡಂತೆ ಆಗದಿರಲು ನಾನಾ ಕಾರಣಗಳಿರಬಹುದು. ತಾನೇ ತೆಗೆದುಕೊಂಡ ನಿರ್ಣಯಗಳು, ಬೇರೆಯವರಿಂದ ಹೇರಲ್ಪಟ್ಟ ನಿರ್ಧಾರಗಳು, ಪರಿಸ್ಥಿತಿಯ ಒತ್ತಾಯದ ನಿರ್ಧಾರಗಳು, ಕಾಣದ ಕೈಯೊಂದರ ಕೃತ್ಯವೋ, ಅಂತು ಯಾವುದೋ ಕಾರಣಕ್ಕೆ ಅವನಿಗೆ ಬೇಕಾದ್ದು ಸಿಗದೆ ಪರಿತಪಿಸುವುದುಂಟು. ಹೊರಗಿನ ಪ್ರಭಾವಗಳು ಏನೇ ಇದ್ದರೂ ನಮ್ಮ ಬದುಕನ್ನು ರೂಪಿಸಿಕೊಳ್ಳುವುದು ನಾವೇ, ನಮ್ಮ ನಿರ್ಧಾರಗಳೇ. ನಾವು ತೆಗೆದುಕೊಂಡ ನಿರ್ಧಾರಗಳು ನಮ್ಮ ಬದುಕನ್ನು ನಾವು ಅಂದುಕೊಂಡ ನಿಟ್ಟಿಗೆ ಕರೆದೊಯ್ಯಬಹುದು ಅಥವ ಇನ್ನೆಲ್ಲಿಗೋ ಕರೆದೊಯ್ಯಬಹುದು. ಅದರಿಂದಾಗಿ ಅನುಭವಿಸುವ ಫಲ ನಮ್ಮ ಸ್ವಂತದ್ದೇ. ಇದರಲ್ಲಿ ಕರ್ಮ, ಹಣೆಬರಹದ ಪಾಲು ಕಡಿಮೆ. ಎಷ್ಟೋ ಸಲ ನಾವು ಅಂದುಕೊಂಡ ಹಾಗೆ ನಡೆಯದಿದ್ದಾಗ, ಅದಕ್ಕೆ ಹಣೆಬರಹದ ಪಟ್ಟಿ ಹಾಕಿ ನಮ್ಮನ್ನು ನಾವು ಸಮಾಧಾನ ಮಾಡಿಕೊಳ್ಳುತ್ತೇವೆ. ಕೂಲಂಕಷವಾಗಿ ತಾವು ತೆಗೆದುಕೊಂಡ ನಿರ್ಧಾರವನ್ನು ಅವಲೋಕನ ಮಾಡಿದಾಗ, ಈ ನಿರ್ಣಯದ ಬದಲಾಗಿ ಬೇರೆ ರೀತಿಯ ನಿರ್ಧಾರ ಮಾಡಿದ್ದರೆ ಈ ರೀತಿಯ ಪರಿಣಾಮವಾಗುತ್ತಿರಲಿಲ್ಲವೇನೋ



ಎಂದು ಹಲವು ಬಾರಿ ಯೋಚಿಸಿರುತ್ತೇವೆ. ಕೆಲವೊಮ್ಮೆ ಏನೇ ಒಳ್ಳೆಯ ನಿರ್ಧಾರವನ್ನು ತೆಗೆದುಕೊಂಡಿದ್ದರೂ ಸಹ ನಾವು ಅಂದುಕೊಂಡಂತೆ ನಡೆದಿರುವುದಿಲ್ಲ, ಅದಕ್ಕೆ ಹಣೆಬರಹದ ಪಟ್ಟಿ ಕೊಡಬಹುದೇನೋ. ಹೀಗೆ ನಾವು ತೆಗೆದುಕೊಂಡ ನಿರ್ಧಾರಗಳು ನಮಗೆ ಅನುಕೂಲಕರವಾದ ರೀತಿಯಲ್ಲಿ ಪರಿಣಾಮವನ್ನು ಕೊಡದ ಸಂದರ್ಭಗಳಲ್ಲಿ ಪಶ್ಚಾತ್ತಾಪಗೊಂಡು, ಹೀಗೆ ಮಾಡಬಾರದಿತ್ತು, ನಾನು ತಪ್ಪು ಮಾಡಿದೆ, ಬೇರೆ ರೀತಿಯಲ್ಲಿ ಮಾಡಿದ್ದರೆ ಹೀಗಾಗುತ್ತಿರಲಿಲ್ಲವೆಂದು ಕೊರಗುವುದು ಸಹಜ.

ಕಳೆದು ಹೋದ ಘಳಿಗೆ, ನಿರ್ಧಾರಗಳನ್ನು ಮತ್ತೆ ಪಡೆಯಲು ಸಾಧ್ಯವೆ? ಹಾಗಾಗಿ ಮನುಷ್ಯನು ತನ್ನ ಜೀವನದುದ್ದಕ್ಕೂ ತನ್ನ ತಪ್ಪು ನಿರ್ಧಾರಗಳನ್ನು ಮನಸ್ಸಿನಲ್ಲಿಯೇ ಇಟ್ಟುಕೊಡು ಪರಿತಪಿಸುತ್ತಾನೆ. ಕಳೆದು ಹೋದ ಘಳಿಗೆ,ನಿರ್ಧಾರಗಳನ್ನು ಮತ್ತೆ ಪಡೆಯಲು ಸಾಧ್ಯವೆ? ಹಾಗಾಗಿ ಮನುಷ್ಯನು ತನ್ನ ಜೀವನದುದ್ದಕ್ಕೂ ತನ್ನ ತಪ್ಪು ನಿರ್ಧಾರಗಳನ್ನು ಮನಸ್ಸಿನಲ್ಲಿಯೇ ಇಟ್ಟುಕೊಡು ಪರಿತಪಿಸುತ್ತಾನೆ. ಹೆತ್ತ ತಾಯಿ ತಂದೆಯನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ ಎಂಬ ಚಿಂತೆ, ಯಾವುದೋ ತಪ್ಪು ನಿರ್ಧಾರದಿಂದ ಹೆಂಡತಿಯನ್ನೋ, ಗಂಡನನ್ನೋ ದೂರ ಮಾಡಿಕೊಂಡು ಪರಿತಪಿಸುವ ಪರಿ. ಕೆಲಸದಲ್ಲೋ, ವಿದ್ಯಾಭ್ಯಾಸದಲ್ಲೋ ಆದ ಅಪಘಾತಗಳು, ಕೆಟ್ಟ ನಿರ್ಧಾರದಿಂದಾದ ಆರ್ಥಿಕ ಪರಿಸ್ಥಿತಿಯಲ್ಲಿನ ಏರು ಪೇರು, ಸಾವು ನೋವುಗಳ ಅನುಭವ. ಹೀಗೆ ಎಲ್ಲ ಮನುಷ್ಯರ ಜೀವಿತಾವಧಿಯಲ್ಲಿ ತಾವು ತೆಗೆದುಕೊಂಡ ಕೆಲವು ನಿರ್ಣಯಗಳು ಅವರ ಬದುಕಿನಲ್ಲಿ ಏರು ಪೇರುಗಳನ್ನು ಕಾಣುವಂತೆ ಮಾಡುತ್ತವೆ. ಎಷ್ಟೋ ಸಲ ತನ್ನ ತಪ್ಪಿನ ಅರಿವಾಗಿ, ತಪ್ಪನ್ನು ತಿದ್ದಲು ಪ್ರಯತ್ನಿಸಿ ಸಫಲನಾಗುವುದೂ ಸಹಜ.

ಕೆಲವೊಂದು ನಿರ್ಧಾರಗಳು ಆ ಮನುಷ್ಯ ಸಾಯುವವರೆಗೂ ಅವನ ಮನಸ್ಸಿನಲ್ಲಿ ಕಾಡುತ್ತಲೇ ಇರುತ್ತದೆ. ಅದನ್ನು ಸರಿಪಡಿಸಲು ಅವಕಾಶವನ್ನು ಕಾಯುತ್ತಲೇ ಕಣ್ಣು ಮುಚ್ಚುತ್ತಾನೆ.

ಕಣ್ಣು ಮುಚ್ಚುವವನಿಗೆ ಒಂದೇ ಆಸೆ
ಮತ್ತೆ ಬದುಕುವಂತಾದರೆ?

ನನ್ನ ಬದುಕಿನ ಕೆಲವು ಪುಟಗಳನ್ನು ಬದಲಾಯಿಸಲು ಅವಕಾಶ ಸಿಕ್ಕರೆ, ಬದಲಾಯಿಸಿಕೊಳ್ಳುವೆ.

ದಿನವೂ ಇಂತಹ ಅಸೆಯುಳ್ಳ ಸಾವಿರಾರು ಮನಗಳು ಕಣ್ಣು ಮುಚ್ಚುತ್ತಲೇ ಇವೆ.

ಚಲನಶೀಲತೆ ಜೀವಂತಿಕೆಯ ಗುಣ.
**– ದ. ರಾ. ಬೇಂದ್ರೆ**

# ಎಲ್ಲಿಂದಲೋ ಬಂದವರು

**ಕಾವ್ಯಾ ಕಡಮೆ ನಾಗರಕಟ್ಟೆ**



ಕಳೆದ ಭಾನುವಾರ ನಮ್ಮ ಮನೆಯ ಹತ್ತಿರವಿರುವ ಜಾನ್ಸನ್ ಪಾರ್ಕಿನಲ್ಲಿ ವಿಹಾರಕ್ಕೆ ಹೊರಟಾಗ ಒಂದು ವಿಚಿತ್ರ ಅನುಭವ ನನಗಾಯಿತು. ವಾರಾಂತ್ಯವಾದುದರಿಂದ ಉದ್ಯಾನವನ ಎಲ್ಲ ವಯಸ್ಸಿನ ಉತ್ಸಾಹಿಗಳಿಂದ ಗಿಜಿಗುಡುತ್ತಿತ್ತು. ಹೂವಿನಂಥ ಮಕ್ಕಳು ಬಣ್ಣ ಬಣ್ಣದ ಬಟ್ಟೆ ತೊಟ್ಟು ಜೋಕಾಲಿಯಲ್ಲಿ ಜೀಕುತ್ತಲೋ ಜಾರುಬಂಡಿಯಲ್ಲಿ ಜಾರುತ್ತಲೋ ಕುಪ್ಪಳಿಸುತ್ತಿದ್ದರು. ಯುವ ತಂದೆಯಂದಿರು ತುಸು ಮಾಸಿದ ಟೀಶರ್ಟು ತೊಟ್ಟು ಕೈಕಟ್ಟಿ ನಿಂತು ದೂರದಿಂದಲೇ ತಮ್ಮ ತಮ್ಮ ಮಕ್ಕಳ ಚಲನವಲನಗಳ ಮೇಲೆ ಒಂದು ಕಣ್ಣಿಟ್ಟೇ ಸ್ನೇಹಿತರೊಡನೆ ಹರಟುವಾಗ ಯುವ ತಾಯಂದಿರು ರ್‍ಯಾರಿಟನ್ ನದಿಯಲ್ಲಿ ತೇಲುವ ಬಾತುಕೋಳಿಗಳ ಮೌನ ಸಲ್ಲಾಪವನ್ನು ಕಣ್ತುಂಬಿಕೊಳ್ಳುತ್ತಿದ್ದರು. ಜುಲೈ–ಆಗಸ್ಟ್ ತಿಂಗಳುಗಳ ಈ ಕಾಲ ಇಲ್ಲಿ ಬೇಸಿಗೆಯಾದುದರಿಂದ ಭಾರತ ಮತ್ತು ಚೈನಾ ದೇಶಗಳಿಂದ ಮಕ್ಕಳ ಮನೆಗಳಿಗೆ ಬಂದ ತಂದೆ–ತಾಯಂದಿರು ತಮ್ಮ ತರಹವೇ ಈ ದೇಶಕ್ಕೆ ಅತಿಥಿ ವೀಸಾದಡಿಯಲ್ಲಿ ಬಂದ ಇತರರ ಹತ್ತಿರ ತುಸು ಸಂಕೋಚದಿಂದಲೇ ಶಬ್ದಕ್ಕೆ ಶಬ್ದ ಪೋಣಿಸಿ ಉಭಯ ಕುಶಲೋಪರಿ ನಡೆಸಿದ್ದರು. ನದಿ ದಂಡೆಯಲ್ಲಿ ಒಬ್ಬರಿಗೊಬ್ಬರು ಅಂಟಿಕೊಂಡು ಕುಳಿತ ಕಾಲೇಜು ಹುಡುಗ ಹುಡುಗಿಯರು ಸೂರ್ಯಾಸ್ತದ ರಂಗಿನಲ್ಲಿ ಮುತ್ತಿಡುತ್ತಿದ್ದರು. ಪಾರ್ಕಿಗೆ ಅಂಟಿಕೊಂಡೇ ಇರುವ ಪ್ರಾಣಿ ಸಂಗ್ರಹಾಲಯದಲ್ಲಿ ಬಂಧಿತರಾದ ಬೊಗಸೆ ಕಂಗಳ ಜಿಂಕೆಗಳಿಗೆ ಮಕ್ಕಳು ಗಜ್ಜರಿ ಮತ್ತು ಲೆಟ್ಯೂಸ್ ಎಲೆಗಳನ್ನು ತಿನ್ನಿಸುತ್ತ ನಡುನಡುವೆ ತಾವೂ ಒಂದೊಂದು ಗಜ್ಜರಿ ತುಂಡನ್ನು ಕಚ್ಚುತ್ತ ನಿಲ್ಲುತ್ತಿದ್ದರು.

ಇದು ಯಾವುದೇ ದೇಶದ ಯಾವುದೇ ಊರಿನಲ್ಲಿ ವಾರಾಂತ್ಯದ ತಿಳಿಸಂಜೆಯೊಂದು ತೆರೆದುಕೊಳ್ಳುವ ಬಗೆ. ಆದರೆ ಆ ದಿನ ನನ್ನ ಗಮನ ಸೆಳೆದ ಸಂಗತಿಯೆಂದರೆ ನನ್ನನ್ನೂ ಒಳಗೊಂಡು ಆ ಉದ್ಯಾನವನದಲ್ಲಿ ಸೇರಿದ ಜನರೆಲ್ಲ ಎಲ್ಲಿಂದಲೋ ಬಂದವರು. ವಿಮಾನ ಸೇವೆ ಮತ್ತು ಮಾಹಿತಿ ತಂತ್ರಜ್ಞಾನಗಳು ಇಷ್ಟು ಮುಂದುವರೆಯದಿದ್ದರೆ ನಾವ್ಯಾರೂ ಇಲ್ಲಿ ಇರುತ್ತಿರಲಿಲ್ಲವೇನೋ! ಈ ಪಾರ್ಕಿನಲ್ಲಿ ಸೇರಿದವರೆಲ್ಲರೂ ಉದ್ಯೋಗ, ಓದು, ವಿವಾಹ ಹೀಗೆ ನಾನಾ ಕಾರಣಗಳಿಂದಾಗಿ ಈ ದೇಶಕ್ಕೆ ಬಂದು ನೆಲೆನಿಂತವರು. ದೇಶ, ಧರ್ಮ, ವರ್ಣಗಳ ಹಂಗಿಲ್ಲದೇ ಇವರೆಲ್ಲ ಇಲ್ಲಿ ಸೇರಿದ್ದರು. ಜಗತ್ತಿನ ಯಾವುದೋ ಮೂಲೆಯಲ್ಲಿ ಹುಟ್ಟಿ ಬೆಳೆದು ತಮ್ಮ ಪ್ರತಿಭೆಯನ್ನೋ, ಅದೃಷ್ಟವನ್ನೋ ನೆಚ್ಚಿ ಈ ಹೊಸ ಲೋಕದಲ್ಲಿ ಬೆಳಕು ಕಾಣಲಿಚ್ಛಿಸಿದವರು. ತಮ್ಮ ಜೊತೆಗೆ ಮನೆಯವರನ್ನೂ ಕರೆ ತಂದವರು. ಇಲ್ಲೇ ಮಕ್ಕಳು ಮೊಮ್ಮಕ್ಕಳನ್ನು ಕಂಡರೂ ಈ ದೇಶದ ಸಂಸ್ಕೃತಿಗೆ ಹೊಂದಿಕೊಳ್ಳಲಾರದೇ ಕೊನೆಯ ತನಕ ಅತಿಥಿಗಳಂತೆಯೇ ನಡೆದುಕೊಳ್ಳುವರು.



ಇದು ಈ ಒಂದು ಉದ್ಯಾನವನದ ಕತೆಯಲ್ಲ. ಅಮೆರಿಕದ ಯಾವುದೇ ನಗರ ಪ್ರದೇಶದಲ್ಲೂ ಈ ವೈವಿಧ್ಯ ಸಾಮಾನ್ಯವಾಗಿರುವ ಸಂಗತಿ. ಈ ನಗರ ಪ್ರದೇಶಗಳ ಪ್ರಮುಖ ಬೀದಿಯಲ್ಲಿ ಒಮ್ಮೆ ನಡೆದು ಹೋದರೆ ಜಗತ್ತಿನ ಎಲ್ಲ ಜನಾಂಗಗಳ ಒಂದೊಂದು ಮುಖವಾದರೂ ಕಾಣಲೇ ಬೇಕು. ಅಮೆರಿಕದ 32.5 ಕೋಟಿ ಜನಸಂಖ್ಯೆಯಲ್ಲಿ 3.7 ಕೋಟಿ ಜನ ವಲಸಿಗರು. ಈ ವಲಸಿಗರಲ್ಲಿ ಕ್ರಮವಾಗಿ ಮೆಕ್ಸಿಕೋ, ಭಾರತ, ಚೈನಾ ದೇಶಗಳ ಪ್ರಜೆಗಳದ್ದೇ ಮೇಲುಗೈ. ಮುಂದಿನ ನಾಲ್ಕು ಸ್ಥಾನಗಳು ಫಿಲಿಪ್ಪೀನ್ಸ್, ಎಲ್ ಸಾಲ್ವಡಾರ್, ವಿಯಟ್ನಾಮ್ ಮತ್ತು ಕ್ಯೂಬಾ ದೇಶಗಳಿಗೆ ಸಲ್ಲುತ್ತವೆ. ಸ್ವಂತ ದೇಶದ ಯುದ್ಧ, ಹಿಂಸೆಯ ಭೀಕರತೆಗೆ ಕಂಗೆಟ್ಟು ಆಸರೆ ಪಡೆಯಲು ಬಂದವರು ಕೆಲವರಾದರೆ ಹುಟ್ಟಿದ ದೇಶಗಳಲ್ಲಿ ಅವಕಾಶ ವಂಚಿತರಾಗಿ ಉದ್ಯೋಗ ಅರಸಿ ಬಂದವರು ಹಲವರು. ಇನ್ನು ಕೆಲವರಂತೂ ವೀಸಾ ಇಲ್ಲದೇ ಕಾನೂನು ಬಾಹಿರವಾಗಿ ಗಡಿ ದಾಟಿ ಬಂದವರು!

## ವೀಸಾ ಎಂದರೇನು?

ಒಂದು ದೇಶದ ರಾಯಭಾರ ಕಚೇರಿಯವರು ಒಬ್ಬ ವ್ಯಕ್ತಿ ಆ ದೇಶವನ್ನು ಪ್ರವೇಶಿಸಲು ಅರ್ಹ ಎಂದು ನೀಡುವ ಪ್ರಮಾಣ ಪತ್ರಕ್ಕೆ ವೀಸಾ ಎನ್ನುತ್ತಾರೆ. ಬೇರೆ ದೇಶಗಳಿಂದ ಭಾರತಕ್ಕೆ ಭೇಟಿ ಕೊಡುವವರೂ ಭಾರತದ ರಾಯಭಾರ ಕಛೇರಿ (ಎಂಬಸಿ)ಯಿಂದ ಈ ಪ್ರಮಾಣ ಪತ್ರವನ್ನು ಪಡೆಯಲೇ ಬೇಕು. ಈ ವೀಸಾ ಎಂಬ ಪುಟ್ಟ ಚೀಟಿ ಸಾಮಾನ್ಯವಾಗಿ ಆ ವ್ಯಕ್ತಿಯ ಪಾಸ್‌ಪೋರ್ಟಿಗೆ

ಅಂಟಿಸಲಾಗಿರುತ್ತದೆ. ಸ್ವಂತ ದೇಶದಿಂದ ಇನ್ನೊಂದು ದೇಶಕ್ಕೆ ತೆರಳಲು ಪಾಸ್‌ಪೋರ್ಟ್ ಎಷ್ಟು ಮುಖ್ಯವೋ ಆ ಇನ್ನೊಂದು ದೇಶದಲ್ಲಿ ಇಳಿಯಲು ಆ ದೇಶದ ವೀಸಾ ಕೂಡ ಅಷ್ಟೇ ಮುಖ್ಯ. ಹೀಗಾಗಿ ವಿಮಾನ ಹತ್ತುವಾಗ ಇಳಿಯಲಿರುವ ದೇಶದ ವೀಸಾವನ್ನು ಪರಿಶೀಲಿಸಿಯೇ ಸಿಬ್ಬಂದಿಗಳು ವಿಮಾನ ಏರಲು ಅವಕಾಶ ಕೊಡುತ್ತಾರೆ.

ಹಾಗಂತ ಈಗಿರುವ ನೂರಾ ತೊಂಬತ್ತೈದು ದೇಶಗಳಿಗೆ ತೆರಳಲು ನೂರಾ ತೊಂಬತ್ತೈದು ರಾಯಭಾರ ಕಛೇರಿಗಳಿಗೆ ತೆರಳಿ ಅನುಮತಿ ಪಡೆಯಬೇಕು ಅಂತೇನಿಲ್ಲ. ಪ್ರತೀ ದೇಶದ ಪಾಸ್‌ಪೋರ್ಟಿನ ಜೊತೆಗೂ ಆ ಪ್ರಜೆ ಇಂತಿಷ್ಟು ದೇಶಗಳಿಗೆ ವೀಸಾ ಇಲ್ಲದೇ ಪ್ರವೇಶಿಸಬಹುದು ಎಂಬ ಸವಲತ್ತು ಇರುತ್ತದೆ. ಉದಾಹರಣೆಗೆ ಭಾರತದ ಪ್ರಜೆಗಳು ನೇಪಾಲ್, ಥಾಯ್‌ಲ್ಯಾಂಡ್, ಮಲೇಶಿಯಾ, ಕೀನ್ಯಾ ಸೇರಿದಂತೆ ಜಗತ್ತಿನ ಐವತ್ತಕ್ಕೂ ಹೆಚ್ಚು ದೇಶಗಳಿಗೆ ಪೂರ್ವ ವೀಸಾ ಇಲ್ಲದೇ ಪ್ರವೇಶಿಸಬಹುದು. ಇಂಥ ಕೆಲವು ದೇಶಗಳಲ್ಲಿ 'ವೀಸಾ ಆನ್ ಅರೈವಲ್' ಎಂದರೆ ಆಗಮನದ ಮೇರೆಗೆ ಸುಲಭವಾಗಿ ವೀಸಾ ಕೊಡುವ ಸೌಲಭ್ಯವೂ ಇದೆ.

ಅಮೆರಿಕಾ ಮತ್ತು ಯುನೈಟೆಡ್ ಕಿಂಗ್‌ಡಮ್ ದೇಶಗಳ ಪ್ರಜೆಗಳು ಜಗತ್ತಿನ ಸುಮಾರು ನೂರಾ ಐವತ್ತು ದೇಶಗಳಿಗೆ ಹೀಗೆ ಪೂರ್ವ ವೀಸಾ ಇಲ್ಲದೇ ಪ್ರವೇಶಿಸಬಹುದಾಗಿದೆ. ಬೇರೆ ದೇಶಗಳಿಂದ ಅಮೆರಿಕವನ್ನು ಪ್ರವೇಶಿಸಲು ಅಮೆರಿಕದ ರಾಯಭಾರ ಕಛೇರಿ ಹತ್ತಾರು ಬಗೆಯ ವೀಸಾ ಪರವಾನಗಿಯನ್ನು ನೀಡುತ್ತದೆ. ವಿದ್ಯಾರ್ಥಿಗಳಿಗೆ ಎಫ್.ಒನ್ ಎಂಬ ವೀಸಾ, ಅವರ ಬಾಳ ಸಂಗಾತಿಗೆ ಎಫ್.ಟೂ, ಅಮೆರಿಕದ ಕಂಪನಿಗಳಲ್ಲಿ ಕೆಲಸಕ್ಕೆ ಬರುವವರಿಗೆ ಎಚ್.ಒನ್.ಬಿ, ಅವರ ಸಂಗಾತಿಗಳಿಗೆ ಎಚ್.ಫೋರ್, ಸುಮ್ಮನೇ ಪ್ರವಾಸಕ್ಕಾಗಿ ಬರುವವರಿಗೆ ಬಿ.ಟೂ ಹೀಗೆ ಆಯಾ ಅಭ್ಯರ್ಥಿಯ ಅಗತ್ಯಗಳಿಗೆ ಅನುಸಾರವಾಗಿ ಈ ಪರವಾನಗಿ ಚೀಟಿಯನ್ನು ರಾಯಭಾರ ಕಛೇರಿ ನೀಡುತ್ತದೆ. ಅಮೆರಿಕದಲ್ಲೇ ಖಾಯಂ ಉಳಿಯಲು ಇಚ್ಛಿಸುವವರು ಹೀಗೆ ವಿವಿಧ ವೀಸಾಗಳಡಿಯಲ್ಲಿ ಬಂದು ನಂತರ ಗ್ರೀನ್ ಕಾರ್ಡ್ ಪಡೆದು ಸುದೀರ್ಘ ಪ್ರಕ್ರಿಯೆಯ ನಂತರ ಅಮೆರಿಕದ ಪೌರತ್ವ ಪಡೆಯಬಹುದು.

## ಗ್ರೀನ್ ಕಾರ್ಡ್ ಎಂದರೇನು?

ಅಮೆರಿಕ ಪ್ರವೇಶಿಸಲು ಎಂಥದೇ ವೀಸಾ ದೊರೆತರೂ ಆ ಪರವಾನಗಿ ಇಂತಿಷ್ಟು ದಿನಗಳ, ಇಂತಿಷ್ಟು ತಿಂಗಳುಗಳ ಅಥವಾ ಇಂತಿಷ್ಟು ವರ್ಷಗಳ ಕಾಲ ಮಾತ್ರ ಚಲಾವಣೆಯಲ್ಲಿರುತ್ತದೆ. ಆ ಅವಧಿ ಮುಗಿದು ಹೋದಮೇಲೆ ಅಮೆರಿಕದಿಂದ ಭಾರತಕ್ಕೆ ತೆರಳಲು ಅವಕಾಶವಿದ್ದರೂ ಮರಳಿ ಅಮೆರಿಕಕ್ಕೆ ಬರುವ ಅವಕಾಶವಿರುವುದಿಲ್ಲ. ಹಾಗೆ ಮರಳಿ ಬರಲು ಮತ್ತೆ ಭಾರತದಲ್ಲಿರುವ ಅಮೆರಿಕದ ರಾಯಭಾರ ಕಛೇರಿಗೆ ತೆರಳಿ ವೀಸಾ ಅವಧಿಯನ್ನು ವಿಸ್ತರಿಸಿಕೊಂಡು ಬರಬೇಕು. ರಾಯಭಾರ ಅಧಿಕಾರಿಗಳು ಒಮ್ಮೊಮ್ಮೆ ಯಾವುದೋ ಕಾರಣ ಮುಂದೊಡ್ಡಿ ವೀಸಾ ತಡೆಹಿಡಿಯಬಹುದು ಅಥವಾ ಹೆಚ್ಚಿನ ಪರಿಶೀಲನೆಗಾಗಿ ಸಮಯ ಕೇಳಬಹುದು. ಹೀಗಾದಾಗ ಈ ದೇಶದಲ್ಲೇ ಕೆಲಸ, ಮನೆ, ಸಂಸಾರ ಕಟ್ಟಿಕೊಂಡವರಿಗೆ ತಕ್ಷಣಕ್ಕೆ ಅಮೆರಿಕಕ್ಕೆ ಬರಲಾಗದೇ ಬದುಕು ಗೊಂದಲಮಯವಾಗಬಹುದು.

ಈ ಕಾರಣಕ್ಕೆ ಅಮೆರಿಕದಲ್ಲಿ ಸ್ಥಿರ ನೌಕರಿಯುಳ್ಳವರಿಗೆ ಮತ್ತವರ ಹತ್ತಿರದ ಕುಟುಂಬದವರಿಗೆ ಗ್ರೀನ್ ಕಾರ್ಡ್ ಕೊಡಲಾಗುತ್ತದೆ. ಈ ದೇಶದಲ್ಲಿ ಹತ್ತಿರದ ಕುಟುಂಬವೆಂದರೆ ಬಾಳ ಸಂಗಾತಿ ಮತ್ತು ಅಪ್ರಾಪ್ತ ವಯಸ್ಸಿನ ಮಕ್ಕಳು ಮಾತ್ರ. ಗ್ರೀನ್ ಕಾರ್ಡ್ ಇರುವವರು ಸ್ವಂತ ದೇಶದಿಂದ ಅಮೆರಿಕಕ್ಕೆ ವೀಸಾ ಇಲ್ಲದೇ ಪ್ರವೇಶಿಸಬಹುದು. ಒಂದು ರೀತಿಯಲ್ಲಿ ಗ್ರೀನ್ ಕಾರ್ಡನ್ನು ಖಾಯಂ ವೀಸಾ ಎಂದು ಕರೆಯಬಹುದು. ಕಾಣಲು ಎಟಿಎಂ ಕಾರ್ಡಿನ ಆಕಾರದಲ್ಲಿರುವ ಈ ಚೀಟಿಯಲ್ಲಿ ಹಸಿರಿನ ಛಾಯೆ ಇರುವುದರಿಂದ ಇದಕ್ಕೆ ಗ್ರೀನ್ ಕಾರ್ಡ್ ಎಂದು ಹೆಸರು.



ಅಮೆರಿಕದ ಪೌರತ್ವ ಪಡೆಯಲು ಗ್ರೀನ್ ಕಾರ್ಡನ್ನು ಮೊದಲ ಮೆಟ್ಟಿಲಿನಂತೆ ಭಾವಿಸಲಾಗುತ್ತದೆ. ಗ್ರೀನ್ ಕಾರ್ಡ್ ಉಳ್ಳವರನ್ನು 'ಪರ್ಮನಂಟ್ ರೆಸಿಡೆಂಟ್ಸ್' ಅಂದರೆ ಇಲ್ಲಿನ ಖಾಯಂ ನಿವಾಸಿಗಳು ಎಂದು ಕರೆಯಲಾಗುತ್ತದೆ. ಅಮೆರಿಕದ ಪೌರತ್ವ ಪಡೆಯಲು ಒಬ್ಬ ವ್ಯಕ್ತಿ ಗ್ರೀನ್ ಕಾರ್ಡ್ ಪಡೆದು ಇಂತಿಷ್ಟು ವರ್ಷಗಳಾಗಿರಬೇಕು ಎಂಬ ನಿಯಮವಿದೆ. ಹಾಗಂತ ಈ ಹಸಿರು ಚೀಟಿ ಪಡೆಯುವುದು ಅಷ್ಟು ಸುಲಭವೂ ಅಲ್ಲ. ಒಬ್ಬೊಬ್ಬರು ಅರ್ಜಿ ನೋಂದಾಯಿಸಿ ಎಂಟ್ಹತ್ತು ವರ್ಷ ಈ ಖಾಯಂ ಪರವಾನಗಿಗಾಗಿ ಕಾಯ್ದಿದ್ದೂ ಇದೆ, ಇನ್ನು ಕೆಲವರಿಗೆ ಎರಡೇ ವರ್ಷದಲ್ಲಿ ಗ್ರೀನ್ ಕಾರ್ಡು ಸಿಕ್ಕಿದ್ದೂ ಇದೆ. ಪ್ರಸಕ್ತ ವರ್ಷದ ಅರ್ಜಿಗಳಲ್ಲಿ ಯಾರಿಗೆ ಈ ಪರವಾನಗಿ ನೀಡಬೇಕು ಎನ್ನುವುದರಲ್ಲಿ ಆ ವ್ಯಕ್ತಿಯ ವಿದ್ಯಾಭ್ಯಾಸ, ನೌಕರಿ,

> ಹೆರವರ ಚಿಂತೆ ಮಾಡುವುದು ಸದ್ಗುಣ ಬ್ರಹ್ಮೋಪಾಸನೆಯ ಒಂದು ಭಾಗ
>
> • **ವಿ. ಕೃ. ಗೋಕಾಕ್**

ಪ್ರಾವಿಣ್ಯ, ತಜ್ಞತೆ ಎಲ್ಲವನ್ನೂ ಗಮನಕ್ಕೆ ತೆಗೆದುಕೊಳ್ಳಲಾಗುತ್ತದೆ. ಆ ವ್ಯಕ್ತಿಯ ಜನನ ಪ್ರಮಾಣ ಪತ್ರದಿಂದ ಹಿಡಿದು ಅರ್ಜಿಯ ಜೊತೆ ಒದಗಿಸಿದ ಅತಿಸಣ್ಣ ವಿವರಗಳೂ ಸತ್ಯ ಎಂಬುದನ್ನು ತನಿಖೆ ನಡೆಸಿ (ಕ್ರಾಸ್ ಚೆಕ್ ಮಾಡಿ) ಖಚಿತಪಡಿಸಿಕೊಳ್ಳಲಾಗುತ್ತದೆ. ಆ ನಂತರವೇ ಈ ಖಾಯಂ ಪರವಾನಗಿಯನ್ನು ನೀಡಲಾಗುತ್ತದೆ.

ಅಮೆರಿಕದ ಗ್ರೀನ್ ಕಾರ್ಡ್ ಉಳ್ಳವರು ವರ್ಷದಲ್ಲಿ ಕನಿಷ್ಠ ಆರು ತಿಂಗಳ ಕಾಲ ಈ ದೇಶದಲ್ಲಿ ನೆಲೆಸಲೇ ಬೇಕು ಎಂಬ ಕಟ್ಟುನಿಟ್ಟಾದ ನಿಯಮವಿದೆ. ಪ್ರತೀ ಹತ್ತು ವರ್ಷಗಳಿಗೊಮ್ಮೆ ಈ ಖಾಯಂ ಪರವಾನಗಿಯನ್ನು ನವೀಕರಿಸುತ್ತ ಇರಬೇಕಾಗುತ್ತದೆ.

## ಅಮೆರಿಕದ ಪೌರತ್ವ– ಬೇಕೇ? ಬೇಡವೇ?

ತುಂಬ ಜನ ಹಿರಿ ಕಿರಿಯ ಸ್ನೇಹಿತರು ನನ್ನನ್ನು ಯಾವಾಗಲೂ ಒಂದು ಪ್ರಶ್ನೆ ಕೇಳುತ್ತಾರೆ. ಭಾರತೀಯರಾಗಿ ಹುಟ್ಟಿ ಇನ್ನೊಂದು ದೇಶದ ಪೌರತ್ವ (ಸಿಟಿಜನ್‌ಶಿಪ್) ಪಡೆಯುವುದು ಎಷ್ಟು ಸರಿ? ನಮ್ಮ ದೇಶದ ಅಸ್ಮಿತೆಯನ್ನು ನಾವು ಬಿಟ್ಟುಕೊಡುವುದು ತಪ್ಪಲ್ಲವೇ ಎಂದು. ಭಾವನಾತ್ಮಕ ನೆಲೆಯಲ್ಲಿ ನೋಡಿದರೆ ಈ ವಾದ ಸರಿ. ಹುಟ್ಟಿ ಬೆಳೆದ ಪರಿಸರವೇ ನಮ್ಮ ವ್ಯಕ್ತಿತ್ವವನ್ನು ರೂಪಿಸುವುದು. ಅತಿ ಸಂತೋಷವಾದಾಗ ಅಥವಾ ಅತೀ ದುಃಖವಾದಾಗ ಮೊದಲ ಉದ್ಗಾರ ಮೂಡುವುದು ಮಾತೃಭಾಷೆಯಲ್ಲಿಯೇ. ಜಗತ್ತಿನ ಯಾವುದೋ ಊರಿನ ಯಾವುದೋ ಬೀದಿಯಲ್ಲಿ ನಡೆಯುವಾಗಲೂ ತ್ರಿವರ್ಣ ಧ್ವಜ, ಜನ ಗಣ ಮನ, ಸೀರೆ–ಕುಂಕುಮ, ಮೀನು ಸಾರು, ಒಗ್ಗರಣೆಯ ಘಮ ಅಥವಾ ಭಾರತೀಯ ಭಾಷೆಗಳ ಸೊಗಡು ಕೇಳಿದಾಗ ಮನಸ್ಸು ಒಮ್ಮೆಲೇ ಹಸಿಯಾಗುವುದು. ಎಲ್ಲೇ ಇದ್ದರೂ ಹೃದಯದಿಂದ ಭಾರತೀಯ (ಇಂಡಿಯನ್ ಅಟ್ ಹಾರ್ಟ್!) ಎಂಬ ಭಾವನೆ ಮತ್ತೆ ಮತ್ತೆ ರುಜುವಾತಾಗುವುದು.

ಆದರೆ ಇದೇ ಸಂದಿಗ್ಧವನ್ನು ಪ್ರಾಯೋಗಿಕವಾಗಿ ಪ್ರಶ್ನಿಸಿಕೊಂಡಾಗ ಬೇರೆಯದೇ ಉತ್ತರಗಳು ಹೊಳೆಯುವವು. ಯಾವುಯಾವುದೋ ಕಾರಣಗಳಿಗೆ ಈ ದೇಶಕ್ಕೆ ವಲಸಿಗರಾಗಿ ಬಂದು, ಇಲ್ಲೇ ಸಂಸಾರ ಕಟ್ಟಿಕೊಂಡು ಮಕ್ಕಳನ್ನು ಬೆಳೆಸಿ, ಇಲ್ಲಿಯೇ ಮನೆ ಕೊಂಡು, ಇಲ್ಲಿನ ಸರ್ಕಾರಕ್ಕೆ ತೆರಿಗೆ ನೀಡುವವರು ಈ ದೇಶದಲ್ಲಿ ಮತ ಚಲಾಯಿಸಲು ಬೇಕಾದ ಪೌರತ್ವವನ್ನು ಪಡೆಯಬಾರದೆಂದರೆ ಹೇಗೆ?

ಅಮೆರಿಕದ ಪ್ರಜೆಗಳು ತಮ್ಮ ಬಂಧುಗಳಿಗೆ ಗ್ರೀನ್ ಕಾರ್ಡ್ ಪ್ರಾಯೋಜನೆ (ಸ್ಪಾನ್ಸರ್) ಮಾಡಬಹುದು ಎಂಬ ವಿಶೇಷ ಸೌಲಭ್ಯವೂ ಪೌರತ್ವದ ಜೊತೆಗೆ ದೊರೆಯುತ್ತದೆ. ಕೆಲವು ವಲಸಿಗರು ತಾವು ಪ್ರಜೆಗಳಾದ ನಂತರ ಈ ಸೌಲಭ್ಯ ಉಪಯೋಗಿಸಿಕೊಂಡು ತಮ್ಮ ಹತ್ತಿರದ ಬಂಧುಗಳನ್ನು, ತಂದೆ– ತಾಯಂದಿರನ್ನು ಗ್ರೀನ್ ಕಾರ್ಡ್ ಪ್ರಾಯೋಜಿಸಿ ಅಮೆರಿಕಕ್ಕೆ ಕರೆತರುತ್ತಾರೆ.

***

ನನಗೆ ಹುಬ್ಬಳ್ಳಿಯ ರಸ್ತೆಗಳಲ್ಲಿ ಆರಾಮಾಗಿ ಕಾರು ಓಡಿಸಿ ರೂಢಿಯಿದ್ದರೂ ಅಮೆರಿಕಕ್ಕೆ ಮೊದಲು ಬಂದಾಗ ಇಲ್ಲಿನ ರಸ್ತೆಗಳ ನಿಯಮಗಳನ್ನು ಪ್ರಾಯೋಗಿಕವಾಗಿ ಅರಿಯಲು ಡ್ರೈವಿಂಗ್ ಪಾಠಗಳನ್ನು ತೆಗೆದುಕೊಳ್ಳಲೇ ಬೇಕಾಯಿತು. ಅಂತರ್ಜಾಲದಲ್ಲಿ ಹುಡುಕಿ ಮನೆಯ ಹತ್ತಿರವೇ ಇರುವ 'ಬಾಬ್ ಡ್ರೈವಿಂಗ್ ಸ್ಕೂಲ್' ಎಂಬಲ್ಲಿ ಹೆಸರು ನೋಂದಾಯಿಸಿದೆ.

ಮರುದಿನ ಪಾಠ ನಿಗದಿಗೊಳಿಸಿದ ಸಮಯಕ್ಕೆ ಇಳಿವಯಸ್ಸಿನ ಒಬ್ಬ ಹಿರಿಯರು ಕಾರಿನಲ್ಲಿ ಬಂದು "ನಮಸ್ಕಾರ ಐ ಅಮ್ ಬಾಬ್. ನಿಮ್ಮ ಡ್ರೈವಿಂಗ್ ಟೀಚರ್" ಎಂದು ಕೈಕುಲುಕಿದರು. ಅವರು ಭಾರತೀಯ ಮೂಲದವರು ಎಂಬುದನ್ನು ಸುಲಭದಲ್ಲಿ ಗುರುತಿಸಬಹುದಿತ್ತು. ಅವರ ಭಾಷೆಗೆ ಭಾರತೀಯ ಇಂಗ್ಲೀಷಿನ ಘಲಕವಿತ್ತು. ಕಾರಿನ ಡಾಶ್‌ಬೋರ್ಡಿನ ಮೇಲೆ ಗಣೇಶನ ಒಂದು ಪುಟ್ಟ ಮೂರ್ತಿಯಿತ್ತು.

ಕಾರು ಓಡಿಸುತ್ತ "ನೀವೂ ಭಾರತದಿಂದ ಬಂದವರೇ?" ಎಂದು ಕೇಳಿದೆ. ಆಗ ಅವರು ಸಂತೋಷದಿಂದ ಹಿಂದಿಯಲ್ಲಿ ಮಾತು ಶುರು ಮಾಡಿದರು. ಅವರ ಪೂರ್ಣ ಹೆಸರು ಬಸಂತ್ ಕುಮಾರ್. ಇಲ್ಲಿನ ಜನರಿಗೆ ಸುಲಭವಾಗಲೆಂದು ತಮ್ಮ ಹೆಸರನ್ನು 'ಬಾಬ್' ಎಂದು ತುಂಡರಿಸಿಕೊಂಡಿದ್ದರು. ಮೂಲತಃ ಗುಜರಾತಿನವರು. ದೆಹಲಿಯ ಬ್ಯಾಂಕ್ ಒಂದರಲ್ಲಿ ಕೆಲಸ ಮಾಡುತ್ತಿದ್ದರಂತೆ. ಅವರ ಸಂಬಂಧಿಕರೊಬ್ಬರು ಅಮೆರಿಕದ ಗ್ರೀನ್ ಕಾರ್ಡನ್ನು ಇವರಿಗಾಗಿ ಪ್ರಾಯೋಜಿಸಿದರಂತೆ. "ಇಪ್ಪತ್ತು ವರ್ಷಗಳ ಹಿಂದೆ ಹೆಂಡತಿ ಮತ್ತು ಮೂವರು ಮಕ್ಕಳನ್ನು ಕಟ್ಟಿಕೊಂಡು ವಿಮಾನ ಹತ್ತಿಯೇ ಬಿಟ್ಟೆ. ಇಲ್ಲಿನ ಸಿಟಿಜನ್‌ಶಿಪ್ ಸಿಕ್ಕು ಹನ್ನೆರಡು ವರ್ಷವಾಯಿತು. ಹೆಂಡತಿ ಪುಟ್ಟ ಮಕ್ಕಳ ಜತೆ ಮಾಂಟೆಸೋರಿ ಒಂದರಲ್ಲಿ ಕೆಲಸ ಮಾಡುತ್ತಾಳೆ. ಮಕ್ಕಳು ಅವರಿಗೆ ಬೇಕಾದ ಹಾಗೆ ಭವಿಷ್ಯ ರೂಪಿಸಿಕೊಳ್ಳುತ್ತಿದ್ದಾರೆ" ಎಂದರು. ಅವರ ಕಣ್ಣಲ್ಲಿ ನಡೆದು ಬಂದ ದಾರಿಯ ಬಗ್ಗೆ ಹೆಮ್ಮೆ ಎದ್ದು ಕಾಣುತ್ತಿತ್ತು.

ಒಂದು ಘಂಟೆಯ ಡ್ರೈವಿಂಗ್ ಪಾಠಕ್ಕೆ ಅರವತ್ತು ಡಾಲರ್ ಎಂದು ನಿಗದಿಯಾಗಿತ್ತು. ಅಂದು ಪಾಠ ಮುಗಿಯುತ್ತಲೇ ಇಪ್ಪತ್ತು ಡಾಲರುಗಳ ಮೂರು ಗರಿಗರಿ ನೋಟುಗಳನ್ನು ಅವರ ಕೈಲಿಟ್ಟೆ. ಆ ನೋಟುಗಳ ಮೇಲೆ ಛಾಪಿಸಿದ 'ಇನ್ ಗಾಡ್– ವೀ ಟ್ರಸ್ಟ್' ಎಂಬ ಅಮೆರಿಕದ ಧ್ಯೇಯವಾಕ್ಯ ಬಾಬ್‌ರ ಕಾರಿನಲ್ಲಿರುವ ಗಣೇಶನ ಮೂರ್ತಿಯ ಕುರಿತಾಗಿಯೂ ಹೇಳಿದ್ದಿರಬಹುದಲ್ಲವೇ ಎಂದು ಸೋಜಿಗಪಡುತ್ತಲೇ ಕಾರನ್ನಿಳಿದು ಬಾಬ್‌ರನ್ನು ಬೀಳ್ಕೊಟ್ಟೆ.

---

**ಲೇಖಕರ ಬಗ್ಗೆ**

(ಹುಟ್ಟಿದ್ದು ಕೋಲಾರ ಜಿಲ್ಲೆಯ ದಳಸನೂರು. ಎಂಟನೇ ತರಗತಿಯವರಿಗೂ ದಳಸನೂರು. ನಂತರ ಎರಡನೇ PUC ಯವರೆಗೆ ಬೆಂಗಳೂರು. ಮೈಸೂರಿನ SJCE ಯಿಂದ ಇಂಜಿನೀರಿಂಗ್ ಪದವಿ. ಬೆಂಗಳೂರು ಮತ್ತು ಗೋವಾದಲ್ಲಿ ನೌಕರಿ ಮಾಡಿ 1998 ರಲ್ಲಿ ಅಮೆರಿಕಾಯಣ. 1998ರಿಂದ ನ್ಯೂಜೆರ್ಸಿಯಲ್ಲಿ ವಾಸ. ಕಂಪ್ಯೂಟರ್ ಕ್ಷೇತ್ರದಲ್ಲಿ ವೃತ್ತಿ. ಸ್ಕೂಲು, ಕಾಲೇಜುಗಳಲ್ಲಿದ್ದಾಗ ನಾಟಕ ಮತ್ತು ಸಾಹಿತ್ಯಿಕ ಚಟುವಟಿಕೆಗಳಲ್ಲಿ ಆಸಕ್ತಿ ಮತ್ತು ಭಾಗವಹಿಸುವಿಕೆ. ಈಗಲೂ ಕನ್ನಡ ಸಾಹಿತ್ಯವನ್ನು ಓದುವುದೇ ಹೆಚ್ಚು. 2008ರಿಂದ ಬೃಂದಾವನ ಕನ್ನಡ ಕೂಟದ ಜೊತೆ ನಂಟು.)



> ಶಿಕ್ಷಣ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು
> • ಸರ್. ಎಂ.ವಿ

# ತಿಮ್ಮಿ . . . ಒಸಿ ಸುಮ್ಕಿರಮ್ಮಿ

**ಶ್ರೀನಾಥ್ ಭಲ್ಲೆ**

ತಿಮ್ಮಿಗೆ ಬೇರೆ ಹೆಸರೇನೇ ಇರಲಿ ನಾವು ಆಕೆಯನ್ನು ತಿಮ್ಮಿ ಅಂತಾನೇ ಕರೆಯೋಣ.

ಭಾರತದಲ್ಲಿ ಹುಟ್ಟಿ ಬೆಳೆದ ಎಲ್ಲರೂ ಒಂದಲ್ಲಾ ಒಂದು ಹಂತದಲ್ಲಿ ಮನೆಕೆಲಸದವಳನ್ನು ಆಲಿಯಾಸ್ ತಿಮ್ಮಿಯನ್ನು ಕಂಡೇ ಇರುತ್ತಾರೆ. ಕೆಲವೊಂದು ಬಾರಿ ಪ್ರತೀ ತಿಂಗಳೂ ತಿಮ್ಮಿ ಬದಲಾಗಬಹುದು ಮತ್ತೆ ಕೆಲವೊಮ್ಮೆ ಹುಟ್ಟಿನಿಂದ ಅದೇ ತಿಮ್ಮಿಯನ್ನು ಕಂಡಿರಬಹುದು. ಎಲ್ಲವೂ ಕರ್ಮಾನುಸಾರ ! ಹೆಣ್ಣು, ಹೊನ್ನು, ಮಣ್ಣು ಹೇಗೆ ಕರ್ಮಾನುಸಾರವೋ ಹಾಗೆಯೇ ತಿಮ್ಮಿ ಸಹ. ಒಳ್ಳೆಯ ತಿಮ್ಮೀನ್ನ ಪಡೆದುಕೊಳ್ಳೋದಕ್ಕೂ ಕೇಳಿಕೊಂಡು ಬಂದಿರಬೇಕು.

ಇಷ್ಟಕ್ಕೂ ತಿಮ್ಮೀನ್ನ ಬದಲಿಸುವುದಾದರೂ ಯಾಕೆ? ಇವರ ವಿಷಯದ ಎಂಪ್ಲಾಯೀ ರಿಟೆನ್ಷನ್ ರೇಟ್ ಯಾಕೆ ಕಮ್ಮಿ? ಹಲವು ಕಾರಣಗಳನ್ನು ಹೀಗೂ ಹೇಳಬಹುದು. ಕೆಲವರದ್ದು ಬಂದ ಕೂಡಲೇ ಕಾಫಿ ತಿಂಡಿ ಆಗಬೇಕು ಅನ್ನೋ ಡಿಮ್ಯಾಂಡ್. ಮತ್ತೆ ಕೆಲವರದ್ದು ಉಗಾದಿ ದೀಪಾವಳಿಗೆ ಸೀರೆ ಡಿಮ್ಯಾಂಡ್. ಹೆಂಡತಿಗೆ ಕೊಡಿಸ್ತಾರೋ ಇಲ್ವೋ ಆದರೆ ಮನೆ ಯಜಮಾನ ಅನ್ನೋವ್ನು ಆ ನಮ್ಮ ತಿಮ್ಮಿಗೆ ಕೊಡಿಸಲೇಬೇಕು. ನಾನೇ ನಿಮ್ಮ ಜೊತೆ ಬರ್ತೀನಿ ಸೆಲೆಕ್ಟ್ ಮಾಡೋಕ್ಕೆ ಅಂತಾನೂ ಆಕೆ ಹೇಳ್ತಾರೇನೋ ಗೊತ್ತಿಲ್ಲ.

ಕೆಲವರು ಬಟ್ಟೆಗೆ ನೋವಾಗದ ಹಾಗೆ ಬಂಡೆಗೆ ಬಟ್ಟೆ ತಟ್ಟುತ್ತಾರೆ. ಇನ್ನು ಕೆಲವರು ಬಂಡೆ ಸೀಳೋ ಹಾಗೆ ಒಗೀತಾರೆ. ಕೆಲವರು ಪಾತ್ರೆಗಳನ್ನು ನವಿರಾಗಿ ತೊಳೆದು ಜಿಡ್ಡು, ಕಲೆಗಳನ್ನು ಹಾಗೆ ಉಳಿಸಿದರೆ ಮತ್ತೆ ಹಲವರು ಕರೀ ಬಾಂಡ್ಲೆಯನ್ನು ಬಿಳೀ ಬಾಂಡ್ಲೆ ಮಾಡಿರುತ್ತಾರೆ. ಕೆಲವರು ಪಾತ್ರೆ ತೊಳೆದಾಗ ಶಬ್ದ ಮ್ಯೂಟ್'ನಲ್ಲಿದ್ದರೆ ಹಲವರದ್ದು ಕುರುಕ್ಷೇತ್ರ ಯುದ್ಧವೇನೋ ಅನ್ನಿಸುತ್ತೆ. ಇಂಥಾ ನಾನಾ ಪ್ರಕಾರದ ಕೆಲಸದವರನ್ನು ಸಂಭಾಳಿ ಸಿಕೊಂಡೂ ನಡೆಸಿಕೊಂಡು ಹೋಗ್ತೀರಾ ಅಂದ್ರೆ ಎಲ್ಲಾ ಓಕೆ .. ಇಲ್ಲಾ ಅಂದ್ರೆ ಬದಲಿಸುತ್ತಲೇ ಇರಬೇಕು. ಒಟ್ಟಾರೆ ತಿಮ್ಮೀನ್ನ ಸಂಭಾಳಿಸುವ ಕೆಲಸ ಬಲೇ ತ್ರಾಸ.

ಇನ್ನು ಕೆಲವರನ್ನು ಕಂಡರೆ ಮನೆಯಾಕೆಗೆ ಸರಿ ಬರೋಲ್ಲ. ಕಾರಣ ಏನಪ್ಪಾ ಅಂದ್ರೆ, ಆಕೆ ಮಾತೇ ಆಡದೆ ಕೆಲಸ ಮಾಡ್ಕೊಂಡ್ ಹೋಗ್ತಾಳೆ ಅಂತ. ಹಲವರು ಎಲ್ಲರ ಮನೆ ವಿಷಯ ಇಲ್ಲಿ ಕಕ್ಕಿ ಮುಂದೆ ಸಾಗುತ್ತಾಳೆ. ನಮ್ಮ ಮನೆಯ ವಿಷಯಾನೂ ಮತ್ತೊಬ್ಬರ ಮುಂದೆ ಹೇಳ್ತಾಳೆ ಅನ್ನೋದು ಕೆಲವೊಮ್ಮೆ ನಮ್ಮ ಗಮನಕ್ಕೆ ಬಾರದೆ ಹೋಗುತ್ತೆ !

ನನ್ನ ಶಾಲಾ ಕಾಲೇಜು ದಿನಗಳಿಂದಲೂ ನನ್ನನ್ನು ನೋಡಿಕೊಂಡು ಬಂದಿದ್ದಳು ನಮ್ಮ ಮನೆಯ ಎದುರಿನ ತಿಮ್ಮಿ. ನನ್ನ ಮದುವೆಯಾದ ಐದಾರು ತಿಂಗಳಿಗೆ ನನ್ನಾಕೆಯ ಸೋದರತ್ತೆ ಮನೆಯವರು ಅಮೆರಿಕಕ್ಕೆ ಮಗನ ಮನೆಗೆ ವಿಸಿಟ್'ಗೆ ಬಂದರು. ನಾವು ಬರುವವರೆಗೆ ಮನೆಯನ್ನು ನೋಡಿಕೊಳ್ಳಿ ಅಂತ ನಮಗೆ ಕೀಲಿ ಕೊಟ್ಟು ಹೋದರು. ಸರಿ ಅಂತ ನಾವು ಒಂದು ಆರು ತಿಂಗಳು ನೋಡಿಕೊಂಡೆವು. ಪ್ರತೀ ವಾರದ ಕೊನೆಗೆ ನಮ್ಮ ಮನೆಗೆ ಬರೋದು ಮಿಕ್ಕ ದಿನಗಳು ಸೋದರತ್ತೆ ಮನೆಯಲ್ಲಿ. ಇರೋದು ಆಗಿ ಆರು ತಿಂಗಳಿಗೆ ಅಮೆರಿಕಕ್ಕೆ ಬಂದೆ. ಒಮ್ಮೆ ಮನೆಗೆ ಕರೆ ಮಾಡಿದಾಗ ಅಮ್ಮ ಹೇಳಿದ ವಿಷಯಕ್ಕೆ ನಗಬೇಕೋ ಅಳಬೇಕೋ ಗೊತ್ತಾಗಲಿಲ್ಲ. ತಿಮ್ಮಿ "ಮದುವೆಯಾದ ಸ್ವಲ್ಪೇ ದಿನಕ್ಕೆ, ಬಂದೋಳು ಚಿಕ್ಕ ಸ್ವಾಮಿಗಳ್ನ ಮನೆಯಿಂದ್ಲೇ ಕರ್ಕೊಂಡ್ ಹೋದ್ಲು. ಪಾಪ ಆಗಾಗ ಸಾಮೇರು ಬರ್ತಿದ್ರು. ಈಗಂತೂ ಬರ್ತಾನೆ ಇಲ್ಲ. ಏನ್ ಜಗಳವೋ ಏನ್ ಕಥೆಯೋ" ಅಂತ ಇಡೀ ಬೀದಿಯಲ್ಲಿ ಪ್ರಚಾರ ಮಾಡಿದ್ದಳಂತೆ! ತಿಮ್ಮಿ, ನೀ ಸುಮ್ಕಿರಮ್ಮಿ !!

ಹೀಗೆ ಒಮ್ಮೆ ಭಾರತಕ್ಕೆ ವಿಸಿಟ್ ಮಾಡಿದ್ದಾಗ ನಮ್ಮ ಮನೆಗೆ ಯಾರೋ ಹೊಸ ತಿಮ್ಮಿ ಇದ್ದಳು. ಆಕೆಯ ಡಿಮ್ಯಾಂಡ್ ಪ್ರಕಾರ ಅವಳನ್ನು ಕೆಲಸದ ಆಂಟಿ ಅಂತ ಕರೀಬೇಕಂತೆ. ಇರಲಿ, ಅಲ್ಲಿಗೆ ಹೋದ ಮೇಲೆ ಒಗೆಯೋ ಬಟ್ಟೆ ಬಿದ್ದೇಬೀಳುತ್ತೆ. ಒಂದೆರಡು ದಿನವಾದ ಮೇಲೆ ನನ್ನ ಅಕ್ಕ ಹೇಳಿದಳು, ನಿಮ್ಮ ಮೂರು ಜನರ ಬಟ್ಟೆಗಳನ್ನ ಸಪರೇಟ್ ಆಗಿ ಈ ಬಕೆಟ್ನಲ್ಲಿ ಹಾಕಿಡು ಅಂತ. ಸಾಗರ ದಾಟಿದವರು ಮಡಿಗೆ ಬರೋದಿಲ್ವೋ ಏನೋ .. ಸರಿ ಅಂತ ಹಾಕಿದೆ. 'ಕೆಲಸದ ಆಂಟಿ' ಮನೆ ಜನರ ಬಟ್ಟೆ ಒಗೆದ ಮೇಲೆ ನಮ್ಮ ಬಟ್ಟೆ ಒಗೀತಿದ್ಲು. ಅರ್ಥವಾಗದೆ ಅಕ್ಕನನ್ನು ಕೇಳಿದೆ ಏನು ವಿಷಯ ಅಂತ. ಆಗಲೇ ಅರಿವಾಗಿದ್ದು ಫಾರಿನ್'ನಿಂದ ಬಂದೋರ ಬಟ್ಟೆಗೆ ಬೇರೆ ರೇಟ್ ಅಂತೇ !

ನನ್ನ ಸ್ನೇಹಿತ ಹೇಳಿದ ಅನುಭವ ಹೀಗಿದೆ. ಒಮ್ಮೆ ಅವನು ಭಾರತಕ್ಕೆ ಹೋಗಿದ್ದಾಗ ಅವನಮ್ಮ "ನೋಡೋ ರಾಮು, ತಿಮ್ಮೀ ನಿನ್ನ ಜೊತೆ ಮಾತಾಡಬೇಕಂತೆ". ಅಲ್ಲಿಂದ ಬಂದಿದ್ದೀನಿ ಹಾಗಾಗಿ ಕಾಸು ಕೇಳಬಹುದು ಅಥವಾ ಚಾಕಲೇಟ್ ಕೇಳಬಹುದು ಅಂತ ಉಡಾಫೆಯಿಂದ್ಲೇ "ಏನ್ ತಿಮ್ಮೀ ಏನಾಗ್ಬೇಕಿತ್ತು?"..."ಏನಿಲ್ಲ ಸಾಮೇರಾ, ನೀವು ಫಾರಿನ್'ನಾಗೇ ಯಾವೂರು?"... "ಯಾಕೆ ತಿಮ್ಮಮ್ಮ... ನಮ್ಮೂರಿಗೆ ಬರ್ತೀಯಾ, ನಮ್ಮನೆಯಲ್ಲೇ ಕೆಲಸ ಮಾಡ 'ಬಹುದು" ಅಂತ ನಕ್ಕ. "ಏನಿಲ್ಲಾ ಸ್ವಾಮಿರಾ ನನ್ನ ಮಗ ಅದೇನೋ ಕಂಪ್ಲೀಟರ್ (ಕಂಪ್ಯೂಟರ್) ಕೆಲಸ ಅಂತ ಅಲ್ಲೇ ಬಂದವ್ನೆ... ನಿಮ್ಮೂರು ತಾವಾನೇ ಇರ್ಬೋದಾ ಅಂತ ಕೇಳ್ದೆ"! ತಿಮ್ಮಿ ಮಗ ಫಾರಿನ್'ಗೆ ಹೋಗಬಾರದು ಅಂತೇನಾದ್ರೂ ರೂಲ್ಸ್ ಇದ್ಯಾ?

**ಕೊನೆ ಹನಿ:** ಅಮೇರಿಕಾದ ಅಪಾರ್ಟ್ಮೆಂಟ್ ಖಾಲಿ ಮಾಡಿ ಹೊಸ ಮನೆಗೆ ಹೋಗುವ ಸಮಯದಲ್ಲಿ ಅಕ್ಯುರಾ ಗಾಡಿಯೊಂದು ಮನೆ ಮುಂದೆ ನಿಂತಿತು. ನಮ್ಮ ಅಪಾರ್ಟ್ಮೆಂಟ್'ನ ಮುಂದಿನ ಗಿರಾಕಿ ಆಗಲೇ ರೆಡೀನಾ ಅಂತ ಅಂದುಕೊಂಡೆ. ನನ್ನಾಕೆಯನ್ನು ಕೇಳಿಕೊಂಡ ಬಂದ ಆಕೆ 'ಯಾರಪ್ಪಾ ಇದು?' ಅನ್ನೋ ಪ್ರಶ್ನೆ ನನ್ನಲ್ಲಿ ಮೂಡಿಸಿದಳು. ಆಮೇಲೇ ಅರಿವಾಗಿದ್ದು ಬಂದವರು ಅಪಾರ್ಟ್ಮೆಂಟ್ ಕ್ಲೀನ್ ಮಾಡಿಕೊಡಲು ಬಂದ ಕೆಲಸದಾಕೆ ತಿಮ್ಮಿ ಅಂತ! ತಿಮ್ಮಿ . . . ಯು ಆರ್ ರಿಯಲಿ ಗ್ರೇಟ್!

ಪ್ರವಾಸವು ಅನುಭವವನ್ನು ಹೆಚ್ಚಿಸುತ್ತದೆ. ವೈವಿಧ್ಯಯಯ ಜೀವನದ ದರ್ಶನವಾಗುತ್ತದೆ
• **ಗೋರೂರು ರಾಮಸ್ವಾಮಿ ಐಯ್ಯಂಗಾರ**

# ನೆನಪಿನಂಗಳದಲ್ಲಿ ಶಿವರಾಮ ಮಾವನೊಂದಿಗೆ

**ರಾಮ ಮೋಹನ**



## ಲೇಖಕ

ನನ್ನ ತಾಯಿಯ ತಂದೆಮನೆ ಉಡುಪಿ ಜಿಲ್ಲೆಯ ಕೋಟ ಎಂಬ ಊರಿನಲ್ಲಿ . ಅದೇ ಮನೆಯಲ್ಲಿ ಕೋಟ ಶಿವರಾಮ ಕಾರಂತರು ಹುಟ್ಟಿ ಬೆಳೆದದ್ದು. ಈ ಮನೆಯಲ್ಲಿಯೇ , ಕಾರಂತರ ತಂದೆ, ತಾಯಿ ಹಾಗೂ ಮೂಕಜ್ಜಿಯ ಕತೆ ಪ್ರೇರಿತ , ಅಜ್ಜಿಯವರು ಇದ್ದು , ಬಾಳಿ ಬದುಕಿದ್ದು. ಈಗ ರಾಷ್ಟ್ರೀಯ ಹೆದ್ದಾರಿ ಅಗಲಗೊಳಿಸುವಿಕೆಯಿಂದಾಗಿ , ಈ ಮನೆಯಲ್ಲಿ ನಾನು ಬಾಲ್ಯದಲ್ಲಿ ಕಳೆದ ಹಳೆ ನೆನಪುಗಳು ಮಾತ್ರ ಮನಸ್ಸಿನಲ್ಲಿ ಉಳಿದಿವೆ. ಕಾರಂತರ ಕಡಲ ತೀರದ ಹಳ್ಳಿಯ ಕಥೆ ಗಳಿಗೆ ಪ್ರೇರಿತವಾಗಿದ್ದ ಕೋಟ, ಹಾಗೂ ಮುಂದೆ ಸಾಲಿಗ್ರಾಮ ದಲ್ಲಿ ನೆಲೆಸಿದ ಅವರನ್ನು, ' ಕಡಲ ತೀರದ ಭಾರ್ಗವ' ಎಂದು ಕರೆಯುತ್ತಿದ್ದರು ಎಂಬುದು ನಿಮಗೆಲ್ಲರಿಗೆ ಗೊತ್ತಿದೆ .


## ಬಾಲವನ

ಅವರ ಉಳಿದ ಕಾದಂಬರಿಗಳಿಗೆ , ವಿಚಾರಗಳಿಗೆ ಪ್ರೇರಣೆಯನ್ನು ನೀಡಿದ್ದು , ಶ್ರೀಮತಿ ಲೀಲಾ ಕಾರಂತರೊಡನೆ, ಅವರು ಪುತ್ತೂರಿನ ಬಾಲವನದಲ್ಲಿ ನೆಲೆಸಿದ ನಂತರ .

'ಆಡು ಮುಟ್ಟದ ಸೊಪ್ಪಿಲ್ಲ' ಎಂಬ ಗಾದೆ ಕಾರಂತರಿಗೆ ಅನ್ವಯವಾಗುವುದರಲ್ಲಿ ಸಂಶಯವಿಲ್ಲ. ಸಾಹಿತ್ಯಕ್ಕೆ, ಕಲೆಗೆ, ಅವರು ಕೊಟ್ಟಿರುವ ಕೊಡುಗೆ ತಮಗೆಲ್ಲರಿಗೂ ಗೊತ್ತಿದೆ. ಅವರು, ಸ್ಥಳೀಯರ ಕರಕುಶಲ ವ್ಯವಹಾರಗಳನ್ನು ಪ್ರೋತ್ಸಾಹಿಸಲು ವಿವಿಧ ಆಯೋಜನೆಗಳನ್ನು ಪುತ್ತೂರಿನಲ್ಲಿ ಹಮ್ಮಿಕೊಂಡಿದ್ದರು. ಅದರಲ್ಲಿ, ಅವರ ಬಾಲವನದಲ್ಲಿ ಪ್ರಾರಂಭಿಸಿದ, ಮರದ ಕೈಗಾರಿಕೆಯೂ ಒಂದು. ಸ್ಥಳೀಯ ಬಡಗಿಗಳ ಸಹಾಯದಿಂದ ತಯಾರಿ ಮಾಡಿಸಿ, ಅವರಿಗೆ ಉತ್ತೇಜನ ನೀಡುವ ಉದ್ದೇಶದಿಂದ , ಅವುಗಳನ್ನು, ಪುತ್ತೂರಿನ ಜನರಿಗೆ ಮಾರಾಟ ಮಾಡಿಸುತ್ತಿದ್ದರು. ಹಾಗೆಯೇ, ನಿಜವಾಗಿ ಅಗತ್ಯವಿದ್ದಲ್ಲಿ ಆರ್ಥಿಕ ನೆರವು ನೀಡಿ ಸಹಾಯ ನೀಡುತ್ತಿದ್ದರು. ಈ ನಿಟ್ಟಿನಲ್ಲಿ ಅವರ ಸಹೋದರಿಯಾದ, ನನ್ನ ಅಮ್ಮನೂ, 'ಒಳ್ಳೆ ಉದ್ದೇಶಕ್ಕಾಗಿ ದಾನ ಮಾಡುವುದು' ರೂಢಿಯಲ್ಲಿಟ್ಟುಕೊಂಡಿದ್ದರು. ಮಹಾತ್ಮ ಗಾಂಧಿಯವರ ಪುತ್ತೂರು ಭೇಟಿಯ ಸಮಯದಲ್ಲಿ , ಸ್ವಾತಂತ್ರ್ಯಕ್ಕಾಗಿ ಸಹಾಯ ಮಾಡಲು ನನ್ನ ಅಮ್ಮ, ತನ್ನ ಚಿನ್ನದ ಬಳೆಗಳನ್ನು ನೀಡಿದ ಕತೆಯನ್ನು , ಶಿವರಾಮ ಮಾವ ತುಂಬಾ ಸಲ ಹೇಳುತ್ತಿದ್ದ ನೆನಪಿದೆ .

## ಯಾಹೂ–ಮ್ಯಾಪ್ಸ್ :

ಪರಿಸರ ಪ್ರೇಮ ಎಲ್ಲರಿಗೂ ಗೊತ್ತಿದ್ದದ್ದೇ. ಅವರು ಒಂದು ರೀತಿಯಲ್ಲಿ, ಈಗಿನ 'google-maps '. ಅವರತ್ರ ಮಾತಾಡುತ್ತಿದ್ದರೆ, ಅವರಿಗೆ ಗೊತ್ತಿಲ್ಲದ ಜಾಗಗಳೇ ಇಲ್ಲವೇನೋ ಅಂತನಿಸುತ್ತಿತ್ತು. ಒಮ್ಮೆ , ನಾನೂ ಹಾಗೂ ನನ್ನ ಮಾವನ ಮಗ ಸೂರ್ಯನಾರಾಯಣ ಕಾರಂತ, ಇವರೊಡನೆ, ದ್ವಿಚಕ್ರದಲ್ಲಿ, ಜೋಗದ ಗೇರುಸೊಪ್ಪೆಯನ್ನು ನೋಡಲು ಹೋಗುತ್ತೇವೆ ಅಂದಾಗ , ಅವರು 'ಅದನ್ನು ಎಲ್ಲರೂ ನೋಡುತ್ತಾರೆ. ಜೋಗಕ್ಕೆ, ಸಿರ್ಸಿಗೆ ಹೋಗುವ ದಾರಿಯ ಒಳಗೆ ಇರುವ ಕೆಪ್ಪ–ಜೋಗವನ್ನು ಅರಸಿಕೊಂಡು ಹೋಗುವವರು ಇಲ್ಲ ' ಅಂದರು. ನಮಗೆ ಈ ರೀತಿಯ ಜಾಗಗಳನ್ನು ನೋಡುವುದು ಆಸಕ್ತಿಯ ವಿಷಯ . ಕೂಡಲೇ ಹೊರಟೆವು. ಇದು ದೊಡ್ಡ ಜಲಪಾತವಲ್ಲ. ಆದರೆ ನೀರು ಬೀಳುವ ಜಾಗದ ಮಧ್ಯದಲ್ಲಿ ಒಂದು ಗುಹೆ ಆಕಾರದಲ್ಲಿ ನಿಲ್ಲಲು ಸ್ಥಳವಿದೆ. ನಾವು, ಅಲ್ಲಿದ್ದ ಮರವನ್ನು ಹತ್ತಿ ಕುಳಿತು ಜಲಪಾತದ ಧಾರೆಯಲ್ಲಿ ತಲೆ ಒಡ್ಡುವ ಸುಖವನ್ನು ಅನುಭವಿಸಿದೆವು. ಭೋರ್ಗರೆಯುವ ಝರಿಯ ಶಬ್ದ, ಸುಮಾರು ಮೈಲಿಗಳವರೆಗೆ ಕೇಳುತ್ತಿದ್ದೂ, ಅಲ್ಲಿ ಎಷ್ಟೇ ಜೋರಾಗಿ ಮಾತಾಡಿದರೂ ಕೇಳುತ್ತಿರಲಿಲ್ಲ . ಹಾಗಾಗಿ ಅದಕ್ಕೆ 'ಕೆಪ್ಪ –ಜೋಗ ' ಎಂದು ಹೆಸರು ಬಂದಿತೆಂಬುದನ್ನು ಅವರು ತಿಳಿಸಿದ್ದರು. ಇನ್ನೊಂದು ಬಾರಿ ಕುಂದಾಪುರ ತಾಲೂಕಿನ ಸೀರೂರು ಎಂಬಲ್ಲಿಂದ ಪೂರ್ವಾಭಿಮುಖವಾಗಿ, ನಾನು, ಸೂರ್ಯನಾರಾಯಣ ಹೋಗುವಾಗ, ಸುಮಾರು 18ಮೈಲಿಯಷ್ಟು ದಾರಿ ಕ್ರಮಿಸಿ ಬಳಿಕ ಸಪೂರವಾಗಿ, ಬಹಳ ಎತ್ತರದಿಂದ, ಕುದುರೆ ಬಾಲದಂತೆ ಬೀಳುವ ಜಲಪಾತವನ್ನು ನೋಡಿ ಬಂದಿದ್ದೆವು. ಈ



ವಿಚಾರವನ್ನು ಕೇಳಿದ ಕಾರಂತರು, "ಅದು ಮಳೆಗಾಲದ ಅಂತ್ಯ ಅಥವಾ ದಶಂಬರ ತಿಂಗಳ ತನಕ ಬರುವ ಜಲಪಾತ ; ಅದರಲ್ಲಿ ಮತ್ತೆ ನೀರಿಲ್ಲ. ಅದನ್ನು, ನಾನು ಬೊಂಬಾಯಿಗೆ ವಿಮಾನ ಮೂಲಕ ಹೋಗುವಾಗ ನೋಡಿದ್ದೇನೆ ", ಎಂದು ತಿಳಿಸಿದರು. ಸೂಕ್ಷ್ಮಗ್ರಾಹಿಯಾದ ಕಾರಂತರು , ಇಂಥ ವಿಶೇಷ ಮಾಹಿತಿಯ 'ಯಾಹೂ-ಮ್ಯಾಪ್ಸ್'.

## ಗೂಗಲ್ :

ಅವರು ಮಿತಭಾಷಿ ಎಂದು ಹೆಸರು ಪಡೆದಿದ್ದರು. ಆದರೆ, ಅವರು ನಡೆದಾಡುವ ವಿಶ್ವಕೋಶ ಎಂದು ನಿಮ್ಮೆಲ್ಲರಿಗೂ ಗೊತ್ತಿದೆ. ಅಂದಿನ ಕಾಲದಲ್ಲಿ, ಕಂಪ್ಯೂಟರ್ ,.ಟೆಲಿವಿಷನ್ ಇಲ್ಲದಿದ್ದರೂ, ಪರಿಸರ, ಪ್ರಾಣಿಸಂಕಲನ, ಭೂಮಿ- ಜೀವಜಂತುಗಳ ವಿಷಯ, ಇತಿಹಾಸ, ಯಕ್ಷಗಾನದ ವಿಚಾರವಾಗಲೀ, ನಿರರ್ಗಳವಾಗಿ ವಿವರಿಸುತ್ತಿದ್ದರು. ಆಗ, ಈ ವಿಚಾರಗಳನ್ನು ಕುರಿತ ಪುಸ್ತಕಗಳು, ಚಿಕ್ಕ ಪೇಟೆಗಳಲ್ಲಿ ಸಿಕ್ಕಿತ್ತಿರಲಿಲ್ಲ. ಹಾಗಾಗಿ, ಅವರ ಜ್ಞಾನ-ಭಂಡಾರವನ್ನು, ಬಾಲ-ಪ್ರಪಂಚದ ಮೂಲಕ ತೋರಿಸಿದರು. ಈಗಲೋ, ನಾವು ಯೋಚನಾ-ಶಕ್ತಿಯನ್ನು ಕಳೆದುಕೊಂಡು, ಅಥವಾ ಉಪಯೋಗಿಸಲು ಪ್ರಯತ್ನಿಸದೆ , ಗೂಗಲ್ ಅನ್ನು ಮೊರೆ ಹೋಗುತ್ತಿದ್ದೇವೆ .

## ವಿಚಾರ :

ಕಾರಂತರ ಅಭಿಪ್ರಾಯ , ನಂಬಿಕೆ ದೇವರ ವಿಚಾರದಲ್ಲಿ , ವಿಭಿನ್ನವಾಗಿದ್ದರೂ, 'ಬಾಳ್ವೆಯೇ ಬೆಳಕಿನಲ್ಲಿ' ಹೇಳಿದಂತೆ, ಅವರು, ಇನ್ನೊಬ್ಬರ ಮನಸ್ಸನ್ನು ಈ ವಿಷಯದಲ್ಲಿ ತಿದ್ದುವ, ಅಥವಾ 'ನಾನು ಸರಿ, ನೀನು ತಪ್ಪು' ಎಂದು ಪ್ರತಿಪಾದಿಸುವ ಗೋಜಿಗೆ ಹೋಗುತ್ತಿರಲಿಲ್ಲ. ಅವರು ನಾಸ್ತಿಕರೆಂದೇ ಇತರರು ಅನ್ನುತ್ತಿದ್ದರು. ಹಾಗಂತ, ತನ್ನ ಪತ್ನಿ ಪೂಜೆ ಕಾರ್ಯಕ್ರಮದಲ್ಲಿ ತೊಡಗಿದರೆ, ಅದಕ್ಕೆ ಎಂದೂ ಅಡ್ಡಿ ಬರುತ್ತಿರಲಿಲ್ಲ .

## ಸರಳ-ಸಜ್ಜನಿಕೆ :

ತುಂಬಾ ಸರಳ ಸ್ವಭಾವಿ. ಆರೋಗ್ಯದ ಬಗ್ಗೆ ಶಿಸ್ತು. ಕಾರಂತರು ತಮ್ಮ ಬಾಲವನ ಮನೆಯಿಂದ ಪೇಟೆಗೆ ಒಂದೆರಡು ಮೈಲಿ ದಿನಾಲೂ ಬೆಳಿಗ್ಗೆ ಹಾಗೂ ಸಂಜೆ, ಓಡಾಡಲು ಕಾರ್ ಇದ್ದರೂ, ನಡೆದುಕೊಂಡೇ ಪೇಟೆಗೆ ಬರುತ್ತಿದ್ದರು. ದಾರಿಯುದ್ದಕ್ಕೂ, ತಲೆತಗ್ಗಿಸಿ ನಡೆದುಕೊಂಡೇ ಹೋಗುತ್ತಿದ್ದರೂ, ತೀಕ್ಷ್ಣಮತಿಯಾಗಿದ್ದ ಅವರಿಗೆ, ಅವರ ಕಡೆಗೆ ಯಾರೇ ಬರುತ್ತಿದ್ದರೂ ಗೊತ್ತಾಗುತ್ತಿತ್ತು. ಒಮ್ಮೆ ನಾನು, ಸೈಕಲ್ಲಿನಲ್ಲಿ ಹೋಗುವಾಗ, ಅವರು ನನ್ನನ್ನು ಗಮನಿಸಿರಲಿಕ್ಕಿಲ್ಲ ಎಂದು, ಅವರನ್ನು ದಾಟಿ ಮುಂದೆ ಹೋಗುತ್ತಿದ್ದೆ. ಆದರೆ ನಾನು ದಾಟುವಾಗಲೇ 'ರಾಮಮೋಹನ, ಜಾಗ್ರತೆ. ಜಾಸ್ತಿ ಸ್ಪೀಡ್ ನಲ್ಲಿ ಹೋಗಬೇಡ' ಎಂದು ಹೇಳಿದ್ದುಂಟು .

ಪುತ್ತೂರು ಬಿಟ್ಟು ಸಾಲಿಗ್ರಾಮಕ್ಕೆ ಹೋದ ನಂತರವೂ ಆಗಾಗ್ಗೆ,



ಕಡಲ ತೀರದ ಭಾರ್ಗವ ಶಿವರಾಮ ಕಾರಂತರು ವಿಶಿಷ್ಟ ಭಂಗಿಯಲ್ಲಿ

ಪುತ್ತೂರಿಗೆ ಬರುತ್ತಿದ್ದರು. ಯಾವಾಗ್ಲೂ, ತಿಳಿಸಿ ಬರುವುದು ರೂಢಿ. ತನ್ನ ಸ್ವಂತ ತಂಗಿಯ ಮನೆಯಾದರೂ, "ಇನ್ನೊಬ್ಬರಿಗೆ ಉಪದ್ರವ ಕೊಡಬಾರದು" ಎಂದು ಯಾವಾಗ್ಲೂ ಹೇಳುತ್ತಿದ್ದರು. ಅಂತೆಯೇ, ಅದ್ದೂರಿಯ ಊಟೋಪಚಾರ ಯಾವತ್ತೂ ನಿರೀಕ್ಷಿಸುತ್ತಿರಲಿಲ್ಲ. ನನ್ನ ಪತ್ನಿಯ ಹತ್ತಿರ ' ಒಂದು ಲೋಟ ಕಾಫಿ ಕೊಡು ಗಿರಿಜಾ, ಬೇರೇನು ಬೇಡ ' ಅನ್ನುತ್ತಿದ್ದದು ಇನ್ನೂ ನೆನಪಿದೆ. ಅವರ ಮನಸ್ಸಿನ ಇಂಗಿತವನ್ನು ತಿಳಿದಿದೆಯೋ ಎಂಬಂತೆ, ಗಿರಿಜಾ, ಅವರಿಗೆ ಇಷ್ಟವಾಗುವಂತೆ, ಸಾರು, ಉದ್ದಿನ ಹಿಟ್ಟು ಗೊಜ್ಜು, ಹಲಸಿನ ಹಪ್ಪಳ, ಬೇಯಿಸಿದ ಮಾವಿನಕಾಯಿ ಗೊಜ್ಜು, ಬಾಳೆಹಣ್ಣು ಹಲ್ವಾ ಮಾಡಿ ಬಡಿಸುತ್ತಿದಳು. ಅವರು ಮಿತ ಆಹಾರಿ. ಯಾವಾತ್ತೂ, ಲೆಕ್ಕಕ್ಕಿಂತ ಹೆಚ್ಚು ತಿನ್ನುತ್ತಿರಲಿಲ್ಲ. ಅವರು ನವೆಂಬರ್ 1997ರಂದು ನಮ್ಮ ಮನೆಗೆ ಬಂದಿದ್ದಾಗ, ಮೊದಲನೇ ಬಾರಿ 'ಪುನಃ ಬಡಿಸು' ಎಂದು ಒಂದೆರಡು ಬಗೆ ತಿಂದು, ಆ ಬಳಿಕ ಕೆಲವು ನಿಮಿಷ ವಿಶ್ರಾಂತಿ ಪಡೆದು ತದನಂತರ, ಟೀವಿ ಸಂದರ್ಶನಕ್ಕೆ ತೆರಳಿದ್ದರು. ಅದಾಗಿ ಒಂದು ತಿಂಗಳಲ್ಲೇ ತೀರಿಕೊಂಡರು .

ಅವರೊಡನೆ ಕಾಲ ಕಳೆದದ್ದು, ಮಾತಾಡಿದ್ದು, ನನ್ನ ಜೀವನದಲ್ಲೂ ತುಂಬಾ ಪರಿಣಾಮ ಬೀರಿತ್ತು. ಅವರು ಬರೆದ, ವಿವಿಧ ವಿಷಯಗಳನ್ನು ನಾನು ಓದಿದ್ದರೂ, ಇನ್ನೆಷ್ಟೋ ವಿಷಯಗಳನ್ನು, ಅವರ ಜೊತೆ ಸಂಭಾಷಣೆಯಲ್ಲಿ ತಿಳಿದುಕೊಂಡೆ. ಈಗ ಯೋಚಿಸಿದರೆ, ಅವೆಲ್ಲವನ್ನು, ಟೇಪ್-ರೆಕಾರ್ಡರ್ ನಲ್ಲಿ ರೆಕಾರ್ಡ್ ಮಾಡಬೇಕಿತ್ತು ಅಂತ ಅನ್ನಿಸುತ್ತದೆ. ಮನುಷ್ಯನು ಪಾಠ -ಪುಸ್ತಕ ಇದ್ದೂ, ಇಲ್ಲದೆಯೂ, ಬದುಕನ್ನು ತನ್ನದೇ ಆದ ವಿಭಿನ್ನ ದೃಷ್ಟಿಕೋನದಲ್ಲಿ ನೋಡಿ, ವಿಚಾರಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಬಹುದು ಎಂದು ಕಲಿತೆ. ಇದಕ್ಕೆ ನಾನು ಚಿರ-ಋಣಿ. ಧನ್ಯೋಸ್ಮಿ .

**ಕವಿತೆ** — ವಿ. ಪ್ರಸನ್ನ ಕುಮಾರ್

# ಮದುವೆ ಮಾಡಿ ನೋಡು – ಅಮೇರಿಕಾದಲ್ಲಿ !!

ಅಲ್ಲಿ ಬಿಟ್ಟು ಇಲ್ಲಿಗೆ ಬಂದು ದಶಕವೆರಡು ಕಳೆಯಿತು
ಮಗಳು ಮದುವೆಗೆ "ಸಿದ್ಧ" ಎಂದು ಹೇಳಿ ಐದು ವರ್ಷ ಕಳೆದಿತ್ತು
ಹುಡುಗ ಸಿಕ್ಕನಾ? ಯಾವಾಗ ಮದುವೆ? ಪ್ರಶ್ನೆಗಳು ಬರುತಿತ್ತು
"ಹುಡುಕ್ತಾ ಇದೀವಿ, ಇನ್ನೂ ಸಿಕ್ಕಿಲ್ಲ" ಎಂದು ಎಲ್ಲರಿಗೆ ಹೇಳಿ ಹೇಳಿ ಸಾಕಾಗಿತ್ತು

ಕನ್ನಡ ಹುಡುಗ ವೈದ್ಯ ಅವನು ಎಂದು ಭೇಟಿ ಮಾಡಿಸಿತು
ಸೌತ್ ಇಂಡಿಯನ್ ತಂತ್ರಜ್ಞ ಒಬ್ಬನ ಪರಿಚಯವೂ ಆಯಿತು
ಡೇಟು ಗೀಟು ಮಾಡುವ ಮೊದಲೇ ಲಂಚು ಗಿಂಚು ನಡೆಯಿತು
"ಯಾಕೋ ಏನೋ ಸರಿಹೋಗಲಿಲ್ಲ" ಎಂದು ನಮ್ಮ ಕೂಸಿ ಸಣ್ಣದಾಗಿ ಉಲಿಯಿತು

ಮೂರು ವರ್ಷದ ಹಿಂದೆ ಸಿಕ್ಕನೊಬ್ಬ ನೀಲಿ ಕಂಗಳ ಬಿಳಿಯ
ಪರಿಚಯ ಮುಂದುವರೆದು ಆಯ್ತು ಸ್ನೇಹ, ಪ್ರೇಮ, ಪ್ರಣಯ
ಕಳೆದವು ವರುಷಗಳೆರಡು ಇವರಿಬ್ಬರ ಹುಡುಗಾಟದ ಹರೆಯ
ಸಂಕ್ರಾಂತಿಯಂದು ಮಂಡಿಯೂರಿ ಕೇಳಿಯೇ ಬಿಟ್ಟ "ನನ್ನ ಮದುವೆಯಾಗುವೆಯಾ"

ಜನವರಿಯಲಿ ಶುರುವಾಯ್ತು ಸಂತೃಪ್ತಿಯಲಿ ಸಡಗರದ ತಯಾರಿ
ಮೇನಲ್ಲಿ ನಿಶ್ಚಿತಾರ್ಥಕ್ಕೆ ಸಜ್ಜಾಯ್ತು ನಮ್ಮ ಬೆಂಗಳೂರು ನಗರಿ
ಮೊದಲ ಬಾರಿಗೆ ನಮ್ಮ ನಗರಕ್ಕೆ ಆಗಮಿಸಿದರು ಕಿಮ್ ಡೇವು ಮೈಕೆಲ್ ಬ್ಯಾರಿ
ಮೊಳಗಿತು ಸಡಗರದಿ ವೇದಮಂತ್ರ, ನಾಟ್ಯಗಾನ ಯಕ್ಷಗಾನ ನಡುವೆ ಲಗ್ನಪತ್ರಿಕೆಯ ತುತ್ತೂರಿ



ಕುಲವಂ ನಾಲಗೆ ಅರುಹಿತು
• ಪಂಪ

ಜೂನಲ್ಲಿ ಶುರುವಾಯ್ತು ಮಗಳ ಮದುವೆಗೆ ವಿಶದವಾದ ಪ್ಲಾನು
ತೊಡಗಿಸಿಕೊಂಡೆವು ಮಗಳೊಂದಿಗೆ ಸುಹಾಸ್, ಉಷಾ ಹಾಗು ನಾನು
ಅಲಂಕಾರಕ್ಕೆ ಯಾರು, ಊಟ ತಿಂಡಿಗೆ ಏನು, ಫೋಟೋಗೆ ಅವನು
ಹೀಗೆ ಸಾಗಿತ್ತು ಪ್ರತಿದಿನವೂ ಸಂತೃಪ್ತಿಯಲಿ ನಮ್ಮ ನಾಕು ಜನಗಳ ಪ್ಲಾನಿಂಗೂ ಡಿಸ್ಕಷನ್ನು

ವಿಜಯದಶಮಿಯಂದು ಧಾರೆ ಮಾರನೆಯ ದಿನ ಅಮೆರಿಕನ್ ಮದುವೆ
ಸಂತೃಪ್ತಿಯಲಿ ನಡೆಯಿತು ಸುಣ್ಣ ಬಣ್ಣಗಳಿಂದ ಸಜ್ಜಾಗುವ ಗೊಡವೆ
ಮದುವೆಗೆ ತಿಂಗಳಿದೆ ಎಂದರೂ ಮುಗಿಯದು ನನ್ನೊಡತಿಯ ಹೊಸ ಹೊಸ ಅರಿವೆ
ಬಂದಾಯಿತು ನಮ್ಮೂರಿಂದ, ಹಲವು ದೇಶಗಳಿಂದ ಬಂಧು ಬಾಂಧವರ ತಂಡ ನಮ್ಮಗಳ ನಡುವೆ

ಪ್ರಕೃತಿಯ ಮಧ್ಯೆ ಮದುವೆ, ಚಳಿಯೊ ಮಳೆಯೊ ಚಂಡಮಾರುತವೊ ಬಂದರೆ ಹೇಗೆ
ಅಜ್ಜಯ್ಯ, ಭಗವಂತನ ಸ್ಮರಣೆ ನಡೆದಿತ್ತು ಪ್ರತಿದಿನ ಮದುವೆಯ ದಿನದವರೆಗೆ
ಮದುವೆಯ ದಿನ ಟೊಂಕ ಕಟ್ಟಿ ಬಂದರು ಸ್ನೇಹಿತರು ನಮ್ಮ ಸಹಾಯಕ್ಕೆ ಒಳಗೆ
ಬಾಳೆಲೆಯ ಮೇಲೆ ಬಡಿಸಿ ಊಟ ಉಂಡವರ ಮುಖದಲ್ಲಿ ಕಂಡಿತ್ತು ಸಂತೋಷ ಸಂತೃಪ್ತಿಯ ನಗೆ

ಸಂಗೀತ್ ಸಂಜೆಯಲಿ ಹಾಡಿ ಕುಣಿದಾಡಿದರು ಎಲ್ಲರೂ ದಾಂಡಿಯ ಗರ್ಭಾ ನೃತ್ಯ
ಬೀಗರನು ಬಿಡಲಿಲ್ಲ ಹಾಡು ಕುಣಿದು ಕುಪ್ಪಳಿಸುವ ಸಂತೋಷದ ನೃತ್ಯ
ಎಲ್ಲರ ಮೈ ಮನದಲ್ಲಿ ಕಂಡಿತ್ತು ಉಲ್ಲಾಸದ ಕುರುಹುಗಳು ಮೂರು ದಿನ ನಿತ್ಯ
ಮನಸಿಗೆ ತುಂಬ ಹಿತವೆನಿಸಿತು ಎಲ್ಲರಿಗು ನಮ್ಮ ಹೊಸ ಸರಳ ಅಮೇರಿಕನ್ ಬೀಗರ ಸಾಂಗತ್ಯ

ಮೂರು ದಿನಗಳ ಸಡಗರದ ಕೊನೆಗೆ ನಡೆದಿದ್ದು ಅವರಿಬ್ಬರ ಅಮೆರಿಕನ್ ಮದುವೆ
ಪುರೋಹಿತರು ನಡುವೆ, ಸೂರ್ಯನೇ ಹಿಂದೆ, ಗಿಡಮರಗಳೆ ಮುಂದೆ, ಪ್ರಕೃತಿಯ ನಡುವೆ
ಪ್ರಮಾಣಿಸಿದರು ನವದಂಪತಿಗಳು ಹೇಳುತ್ತ "ನಾನು ನಿನ್ನನ್ನೇ ಪ್ರೀತಿಸುವೆ"
ದೇವರ ಕೃಪೆಯಿಂದ ಮುಗಿದಿತ್ತು ಯಾವ ಅಡಚಣೆಯಿಲ್ಲದೆ ಸಂತಸದ ಸಂಭ್ರಮದ ಸಡಗರದ ಮದುವೆ

ಎಲ್ಲಾ ಹೆಣ್ಣು ಹೆತ್ತವರು ತಾಳ್ಮೆಯಿಂದ ಕಾಯುವರು ಮಾಡಲು ಕನ್ಯಾದಾನ
ಹಿರಿಯರ ಆಶೀರ್ವಾದದಿಂದ ಒದಗಿಬಂತು ಆ ಪುಣ್ಯ ನಮ್ಮಿಬ್ಬರಿಗೆ ಈ ದಿನ
ಬಂಧು ಮಿತ್ರರು ಸಂತಸದಿ ಬಂದು ನಡೆಸಿಕೊಟ್ಟರು ಈ ಸಂಭ್ರಮದ ಮದುವೆನಾ
ಸ್ನೇಹ, ಮೈಕ್ – ನಿಮ್ಮ ಜೀವನದಲ್ಲಿ ಸುಖ ಶಾಂತಿ ಯಶಸ್ಸು
ಸಂತಸ ನೆಮ್ಮದಿ "ಸಂತೃಪ್ತಿ" ತುಂಬಿರಲಿ ಪ್ರತಿದಿನ !!



ಬೃಹನ್ನಳೆಯೇ ಆಗಿದ್ದರೂ ಅರ್ಜುನನ ಹಾಗೆ ಧೀಮಂತನಾಗಿರಬೇಕು
• ಕುಮಾರವ್ಯಾಸ

# ರಂಗಪ್ರವೇಶ ಒಂದು ಅನುಭವ!




**ಕುಸುಮ ಶಂಕರ್**

ಈ ಬಾರಿ ನನ್ನ ಅಮೇರಿಕಾ ಪ್ರವಾಸದ ಮುಖ್ಯ ಉದ್ದೇಶ ಪ್ರೀತಿಯ ಮೊಮ್ಮಗಳು ಅನಘ ಪ್ರಸಾದ್ ರಂಗಪ್ರವೇಶ. ನಮ್ಮೆಲ್ಲರ ಮನಸೂರೆಗೊಂಡ ಅನಘ'ಳ ರಂಗಪ್ರವೇಶದ ಬಗ್ಗೆ ನನ್ನ ಅನಿಸಿಕೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ಎಲ್ಲಾ ತಾತ ಅಜ್ಜಿಯಂದಿರಿಗೆ ಅವರ ಮಕ್ಕಳಿಗಿಂತ ಮೊಮ್ಮಕ್ಕಳ ಮೇಲೆ ಪ್ರೀತಿ ಜಾಸ್ತಿ ನಾನು ಕೂಡ ಅದಕ್ಕೆ ಹೊರತಲ್ಲ. ಅವಳ ರಂಗಪ್ರವೇಶದ ದಿನ ನಾನು ಪಟ್ಟ ಸಂತೋಷ ಅಷ್ಟಿಷ್ಟಲ್ಲ ಎಣಿಕೆಗೆ ಮೀರಿದ್ದು. ಅವಳು ಪ್ರದರ್ಶಿಸಿದ ವಿವಿಧ ರೀತಿಯ ನೃತ್ಯಗಳು, ಅದರೊಳಗೆ ಬರುವ ರಸವತ್ತಾದ ಸನ್ನಿವೇಶಗಳು, ಅದಕ್ಕೆ ತಕ್ಕ ಹಾಗೆ ಅವಳು ತೋರಿದ ಭಾವ, ನವರಸಗಳೊಂದಿಗೆ ಕೂಡಿದ ಅವಳ ಅಭಿನಯ, ಸಮರ್ಪಣಾಭಾವ ಎಲ್ಲವು ಮನಮೋಹಕವಾಗಿದ್ದವು.




ವಿಘ್ನ ವಿನಾಶಕ ವಿಘ್ನೇಶ್ವರನ ನೃತ್ಯದೊಂದಿಗೆ ಪ್ರಾರಂಭ ಗೊಂಡು, ಅಲರಿಪು, ಜತಿಸ್ವರಗಳಲ್ಲಿ ಅತ್ಯುತ್ತಮವಾಗಿ ತನ್ನ ನೃತ್ಯ ಕೌಶಲ್ಯವನ್ನು ಪ್ರದರ್ಶಿಸಿದಳು. ನಂತರ ರಂಗಪ್ರವೇಶದ ಮುಖ್ಯ ಭಾಗವಾಗಿದ್ದ ವರ್ಣದಲ್ಲಿ, ರಾಮಾಯಣದ ಹಲವು ಸನ್ನಿವೇಶಗಳಲ್ಲಿ ಪಾತ್ರದೊಳಗೆ ಪ್ರವೇಶಿಸಿ, ಜೀವ ತುಂಬಿ ಅಮೋಘವಾಗಿ ನೃತ್ಯ ಅಭಿನಯ ಮಾಡಿ ಎಲ್ಲರ ಮನಸ್ಸನ್ನು ಗೆದ್ದಳು. ಸೀತೆಯು ರಾಮನಿಗಾಗಿ ಪರಿತಪಿಸುವ ಸನ್ನಿವೇಶಗಳು ಭಾವನಾತ್ಮಕವಾಗಿತ್ತು. ನಂತರ ಅಷ್ಟಪದಿ, ಸಂಸ್ಕೃತ ಭಾಷೆಯಲ್ಲಿ ರೂಪಿಸಿದಂತಹ ನೃತ್ಯ, ಕೃಷ್ಣನ ಪಾತ್ರವನ್ನು ಕೃಷ್ಣ ವೇಷಧಾರಿಯಾಗಿ ಮನೋಜ್ಞವಾಗಿ ಅಭಿನಯಿಸಿದಳು. ಸಂಸ್ಕೃತದ ಭಾವಾರ್ಥಗಳನ್ನು ಅರ್ಥೈಸಿಕೊಂಡು ಅತ್ಯದ್ಭುತವಾಗಿ ಅಭಿನಿಯಿಸಿದಳು. ನಂತರ ಅವಳ ಅಚ್ಚುಮೆಚ್ಚಿನ 'ಭೋ ಶಂಭೋ' ಎಂಬ ಹಾಡಿಗೆ ನಟರಾಜನನ್ನು ಸ್ತುತಿಸಿ, ಧ್ಯಾನಿಸಿ, ಸಮೀಪಿಸಿ ಅವನ ಅನುಗ್ರಹಕ್ಕೆ ಪಾತ್ರಳಾಗಿದ್ದಾಳೆ. 'ಕೃಷ್ಣಾ ಎನಬಾರದೇ' ಎಂಬ ಪುರಂದರ ದಾಸರ ಕೃತಿಗೆ ತನ್ನ ಕಂದನನ್ನು ಅದಮ್ಯವಾದ ಪ್ರೀತಿಯಿಂದ ಕೃಷ್ಣನಂತೆ ಅಲಂಕರಿಸಿ, ಆನಂದಿಸಿದ ದೃಶ್ಯ ರಮಣೀಯವಾಗಿತ್ತು. ಜೊತೆಗೆ ಗಜೇಂದ್ರ ಮೋಕ್ಷದ ಸನ್ನಿವೇಶದಲ್ಲಿ ಆನೆ ಸ್ವಚ್ಛಂದವಾಗಿ ಜಲಕ್ರೀಡೆ ಯಾಡಿದ್ದು, ಹಾಗೆ ದ್ರೌಪದಿ ವಸ್ತ್ರಾಪಹರಣದ ಸನ್ನಿವೇಶದಲ್ಲಿ, ದ್ರೌಪದಿ ಶ್ರೀ ಕೃಷ್ಣ ಪರಮಾತ್ಮನ ಮೊರೆಹೊಕ್ಕಿದ್ದು ಎಲ್ಲರ ಹೃದಯವನ್ನು ಕರಗಿಸಿತು. ಅಂತಿಮವಾಗಿ ತಿಲ್ಲಾನ ಮತ್ತು ಮಂಗಳ. ಮಂಗಳದಲ್ಲಿ ಹಲವು ದೇವರುಗಳನ್ನು ನೆನೆದು, ಮನೆಯ ದೇವರಾದ ಮಲ್ಲಿಕಾರ್ಜುನನನ್ನು ನೆನೆಯುತ್ತ ಭಕ್ತಿಯಿಂದ ನಟರಾಜನ ಚರಣ ಕಮಲಗಳಿಗೆ ನಮಸ್ಕರಿಸುತ್ತಾ, ಗುರುಗಳು ಮತ್ತು ಪ್ರೇಕ್ಷಕ ವರ್ಗದವರಿಗೆ ವಂದಿಸುತ್ತಾ ಕಾರ್ಯಕ್ರಮವನ್ನು ಸಂಪನ್ನಗೊಳಿಸಿದಳು. ತನ್ನ ರಂಗಪ್ರವೇಶವನ್ನು ಭಗವಂತನಿಗೆ ಸಮರ್ಪಿಸುತ್ತಾ ಎಲ್ಲರ ಮೆಚ್ಚುಗೆ ಪಡೆದು ಅನಘ ಅಂದು ಅನರ್ಘ್ಯಳಾಗಿದ್ದಳು.


ದೇವರ ಅನುಗ್ರಹದಿಂದ ಅನಘಳ ರಂಗ ಪ್ರವೇಶ ಕಾರ್ಯಕ್ರಮ ಸುಂದರವಾಗಿ ಮತ್ತು ಆಧ್ಯಾತ್ಮಿಕವಾಗಿ ಮೂಡಿಬಂದು ಎಲ್ಲರ ಹೃದಯವನ್ನು ತಲುಪಿತು ಎಂದು ಹೇಳಲು ನನಗೆ ಹೆಮ್ಮೆ ಎನಿಸುತ್ತದೆ. ಗುರುಗಳಾದ ಶ್ರೀಮತಿ ಸುಷ್ಮಾ ಶ್ರೇಯಸ್ ಅವರು ವಿದ್ಯೆಯನ್ನು ಮನಃಪೂರ್ವಕವಾಗಿ ಧಾರೆ ಎರೆದಿದ್ದಾರೆ. ಹೆತ್ತವರಿಗೆ ಹೆಮ್ಮೆಯ ಕಂದನಾಗಿ, ಗುರುಗಳಿಗೆ ಮೆಚ್ಚಿನ ಶಿಷ್ಯಳಾಗಿ, ಎಲ್ಲರ ಪ್ರೀತಿಗೆ ಪಾತ್ರಳಾಗಿ, ಕಲಾ ಸೇವೆಯನ್ನು ನಿರಂತರವಾಗಿ ನಡೆಸುತ್ತ, ಭವ್ಯ ಭವಿಷ್ಯ ನಿನ್ನದಾಗಲಿ ಎಂಬುದು ಕುಸುಮ ಅಜ್ಜಿಯ ಶುಭ ಹಾರೈಕೆಗಳು.



ನಿಧಿ ಮೂರ್ತಿ




ಅದಿತಿ ಗಡಿಗಿ



ಮೇಧ

# ಮ್ಯಾರಥಾನ್ ಓಟ

ಸುದೀಪ್ತ ಮೂರ್ತಿ



ಇತ್ತೀಚೆಗೆ ನ್ಯೂಯಾರ್ಕ್ ಮ್ಯಾರಥಾನ್ ನಡೆಯಿತು. ನನ್ನ ತಂದೆಯ ಸ್ನೇಹಿತರಾದ ಶ್ರೀಮತಿ ಲಲಿತಾ ಭಟ್ ಇದರಲ್ಲಿ ಭಾಗವಹಿಸಿದ್ದರು. ಇದಕ್ಕಾಗಿಯೇ ಅವರು ದೂರದ ಕ್ಯಾಲಿಫೋರ್ನಿಯಾದಿಂದ ಇಲ್ಲಿಗೆ ಬಂದಿದ್ದರು. ನಮ್ಮ ಮನೆಯಲ್ಲಿ ಉಳಿದುಕೊಂಡಿದ್ದ ಲಲಿತಾ ಅತ್ತೆಯೊಡನೆ ಕೆಲವು ಸಮಯ ಮಾತನಾಡುವ ಅವಕಾಶ ನನಗೆ ದೊರೆಯಿತು. ಅವರು ನನ್ನೊಡನೆ ಮ್ಯಾರಥಾನ್ನಿನ ಬಗ್ಗೆ ಹಂಚಿಕೊಂಡ ಕೆಲವು ವಿಚಾರಗಳು ಹೀಗಿವೆ.

- **ಇದುವರೆಗೆ ನೀವು ಎಷ್ಟು ಮ್ಯಾರಾಥಾನ್ನಲ್ಲಿ ಓಡಿದ್ದೀರಿ?**

- ನಾನು ಇಲ್ಲಿಯವರೆಗೆ 6 full marathons, 12 half marathons ಮತ್ತು ಎರಡು 50K ಓಟಗಳಲ್ಲಿ ಬಾಗವಹಿಸಿದ್ದೇನೆ. ನ್ಯೂಯಾರ್ಕ್ ನನ್ನ ಆರನೆಯ full marathon.

- **ನಿಮ್ಮ ಇಷ್ಟವಾದ ಮ್ಯಾರಥಾನ್ ಯಾವುದು?**

- ನ್ಯೂಯಾರ್ಕ್ ಮ್ಯಾರಥಾನ್ ನನಗೆ ತುಂಬ ಇಷ್ಟವಾಯಿತು. ಯಾಕೆಂದರೆ, ಮ್ಯಾರಥಾನ್ route ಅಷ್ಟು ಕಷ್ಟ ಅನಿಸಲಿಲ್ಲ. ಹಾಗೆಯೇ, 26.2 ಮೈಲು ಉದ್ದಕ್ಕೂ ಮಿಲಿಯನ್ನೂ ಹೆಚ್ಚು



ಜನರು ಪ್ರೋತ್ಸಾಹಿಸುತ್ತಿದ್ದರು. ದಾರಿಯುದ್ದಕ್ಕೂ ನಮಗೆ ಸಾಕಷ್ಟು ನೀರು ಮತ್ತು ತಿಂಡಿ ಕೊಟ್ಟರು.

- **ನಿಮ್ಮ practice schedule ಹೇಗಿತ್ತು?**

- ಯಾವುದೇ ಮ್ಯಾರಥಾನ್ ಆದರೂ 6 ತಿಂಗಳು practice ಬೇಕಾಗುತ್ತದೆ. ನಿಮ್ಮ physical fitness ಮೇಲೂ ಇದು ಅವಲಂಬಿಸಿದೆ.

- **ಮ್ಯಾರಥಾನ್ Training ಬಗ್ಗೆ ಸಲ್ಪ ತಿಳಿಸುತ್ತೀರಾ?**

- ಮೊದಲು ನಾನು ಒಂದು ಟುಟಜ ಓಡಲು ಪ್ರಾರಂಭಿಸಿದೆ. ಹಾಗೆಯೇ, ಒಂದು training group ಸೇರಿಕೊಂಡೆ. ಇದರಲ್ಲಿ ನಮಗೆ ಎಲ್ಲ ತರಹದ ತರಬೇತಿ ಸಿಕ್ಕಿತು. ವಾರದಲ್ಲಿ ಎಷ್ಟು ಓಡಬೇಕು, ಯಾವ ತರಹದ ಊಟಮಾಡಬೇಕು, ಎಷ್ಟು ನೀರು ಕುಡಿಯಬೇಕು, ಹಾಗೆಯೇ ಯಾವ ರೀತಿಯ shoe ಧರಿಸಬೇಕು ಎಂಬುದನ್ನು ತಿಳಿಸಿಕೊಟ್ಟರು. ಇದು ನನಗೆ ತುಂಬ ಸಹಾಯವಾಯಿತು.

- **ಮ್ಯಾರಥಾನ್ ಓಡಲು ನಿಮಗೆ ಇರುವ motivation ಏನು?**

- ತುಂಬ ಚಿಕ್ಕ ವಯಸ್ಸಿನ ನನ್ನ niece ಸಾವು, ನನ್ನ ಕೆಲವು ಹತ್ತಿರದ ಸ್ನೇಹಿತರ ಸಾವು, ನಮ್ಮ ಕುಟುಂಬದಲ್ಲಿ cancer ನಿಂದ ಹಲವರ ಸಾವು ಇವೆಲ್ಲ ನೆನೆದು ನನಗೆ ಆರೋಗ್ಯದ ಬಗ್ಗೆ ತುಂಬಾ ಚಿಂತೆ ಆಯಿತು. ನನಗೆ ಮ್ಯಾರಥಾನ್ ಓಡಲು motivate ಮಾಡಿತು.

- **ನನ್ನಂಥಹ ಮಕ್ಕಳಿ ಗೆ ನಿಮ್ಮ ಸಲಹೆ ಏನು?**

- ನಿಮ್ಮ ಕನಸುಗಳನ್ನು ಮುಟ್ಟುವ ಗುರಿಯನ್ನು ಇಟ್ಟುಕೊಳ್ಳಿ. ಮ್ಯಾರಥಾನ್ ಓಡಬೇಕೆಂದೇನೂ ಇಲ್ಲ. Cross Country ಸಹ ಓಡಬಹುದು. Try your best to achieve your dreams

ಲಕ್ಷ್ಮಿ ಕೊಲಾಲ್



## ಗಣಪತಿ ನಿನಗೆ ವಂದನೆ

ಓ ಗಾನಮಯನೇ ನಿನಗೇ ನಮನೆ
ಗಜಾಜಯನೇ ಜಯಕಾರದೀ ವಂದನೆ ..!

ಭಕ್ತರಲ್ಲಿ ಭಕ್ತಿಯಾ ಹುಚ್ಚೆಬ್ಬಿಸುತ್ತಾ
ಶಕ್ತರಾ ಶಕ್ತಿಯನ್ನು ಹೆಚ್ಚಿಸುತ್ತಾ
ಮುಕ್ತಿಯಾ ಮಾರ್ಗದರ್ಶನಾಗಿ ಮೆರೆವ
ಗಜರಾಜನೇ ನಿನಗೆ ಈ ವಂದನೆ..!

ಗೀತಗಾನಗಳ ರಸವನ್ನು ಭುಂಜಿಸುತಾ
ಜ್ಞಾನಪಾರಾಯಣಗಳನು ಆಲಿಸುವಾ
ಸಂಕಷ್ಟಹರಣನಾದ ಓ ಗಾನಪ್ರಣವಚೇತನನೆ,
ನಿನಗೆ ಈ ವಂದನೆ..ಶುಭನಂದನೆ!

ಅನುಬಂಧನಗಳ ಸೇತುವೆಗೆ ನೀ ಸ್ತಂಭವು ಗಜಾಗ್ರನೇ..
ಜನಜೀವನದಾ ಉನ್ನತಿಗೆ ನೀ ಶಿಲ್ಪಿಯು ಗಜರಾಜನೇ
ಅಮರಪ್ರೇಮವಾಗಲಿ ಆ ಮರಣರಹಿತ ಪಯಣವಾಗಲಿ
ಎಲ್ಲದಕು ನಿನಗೇ ಪ್ರಥಮಾ ಪ್ರಾರ್ಥನೆ ...!

ಮೋದದಿ ಮೋದಕವಾ ಸ್ವೀಕರಿಸುವೆ ನೀ..
ಸಕ್ಕರೆಯ ಅಭಿಷೇಕವನ್ನು ಅನುಭವಿಸುವೆ ನೀ.
ಸಿಹಿಕಡುಬಿನ ಹಾರವಾಗಲಿ ಮೃಷ್ಟಾನ್ನ ಭೋಜನವಾಗಲಿ
ಸಕಲವೂ ಪ್ರಿಯವೆನುವ ಓ ಗಣಪತಿಯೇ ನಿನಗೇ ಅರ್ಪಣೆ ..!



ಸುಪ್ತದೀಪ್ತಿ (ಜ್ಯೋತಿ ಮಹಾದೇವ್)

## ಕಂಬ

ಕಂಬವಾಗುವುದು ಸುಲಭವಲ್ಲ;
ಎಲ್ಲಿ, ಯಾರಿಗೆ, ಯಾವಾಗ, ಹೇಗೆ,
ಏನು ಮಾಡಿದೆನೆಂಬ ಅರಿವು
ಕುಂಕುಮ ಲೇಪಲೇಶ ಇಲ್ಲದಂತೆ
ನೆನಪಿನ ಗಂಧ ಅಂಟದಂತೆ
ನಿರ್ಮಮವಾಗಿ ಸಾಕಾರವಾಗಿ
ಆಧಾರವಾಗಿಯೂ ಅಲುಗಾಡದಂತೆ
ನಿಂತಲ್ಲೇ ನಿಂತಿರುವ ಕಂಬವಾಗಬೇಕು.

ಎತ್ತರದ ಒತ್ತಡದಲ್ಲೂ ಎತ್ತಿಹಿಡಿದು
ನೆತ್ತಿಯೊಳಗಿನ ತಂಪು ಆರದಂತಿರಬೇಕು
ಅರೆಘಳಿಗೆ ಆರಾಮ ವಿರಾಮವಿಲ್ಲದೆ
ಬಾಲಿಕೆಯ ಬಳುಕಿಗೆ ಬೆನ್ನಾಗಬೇಕು
ಹೆಗಲಿಗೋ ಬಗಲಿಗೋ ಬಾಗಿಕೊಂಡವರನ್ನು
ಬೆದರಿಸದೆ ತಲೆಪೂಸಿ ಸಂತೈಸಬೇಕು
ಒಳಗುಡಿಯ ಮೂರ್ತರೂಪಕೆ ಇಟ್ಟ ನೈವೇದ್ಯದಲ್ಲೇ
ಅಗುಳುಗಳ ಸಂಚಯಿಸಿ ಅಮೂರ್ತವಾಗಬೇಕು.
ಅಡಗುವವರಿಗೆ ಮರೆಯಾಗಬೇಕು
ಅಳುವವರನ್ನು ಮರೆಮಾಡಬೇಕು
ಸೂರು ಜಾರದಂತೆ, ನೆಲ ನುಲಿಯದಂತೆ
ಅವಿಚ್ಛಿನ್ನ ಸ್ಥಿರವಾಗಬೇಕು;
ಕಂಬದಾಟದಲ್ಲಿ ಮನೆಯಾಗಿ
ಮನೆಯಾಟದಲ್ಲಿ ಮರವಾಗಿ
ನೆರವೆಂದ ಉಸಿರಿಗಾಸರೆಯಾಗಿ
ಛೇದಕೆರವಾಗದುಳಿಯಬೇಕು.

ಬಟ್ಟೆತಂತಿಗೆ ಕತ್ತುಕೊಟ್ಟು ಗಾಳಿಗೆದೆಯಿಟ್ಟು
ಹರಡುವ ಹಾರಾಟಕ್ಕೆ ಬೇರಾಗಬೇಕು
ಹೊಯ್ದಾಟದ ತುಡಿತಗಳಿಗೆ ಮಿಡಿದರೂ
ಎದೆಬಡಿತ ಹದಗೆಡದಿರಬೇಕು
ಕುದಿಬಿಂದು ಮೀರಿದ ನೀರಿಳಿದರೂ
ತೇವಹೀರದೆ ಮೆದುವಾಗದೆ ಗೆಲುವಾಗಬೇಕು
ಗೆದ್ದಲು ಹುಳು ಒಳಗಿಳಿಯದಂತೆ
ಕಂಬವಾಗುವುದು ಸುಲಭವಲ್ಲ.

ಗುರಿಯಂತೆ ಗುರಿ ಸೇರುವ ಮಾರ್ಗವೂ ಶ್ರೇಷ್ಠವಾಗಿರಬೇಕು
• ಶಿವರಾಮ ಕಾರಂತ



# ಯುವ ಬೃಂದಾವನ

# Abhimana Thanda
# “Yuva Brindavana!”

Suhas Kumar

YuvaBrindavana, officially created during the Milana Thanda, continued its efforts to create and maintain interest amongst Kannada youth to become active members of Brindavana and partake in all of the activities offered by the organization. The four pillars which this suborganization stands on includes Culture, Service, Development, and Socialization. As a consequence to the increased number of astounding, overall Brindavanamembership, the number of potential YuvaBrindavana participation, current and future, grew substantially.

The numerous participation became evident during the first Abhimana Thanda event when a myriad of Yuva members actively volunteered to swiftly serve food to theVasanthotsava attendees. In addition to serving food, Brindavana offers numerous volunteering opportunities to its YuvaBrindavana participants. Such opportunities range from assisting with stage coordination to helping collectfunds for the designated beneficiary for the event’s charity.These volunteering opportunities were continuously offered over the course of the two years and utilized by the Middle School, High School, and College students interested in earning some volunteering hours to help boost their academic and service career while simultaneously enjoying spending time with their YuvaBrindavana friends.

Beyond the volunteering opportunities created by Brindavana for its youth, the YuvaBrindavana platform was inaugurated with the Yuva Hour platform. This is an activity in which YuvaBrindavana hosts some prevalent personalities in a particular specialty who are geared towards educating our youth about the various industries and schools of thought.

- The first Yuva Hour during the 2017 Ganeshotsava invited Goutam Jois and Pramod Thammiah to share their young professional achievements graduating from renown colleges and working for renown organizations

o Goutam Jois had started his campaign towards becoming the first Kannada Origin congressional representative, representing the 7th district of New Jersey as the Democratic entity opposing the Republican incumbent. He was able to share his phenomenal educational and career experiences carving out his path towards his campain, having studied in Georgetown and Harvard Law and worked for a Law Firm litigating for civil rights cases. that steered him in towards the direction.

o Pramod Thammiah started his fantastic youth studying Applied Mathematics in Harvard university an kickstarting his



career at Google as a product manager. He expanded his culture of thought by traveling for several months and buckled down for a several years to successfully co-found an Artificial Intelligence based company they were able to sell to Google. He shared the complexities and the rewards of creating his own business with the many entrepreneurially inclined Kannada Youth.

- The second Yuva Hour during the 2017 MakkalaDinacharane invited PreranaKatti, MukhundaShastry, Meghana Rao to educate the youth with careers in the Media and Digital Marketing industry

o PreranaKatti is into digital marketing with Nestle and used to be the creative head producing the Nestle advertisements behind the scenes as she slowly progressed towards the front of the screen. She was able to share her experiences on and off screen in an industry many people are nervous to dive into, but she was successful in.

o MukhundaShastryis a digital ad sales revenue specialist at the Oprah Winfrey Network and Discovery Communications. He has spent years managing pricing and inventory for OWN's digital properties while also selling cross-platform deals to large brands like Toyota, Amazon, and 20th Century Fox. He graduated of Emory University in 2015 and advocates for Indian-American content as part of the board of the American India Foundation

young professional chapter in NYC coordinating professional development events. He was able to share his experiences as a digital financing member of accredited TV networks.

- o Meghana Rao works as a research analyst for CB Insights, a company that collects data on private markets with a focus on Asia and the energy market. This is after her time in India and being acclaimed as India's top FinTech Journalist. She was able to share her experience as a journalist in a foreign country and the efforts it took to step outside of the comfort zone to be successful.

- The third Yuva Hour during the 2018 Vasanthotsava invited M. G. Prasad for the inaugural "Discover" platform geared towards providing the Yuva an opportunity to discover the history and the prowess of the nation all Kannadiggas are rooted to, India.

- o M. G. Prasad is a professor at Stevens Institute of Technology who is achieved as a Doctor for his amazing connection between sound and engineering. He was able to utilize his expertise in religious texts, engineering, and history to help the Yuva team conduct a series dwelling on the historic development of Astronomy, Science, Technology, Engineering, and Health.


With culture as an integral part of each of our event, we were able to exemplify our fourth pillar through the Holiday Party during December of 2017 with nearly 40 YuvaBrindavana members enjoying food, conversations, and a game of White Elephant. The fun continued a year later when we coordinated a Summer Hiking event with the New York Kannada Koota, where the 3 groups of Yuva trekked through a 5-mile hike through 450 feet of altitude participating in challenges throughout to attain triumph over the rest!

Brindavana is excited that they were able to carry forward the YuvaBrindavana platform to engage the future of Brindavana with service, development, socializing, and culture. With these efforts, we are hoping that the Yuva will carry forward the light so fiercely lit by the current and previous board members who have brought this organization to the glory it has achieved today!



ಕುಲ ಕುಲ ಕುಲವೆಂದು ಹೊಡೆದಾಡದಿರಿ.. ನಿಮ್ಮ ಕುಲದ ನೆಲೆಯನೆನಾದರೂ ಬಲ್ಲಿರಾ ಬಲ್ಲಿರ..

• **ಕನಕದಾಸರು**





# Live for the moment

**Swati Prasad**

Live for the Moment (LFTM) - Children's Leukemia and Lymphoma was established in 2015 to provide ongoing, passionate, patient-centered care for pediatric leukemia and lymphoma patients. As a nationally classified 501(c)(3) nonprofit organization, LFTM's goal is to transform the lives of pediatric patients by giving them a chance to live without significant financial burden of cancer treatment. The organization was inspired in the memory of a young man who was diagnosed with leukemia. By living in the moment, with love, courage, and compassion, he made an everlasting difference in those around him.

Since 2015, LFTM has raised over $38,000 to award grants to international beneficiaries including the Pediatric Hematology/Oncology Program at St. Peter's University Hospital and Robert Wood Johnson University Hospital Foundation in New Jersey and St. John's National Academy of Health Sciences in Bengaluru, India. These programs help those families with children dealing with the devastating effects of leukemia and lymphoma. One of our first recipients, the Bastida family, used the grant to pay for the treatment for their 6-year-old son diagnosed with Burkitt's lymphoma, which left him with multiple surgeries, blood transfusions and chemo therapy. Another recipient, the Lawrence family, used their grant to help with their exorbitant emergency room medical bills for their daughter diagnosed of Acute Lymphoblastic Leukemia.

We are looking forward to hosting our 5th Annual Benefit Gala in 2019 to continue providing support to those pediatric patients living with leukemia and lymphoma, such as the Bastidas and the Lawrences. We hope that more communities will consider joining us in this fight because, together, we can make a greater impact.

Sincerely,

**LFTM Board**







ಕತ್ತಿ ಪರದೇಶಿಯಾದರೆ ಮಾತ್ರ ನೋವೆ?/ ನಮ್ಮವರೆ ಹದಹಾಕಿ ತಿವಿದರದು ಹೂವೆ?

• ಕುವೆಂಪು






ಸಂಜೆಗೆಂಪ ನಾಚಿಸುತ ಬಂತು ದಾಳಿಂಬ ಬಿಂಬ ಒಂದು/ ಚಿನ್ನಿಸಕ್ಕರೆಯು ಬೆರೆಯೆ ಭರತಿ ಉಕ್ಕುವದು ಕ್ಷೀರಸಿಂಧು.
• ದ.ರಾ.ಬೇಂದ್ರೆ

# ಚಿತ್ರ ಬೃಂದಾವನ

ಹಸಿ ಹಾಲು ಕೂಡ ಬಿಸಿ ಬಂದ– ತಾ ಬಾಲ, ಕೃಷ್ಣನಾಗಿ/ ಕೆನೆಕೆನೆಯು ಎಂದು ಮುಖ ಚಾಚಿ ನಿಂದ ಆ ತಾಯಿ ಕೆನ್ನೆಗಾಗಿ.

• ದ.ರಾ.ಬೇಂದ್ರೆ

# ೨೦೧೭ ಗಣೇಶೋತ್ಸವ















ನನ್ನ ಬಾಳ ಬೇಗೆ ನಿನ್ನ ಬಗೆಯ ಮುಸುಕದಿರಲಿ, ಗೆಳೆಯ!/ ನನ್ನ ಬನ್ನ ನಿನ್ನ ಅನ್ನದಲ್ಲಿ ವಿಷವ ಬೆರೆಸದಿರಲಿ.
• **ಗೋಪಾಲಕೃಷ್ಣ ಅಡಿಗ**

# ೨೦೧೭ ಬೃಂದಾವನ ಮಕ್ಕಳೋತ್ಸವ


















ಸಾಕೆನಗೆ, ಸಾಕಯ್ಯ, ಸಾಮ್ರಾಜ್ಯ ಪೂಜೆ:/ ಸಿಡಿಮದ್ದಿನಕ್ಷತೆಗೆ ಗುಂಡು ಚರೆ ಲಾಜೆ!"
• **ಕುವೆಂಪು**

# ೨೦೧೭ ವನವಿಹಾರ











“ಮಲ್ಲಿಕಾರ್ಜುನನ ಶಿಖರದಲ್ಲಿ ಮೂಡಿತ್ತು ಚಂದ್ರಬಿಂಬ/ ಬಯಲಾಗಿ ನಿಂತ ನಿರ್ವಾಣಮೂರ್ತಿ ನಗುತಿತ್ತು ಬಾಯಿತುಂಬ.

• ದ.ರಾ.ಬೇಂದ್ರೆ

# ೨೦೧೮ ಬೃಂದಾವನ ಪಿಕ್ನಿಕ್













ಕೊನೆಗಾಣದೆ ಬಿಗಿಮಾಣದೆ ತಳುವಬೇಕು, ಗೆಳೆತನ;/ ತಳುವಬೇಕು; ನನಗೆ ನಿನಗೆ ಬರುವವರೆಗೆ ಕೊನೆದಿನ.

• **ಗೋಪಾಲಕೃಷ್ಣ ಅಡಿಗ**

# ವಸಂತೋತ್ಸವ ೨೦೧೭
















ಬಡತನದ ಗೊಬ್ಬರವನನುದಿನಂ ಹೀರಿ/ ಹಿಡಿಸದೋ ಸಾಮ್ರಾಜ್ಯ ಸಿರಿಯ ಕಸ್ತೂರಿ!
• ಕುವೆಂಪು

# ವಸಂತೋತ್ಸವ ೨೦೧೮








# ಬಿ.ಆರ್. ಛಾಯಾ ಅವರ ಸಂಗೀತ ಕಾರ್ಯಕ್ರಮ









> ನಡೆಯದ ನುಡಿಗಡಣ, ಮಾಡದ ಕಲಿತನ, ಚಿತ್ರದ ಸತಿಯ ಶೃಂಗಾರವದೇ ತಕ್ಕೆ ಪ್ರಯೋಜನ?
>
> • **ಅಕ್ಕ ಮಹಾದೇವಿ**

# ಚಿತ್ರ ಸಂಪುಟ


ನೀರು ನೆಲಗಳ ಕರುಳ ಬಳ್ಳಿ ಹರಿದೀತೆಂದು/ ಈ ಉಸಿರು ಕಂಡೀತು ಒಂದೆ ಬೆಳಕನ್ನಂದು.
• ದ.ರಾ.ಬೇಂದ್ರೆ

### ಗಣಪಾ, ನಿನಗೆ ಮೊದಲು ವಂದನೆ



• ಚಿತ್ರ ರಚನೆ: ಆದಿತಿ ಪ್ರಸಾದ್

### ಮುದ್ದು ಗಣಪ ಎಲ್ಲಿಗೆ ಹೊರಟೆ?




• ಚಿತ್ರ ರಚನೆ: ಸಾರ್ಥಕ್ ರಾವ್

### ಕುಣಿಕುಣಿದಾ ನಮ್ಮ ಕೃಷ್ಣಗಣಪಣ




• ಚಿತ್ರ ರಚನೆ: ಶ್ರೇಯಾ ರಾಘವೇಂದ್ರ


### ಗಾನ ಪುರಂದರ




• ಚಿತ್ರ ರಚನೆ: ಉಮಾ ರಮೇಶ

ತಳಿರತಳಿರ ತಳ್ಕೆಯಂತೆ ಮೃದುಲಮಧುರ ಜೀವನ;/ ಮಲರಮಲರ ಮಾಳ್ಕೆಯಂತೆ ಮನದ ಮನದ ಮಿದುತನ.
• **ಗೋಪಾಲಕೃಷ್ಣ ಅಡಿಗ**

**ಸುಮನೋಹರ ಕೃಷ್ಣಮಂದಿರ**



• ಚಿತ್ರ ರಚನೆ: ಆದಿತಿ ಪ್ರಸಾದ್

**ಬಾಲವನದಲ್ಲಿ ಕಾರಂತಜ್ಜ**



• ಚಿತ್ರ ರಚನೆ: ರಚನಾ ಆಚಾರ್ಯ



• ಚಿತ್ರ ರಚನೆ: ಪೂರ್ವಿಶೇಖರ್



• ಚಿತ್ರ ರಚನೆ: ಸಾರ್ಥಕ್ ರಾವ್

# ಕರ್ನಾಟಕದ ಹೆಮ್ಮೆ



ಹೋಗುತಿದೆ ಹಳೆಬಾಳು, ಹೊಸಬಾಳು ಬರುತಲಿದೆ,/ ಬರುತಲಿದೆ ಕುದಿಗೊಂಡು ತರುಣರೆದೆಗಳಲಿ.

• **ಕುವೆಂಪು**




# ಪ್ರಾಯೋಜಕರು

# ಬೃಂದಾವನ ಅಭಿಮಾನಿ ತಂಡಕ್ಕೆ ಶುಭಾಶಯಗಳು



ನಂದನ ವನದಿಂದ – ಮಲ್ಲಿಕ್, ಸಂಧ್ಯಾ , ಅನಘ & ಅದಿತಿ ಪ್ರಸಾದ್

# Best wishes from



Anitej Bharadwaj, Vinutha Sridhar, Anagha Bharadwaj,
Sridhara Suryanarayana

೧೫ ನೇ ವರ್ಷಕ್ಕೆ ಕಾಲಿಡುತ್ತಿರುವ
ಸುಮಧುರ ಸ್ನೇಹ ಸಮ್ಮಿಲನ

# ನಮ್ಮೀ ಬೃಂದಾವನಕ್ಕೆ ಹಾರ್ದಿಕ ಶುಭಾಶಯಗಳು



ಸಂತೃಪ್ತಿ ಕುಟುಂಬ ನಿವಾಸಿಗಳಾದ
ಉಷಾ, ಪ್ರಸನ್ನ, ಸುಹಾಸ್ ಕುಮಾರ್ ಹಾಗೂ
ಸ್ನೇಹ ಕುಮಾರ್ ಬ್ಯಾರಿ, ಮೈಕ್ ಬ್ಯಾರಿ
ಡಿಸೆಂಬರ್ 2018

ಬೃಂದಾವನ ಅಭಿಮಾನಿ ತಂಡಕ್ಕೆ

# ಶುಭಾಶಯಗಳು



ಸತ್ಯ, ದಿವ್ಯ, ಧನ್ವಿ & ಧ್ಯಾನ್

# Best wishes

## Brindavana Abhimani Team



**From Left to Right: Abhishek Rao, Vijayalaxmi Rao, Pranesh Rao, Sridhar Rao.**

# Best Wishes

To

## Brindavana Abhimani Team



**Dr. Basavaraj Hiremath**
**Mrs. Kalpana Hiremath**
**Dr. Karthik Hiremath**
**Mr. Vikas Hiremath**

# Best Wishes



Santhosh Kadlebele, Smitha,
Chaitanya and Prerana

# With Best Compliments

From

## Santosh Kashyap

Managing Director
Kashyap Constructions Pvt Ltd
Karnataka Bangalore- 560085

Tel 080-26699466
email - hoadmin@kashyapconstructions.com



ಕನ್ನಡಕ್ಕಾಗಿ ಕೈ ಎತ್ತು, ನಿನ್ನ ಕೈ ಕಲ್ಪವೃಕ್ಷವಾಗುವುದು

# ಬೃಂದಾವವನ ಅಭಿಮಾನಿ ತಂಡಕ್ಕೆ ಹಾರ್ದಿಕ ಶುಭಾಶಯಗಳು!!



ಭಾಸ್ಕರ್, ಹರಿತ, ನೇಹ ಮತ್ತು ಸಿರಿ

"ಹೂವಿನ ಸುಗಂಧ, ಹಣ್ಣಿನ ಸವಿಯಾಗಿ, ಅದರ ಬೀಜ ಮರವಾದಂದು, ಆತ್ಮಕ್ಕೆ ತಂಪೆರೆವುದು.

• ಪಿ.ಲಂಕೇಶ್



ಬೃಂದಾವನ
ಅಭಿಮಾನಿ ತಂಡಕ್ಕೆ ಮತ್ತು
ನ್ಯೂ ಜೆರ್ಸಿಯ
ಆತ್ಮೀಯ ಕನ್ನಡ ಸ್ನೇಹಿತರಿಗೆ
ನಮ್ಮ ಹಾರ್ದಿಕ
ಶುಭಾಶಯಗಳು !!!

Roopa, Umesh, Abhay,
Ajay & Munchkin




MY TAX FILER

Sudhir Pai, CPA PLLC
Certified Public Accountants




Sudhir Pai, CPA, EA

- Individual & Business Tax Filing
- Business Formations
- Bookkeeping & Payroll
- FBAR & Foreign Compliance
- IRS Amnesty Programs
- Sales / Franchise Tax
- Inheritance & Repatriation
- Tax Planning
- Wealth and Estate Planning

PEACE OF MIND mytaxfiler GUARANTEED

myStartUp CFO
As much CFO as you need

Inc. 5000

BBB ACCREDITED BUSINESS

940 Amboy Ave Suite #104, Edison, NJ, 08837
(732) 455-1504 / newjersey@mytaxfiler.com

# With Best Compliments from



**Srisai Gowda, Archana Gowda, Arnav Gowda, Anya Gowda**

Thanks to all NJ Kannadigas for supporting KCOB activities over the years. I'm honored to be part of KCOB board for last 6 six years. With all of your help together, Abhimani team has achieved new heights in KCOB history in all aspects and has set the bar high for a new incoming board.

**Our best wishes to new BOD and wish all Kannadigas a very Happy New Year 2019!**



**- Basavaraju Shivanna, Amulya Gowda and Ramya Jayaprakash**

ಸಜ್ಜನರ ಸಂಗವದು ಹೆಜ್ಜೇನ ಸವಿದಂತೆ, ದುರ್ಜನರ ಸಂಗ ಬಚ್ಚಲ, ಕೊಚ್ಚೆಯಂತಿಹದು ಸರ್ವಜ್ಞ

• **ಸರ್ವಜ್ಞ**

# Best compliments

from

**Aditya Kiran and Megha Kiran**



ಎಲ್ಲಾದರು ಇರು ಎಂತಾದರು ಇರು ಎಂದೆಂದಿಗೂ ನೀ
ಕನ್ನಡವಾಗಿರು ಕನ್ನಡವೇ ಸತ್ಯ ಕನ್ನಡವೇ ನಿತ್ಯ
ಕನ್ನಡ ಗೋವಿನ ಓ ಮುದ್ದಿನ ಕರು ಕನ್ನಡತನವೊಂದಿದ್ದರೆ
ನೀನಮ್ಮಗೆ ಕಲ್ಪತರು ಕನ್ನಡವೇ ಸತ್ಯ ಕನ್ನಡವೇ ನಿತ್ಯ !



**ಸತೀಶ್ ಹೊಸನಗರ**

## ನಮ್ಮೆಲ್ಲರ ನೆಚ್ಚಿನ ಬೃಂದಾವನ ಮತ್ತು ಎಲ್ಲ ಕನ್ನಡ ಸ್ನೇಹಿತರಿಗೆ ಪ್ರೀತಿ ಪೂರ್ವಕ ವಂದನೆಗಳೊಂದಿಗೆ



ಡಾ ಅಶೋಕ್ ಕಟ್ಟಿಮನಿ, ವನಮಾಲಾ,
ಅಮೂಲ್ಯ, ಅನನ್ಯ ಹಾಗೂ ಆದಿತ್ಯ


Best Compliments
from
Perth Amboy
Pediatric Dentistry & Orthodontics
Certified By
A B P D
AMERICAN BOARD OF PEDIATRIC DENTISTRY
Dr. Rekha Patil
DDS
State-of-the-art Kids Dental Clinic
We Treat Kids From Birth - To - 21 Years
Also, We Treat Kids With Special Needs
Call Now For Appointment
Most Major Insurances &
New Jersey Medicaid Accepted
New Patients & Walk-Ins Welcome
Tel : 732-884-5455
161 New Brunswick Ave, Ste 203, Perth Amboy, NJ – 08861
www.perthamboypediatricdentistry.com

**Best Wishes**

# NEW JERSEY MEDICAL EXPERTS

1740 Oak Tree Road, Edison, NJ 08820

Phone: 732-494-5000   Fax: 732-494-6698

www.njmedicalexperts.com  I Email: expertclinicians@gmail.com

**Services offered: Primary care services, Immunizations, Employee physicals, Vaccinations, Seep studies, Blood circulation check, Heart health studies, Kidney diseases, Lung diseases.**

Open six days a week including all Saturdays. (Appointment request can be made via website)



**Dr. Ram Bangalore,** MD

Board Certified in Internal Medicine & Pulmonary/ Sleep Medicine



**Dr. Anil K. Singh,** MD

Board certified in Internal Medicine & Nephrology/Hypertension

**With a combined experience of more than 30 years, we excel in taking care of all your health care needs. Our courteous staff and expert physicians wish you a happy and healthy life.**